بِسْمِ اللّٰہِ الرَّحْمٰنِ الرَّحِیْمِ نَحْمَدُہٗ وَنُصَلِّی عَلٰی رَسُوْلِہِ الْکَرِیْمِ وَعَلٰی عَبْدِہِ الْمَسِیْحِ الْمَوْعُوْدِ

وَلَقَدْ نَصَرَكُمُ اللّٰهُ بِبَدْرٍ وَّاَنْتُمْ اَذِلَّةٌ

ಕನ್ನಡ
ಬದರ್
ವಾರ ಪತ್ರಿಕೆ
WEEKLY BADAR QADIAN KANNADA

ವರ್ಷ: 04

ಸಂಚಿಕೆ: 49

ವಾರ್ಷಿಕ ಶುಲ್ಕ ರೂ.600/-

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

07 ಡಿಸೆಂಬರ್ 2023, 07 ಫತಹ್ 1402 ಹಿಜರಿ ಶಮ್‌ಸಿ,
22 ಜಮಾದಿಉಲ್ ಅವ್ವಲ್ 1445 ಹಿಜರಿ ಖಮರಿ.

## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ– **ಆಮೀನ್**

اَللّٰھُمَّ اَیِّدْ اِمَامَنَا بِرُوْحِ الْقُدُسِ
وَبَارِکْ لَنَا فِیْ عُمُرِہٖ وَاَمْرِہٖ۔

## ಅಲ್ಲಾಹನ ಉಪದೇಶ

وَرَاَ الْمُجْرِمُوْنَ النَّارَ
فَظَنُّوْٓا اَنَّھُمْ مُّوَاقِعُوْھَا
وَلَمْ یَجِدُوْا عَنْھَا مَصْرِفًا

(ಅಲ್ ಕಹಫ್: 54)

ಅಂದರೆ: ಅಪರಾಧಿಗಳು ನರಗಾಗ್ನಿಯನ್ನು ದರ್ಶಿಸುವರು. ಆಗ ಅವರು ಅದರೊಳಗೆ ಬೀಳಲಿರುವುದಾಗಿ ಮನಗಾಣುವರು. ಅದರಿಂದ ತಪ್ಪಿಸಿಕೊಳ್ಳುವ ಯಾವ ದಾರಿಯನ್ನೂ ಅವರು ಕಾಣಲಾರರು.

## ಪ್ರವಾದಿ ಮುಹಮ್ಮದ್(ಸ)ರವರ ಉಪದೇಶ

### ಅಲ್ಲಾಹನು ತನ್ನ ದಾಸರೊಡನೆ ತೋರುವ ಕ್ಷಮಾಪಣೆ ಪಾಪಮುಚ್ಚುವಿಕೆ

**(2441)** ಹಝ್‌ರತ್ ಅಬ್ದುಲ್ಲ ಬಿನ್ ಉಮರ್(ರ) ವರದಿ ಮಾಡುತ್ತಾರೆ: ನಾನು ರಸೂಲುಲ್ಲಾಹ್(ಸ) ನುಡಿಯುವುದನ್ನು ಕೇಳಿದ್ದೇನೆ. ಅಲ್ಲಾಹನು ಸತ್ಯವಿಶ್ವಾಸಿಯನ್ನು ಎಷ್ಟು ಸಾಮಿಪ್ಯ ಒದಗಿಸುತ್ತಾನೆ ಎಂದರೆ ಆತನ ಮೇಲೆ ತನ್ನ ಕರುಣೆಯ ನೆರಳನ್ನು ಹಾಯಿಸುತ್ತಾನೆ ಮತ್ತು ಅವನ ಪಾಪಗಳನ್ನು ಮುಚ್ಚುತ್ತಾನೆ ಮತ್ತು ಕೇಳುವನು, ನಿನಗೆ ಆ ಪಾಪದ ಬಗ್ಗೆ ಅರಿವಿದೆಯೇ? ನಿನಗೆ ಅ ಒಂದು ಪಾಪದ ಬಗ್ಗೆ ತಿಳಿದೆದೆಯೇ? ಅದಕ್ಕೆ ಅವನು ಉತ್ತರಿಸುವನು. ಓ ನನ್ನ ಪ್ರಭು! ಹೌದು. ಹೀಗೆ ಅವನು ತನ್ನ ಎಲ್ಲಾ ಪಾಪಗಳನ್ನು ಒಪ್ಪಿಕೊಂಡ ಮೇಲೆ ಮತ್ತು ಆ ಸತ್ಯವಿಶ್ವಾಸಿ ತನ್ನ ಮನಸ್ಸಿನಲ್ಲಿ ನಾನು ಈಗ ನಶಿಸಿಹೋಗುವೆನು ಎಂದು ಭಾವಿಸುತ್ತಾನೆ. ಆಗ ಸರ್ವಶಕ್ತನಾದ ಅಲ್ಲಾಹನು ಹೇಳುವನು. ನಾನು ಲೋಕದಲ್ಲಿ ಈ ನಿನ್ನ ಪಾಪಗಳನ್ನು ರಹಸ್ಯವಾಗಿರಿಸಿದ್ದೆ, ಮತ್ತು ಇಂದು ಸಹ ನಿನ್ನ ಪಾಪಗಳನ್ನು ರಹಸ್ಯವಾಗಿರಿಸುತ್ತೇನೆ. ನಂತರ ಆತನಿಗೆ ಆತನ ಸತ್ಕರ್ಮಗಳ ಪುಸ್ತಕ ನೀಡಲಾಗುವುದು. ಮತ್ತು ಯಾರು ಅವಿಶ್ವಾಸಿಗಳು ಮತ್ತು ಕಪಟವಿಶ್ವಸಿಗಳಾಗಿರುತ್ತಾರೆ, ಅವರೆಲ್ಲರೂ ಸಾಕ್ಷಿ ನೀಡುವರು. ತನ್ನ ಪ್ರಭುವಿನ ಮೇಲೆ ಸುಳ್ಳು ಹೇಳುವವರು ಇವರಾಗಿದ್ದಾರೆ. ಎಚ್ಚರವಿರಲಿ, ದುಷ್ಕರ್ಮಿಗಳ ಮೇಲೆ ಅಲ್ಲಾಹನ ಶಾಪವಿದೆ. **(ಸಹೀಹ್ ಬುಖಾರಿ, ಸಂಪುಟ–4, ಕಿತಾಬುಲ್ ಮಝಾಲಿಮ್, ಮುದ್ರಣ 2018, ಖಾದಿಯಾನ)**

### ಪವಿತ್ರ ಖುರ್‌ಆನ್

ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನುಡಿಯುತ್ತಾರೆ: ಪವಿತ್ರ ಖುರ್‌ಆನ್ ವಜ್ರವೈಢೂರ್ಯಗಳ ಒಂದು ನಿಧಿಯಾಗಿದೆ. ಆದರೆ ಜನರು ಅದನ್ನು ಅರಿತಿಲ್ಲ.

*(ಮಲ್‌ಫೂಝಾತ್ ಸಂಪುಟ–2, ಪುಟ–344)*

ನೆನಪಿಡಿ, ಈಮಾನ್ ಎಂಬುದು ಮುಮಿನ್ (ವಿಶ್ವಾಸಿ) ಮತ್ತು ಅಲ್ಲಾಹನ ನಡುವೆ ಇರುವ ಒಂದು ರಹಸ್ಯವಾಗಿದೆ
ಅದನ್ನು ಸೃಷ್ಟಿಗಳಲ್ಲಿ ವಿಶ್ವಾಸಿಯನ್ನು ಹೊರತುಪಡಿಸಿ ಯಾರಿಗೂ ತಿಳಿಯಲಾಗುವುದಿಲ್ಲ

ನಮ್ಮ ಸ್ನೇಹಿತರು ಸರ್ವಶಕ್ತನಾದ ಅಲ್ಲಾಹನೊಂದಿಗಿನ ಈ ರಹಸ್ಯವನ್ನು ಸಹಾಬರವರಂತೆಯೇ ರಚಿಸಿಕೊಳ್ಳಬೇಕೆಂದು ನಾನು ಬಯಸುತ್ತೇನೆ

## ಸಯ್ಯದುನಾ ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು

ಈ ಸುಳ್ಳು ಜೀವನವು ಭಸ್ಮಗೊಂಡು ಅದರ ಜಾಗದಲ್ಲಿ ಶಾಶ್ವತವಾದ ಮತ್ತು ಸಾಂತ್ವನದಾಯಕವಾದ ಹೊಸ ಜೀವನವು ಪ್ರಾರಂಭವಾಗುವವರೆಗೂ ಒಬ್ಬ ಮುಮಿನ್ (ವಿಶ್ವಾಸಿಯು) ತನ್ನ ಆರಾಧನೆಯಿಂದ ದಣಿಯಬಾರದು ಅಥವಾ ಸೋಮಾರಿಯಾಗಿರಬಾರದು ಮತ್ತು ಎಲ್ಲಿಯ ತನಕ ಈ ತಾತ್ಕಾಲಿಕ ಪ್ರಾಪಂಚಿಕ ಜೀವನದ ಉರಿತ ಮತ್ತು ವೇದನೆಯು ದೂರಗೊಂಡು ಈಮಾನ್‌ನಲ್ಲಿ (ವಿಶ್ವಾಸದಲ್ಲಿ) ಆಸ್ವಾದ ಮತ್ತು ಆತ್ಮದಲ್ಲಿ ಸಂತೃಪ್ತಿ ಹಾಗೂ ವಿಶ್ರಾಂತಿ ಸೃಷ್ಟಿಸಿಕೊಳ್ಳುವುದಿಲ್ಲವೋ ದಿಟವಾಗಿಯು, ಒಬ್ಬ ವ್ಯಕ್ತಿಯು ಈ ಸ್ಥಿತಿಯನ್ನು ತಲುಪುವವರೆಗೆ, ಉತ್ತಮ ಹಾಗೂ ಪರಿಪೂರ್ಣ ಈಮಾನ್ (ವಿಶ್ವಾಸವು) ಸೃಷ್ಟಿಯಾಗುವುದಿಲ್ಲ ಎಂದು ಅರ್ಥಮಾಡಿಕೊಳ್ಳಿ. ಈ ಕಾರಣಕ್ಕಾಗಿ, ಸರ್ವಶಕ್ತನಾದ ಅಲ್ಲಾಹನು ಇಲ್ಲಿ ಹೇಳಿರುವುದೇನೆಂದರೆ, ನೀವು ಪರಿಪೂರ್ಣ ವಿಶ್ವಾಸದ ಮಟ್ಟವನ್ನು ತಲುಪುವವರೆಗೆ ಮತ್ತು ಎಲ್ಲಾ ಮುಸುಕುಗಳು ಮತ್ತು ಅಂಧಾಕಾರದ ಮುಸುಕುಗಳನ್ನು ತೆಗೆದುಹಾಕುವವರೆಗೆ ಮತ್ತು ನಾನು ಮೊದಲಿನಂತೆ ಇಲ್ಲ, ಬದಲಿಗೆ ಈಗ ಹೊಸ ದೇಶವಿದೆ, ಹೊಸ ಭೂಮಿ ಇದೆ, ಹೊಸ ಆಕಾಶವಿದೆ ಮತ್ತು ನಾನೂ ಸಹ ಯಾವುದೊ ಹೊಸ ಜೀವಿಯಾಗಿದ್ದೇನೆ ಎಂಬ ಅರಿವಾಗುವವರೆಗೆ ನೀವು ಆರಾಧನೆಯನ್ನು ಮುಂದುವರಿಸಬೇಕು. ಈ ಎರಡನೇ ಜೀವನವನ್ನು ಸೂಫಿಗಳು ಬಖಾ (ಶಾಶ್ವತ ಬದುಕು) ಎಂದು ಕರೆಯುತ್ತಾರೆ. ಒಬ್ಬ ವ್ಯಕ್ತಿಯು ಈ ಮಟ್ಟವನ್ನು ತಲುಪಿದಾಗ, ಸರ್ವಶಕ್ತನಾದ ಅಲ್ಲಾಹನ ದೈವಾತ್ಮವು ಅವನಲ್ಲಿ ಇರಿಸಲಾಗುತ್ತದೆ. ದೇವದೂತರು ಅವನ ಮೇಲೆ ಅವತರಿಸುತ್ತಾರೆ. ಈ ರಹಸ್ಯದಿಂದಾಗಿ ಹಝ್‌ರತ್ ಪೈಗಂಬರ್(ಸ)ರು ಹಝ್‌ರತ್ ಅಬೂಬಕರ್(ರ) ಅವರ ಬಗ್ಗೆ: ಯಾರಾದರು ಮೃತದೇಹವನ್ನು ಭೂಮಿಯ ಮೇಲೆ ನಡೆಯುತ್ತಿರುವುದನ್ನು ನೋಡಲು ಬಯಸಿದರೆ ಅವರು ಹಝ್‌ರತ್ ಅಬೂಬಕರ್(ರ) ಅವರನ್ನು ನೋಡಿ ಎಂದು ಹೇಳಿರುವರು. ಮತ್ತು ಅಬೂಬಕರ್(ರ) ಅವರ ಶ್ರೇಯಾಂಕವು ಅವರ ಬಾಹ್ಯ ಕ್ರಿಯೆಗಳಿಂದ ಮಾತ್ರವಲ್ಲದೆ ಅವರ ಹೃದಯದಲ್ಲಿ ಏನಿದೆ ಎಂಬುದರ ಮೂಲಕವು ಇದೆ.

ನೆನಪಿಡಿ, ಈಮಾನ್ (ವಿಶ್ವಾಸವು) ಎಂಬುದು ವಿಶ್ವಾಸಿ ಮತ್ತು ಅಲ್ಲಾಹನ ನಡುವೆ ಇರುವ ರಹಸ್ಯವಾಗಿದೆ ಮತ್ತು ನಂಬಿಕೆಯುಳ್ಳವರನ್ನು ಹೊರತುಪಡಿಸಿ ಜೀವಿಗಳಲ್ಲಿ ಯಾರಿಗೂ ತಿಳಿಯುವುದಿಲ್ಲ. **ಅನಾ ಇಂದಝ್ಝುನ್ನಿ ಅಬ್ದಿ ಬೀ** ನ ವಾಸ್ತವತೆಯು ಇದೇ ಆಗಿದೆ. ಕೆಲವೊಮ್ಮೆ ಸತ್ಯ ಮತ್ತು ದೈವಿಕ ಜ್ಞಾನದಿಂದ ವಂಚಿತರಾಗಿರುವವರು, ಒಬ್ಬ ವಿಶ್ವಾಸಿಯ ಬಗ್ಗೆ ಆತನು ಸರ್ವಶಕ್ತನಾದ ಅಲ್ಲಾಹನೊಂದಿಗೆ ಹೊಂದಿರುವ ಸಂಬಂಧದ ಜ್ಞಾನದ ಕೊರತೆಯಿಂದಾಗಿ, ಅವನ (ವಿಶ್ವಾಸಿಯ) ಕೆಲವು ಸ್ಥಿತಿಗಳನ್ನು ಆಶ್ಚರ್ಯದಿಂದ ಕಾಣುತ್ತಾನೆ ಉದಾಹರಣೆಗೆ ಅವರ ಜೀವನಾಂಶದ ವಿಷಯಗಳಲ್ಲಿ ಬೆರಗುಗೊಂಡು ಆಶ್ಚರ್ಯವನ್ನು ವ್ಯಕ್ತಪಡಿಸುತ್ತಾನೆ. ಕೆಲವೊಮ್ಮೆ ಈ ಅಶ್ಚರ್ಯವು ಅವನನ್ನು ಕಿಡಿಗೇಡಿತನ ಮತ್ತು ದಾರಿ ತಪ್ಪಿಸುತ್ತದೆ, ಏಕೆಂದರೆ ಅವರ ದೃಷ್ಟಿಯು ತಮ್ಮದೇ ಆದ ಸೀಮಿತ ಕಾರಣಗಳ ಮೇಲೆ ಆಧರಿತವಾಗಿರುತ್ತದೆ. ಮತ್ತು ಅವರು (ವಿಶ್ವಾಸಿಯು) ಸರ್ವಶಕ್ತನಾದ ಅಲ್ಲಾಹನೊಂದಿಗೆ ಹೊಂದಿರುವ ರಹಸ್ಯದ ಬಗ್ಗೆ ಅವರು ತಿಳಿದಿಲ್ಲ. ಅವರು ಅಜ್ಞಾನಿಯಾಗಿದ್ದಾರೆ. ನಮ್ಮ ಸ್ನೇಹಿತರು ಸರ್ವಶಕ್ತನಾದ ಅಲ್ಲಾಹನೊಂದಿಗಿನ ಈ ರಹಸ್ಯವನ್ನು ಸಹಾಬರವರಂತೆಯೇ ರಚಿಸಿಕೊಳ್ಳಬೇಕೆಂದು ನಾನು ಬಯಸುತ್ತೇನೆ.

**(ಮಲ್‌ಫೂಝಾತ್, ಸಂಪುಟ–1, ಪುಟ–499, ಪ್ರಕಟಿತ 2018 ಖಾದಿಯಾನ್)**

### *128 ನೇ ಜಲ್ಸಾ ಸಾಲಾನ ಖಾದಿಯಾನ್ 29, 30, 31 ಡಿಸೆಂಬರ್ 2023ರಂದು ಆಯೋಜಿಸಲಾಗುವುದು*

ಸಯ್ಯದನಾ ಹುಝೂರ್ ಅನ್ವರ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್‌ರವರು 128ನೇ (ವಾರ್ಷಿಕ ಸಮ್ಮೇಳನ) ಜಲ್ಸಾ ಸಾಲನ ಖಾದಿಯಾನಿಗೆ 29, 30 ಮತ್ತು 31ನೇ ಡಿಸೆಂಬರ್ 2023 (ಶುಕ್ರವಾರ, ಶನಿವಾರ ಮತ್ತು ಭಾನುವಾರ) ದ ದಿನಾಂಕಗಳ ಅನುಮತಿ ನೀಡಿದ್ದಾರೆ. ಎಲ್ಲಾ ಸದಸ್ಯರು ಇಂದಿನಿಂದಲೇ ದುಆ ಮಾಡಬೇಕಾಗಿ ಹಾಗೂ ಈ ಸಮ್ಮೇಳನದಲ್ಲಿ ಭಾಗವಹಿಸಲು ವಿನಂತಿ. ಅಲ್ಲಾಹನು ನಮಗೆಲ್ಲ ಈ ಸಮ್ಮೇಳನದಲ್ಲ ಭಾಗಿಯಾಗಲು ತೌಫೀಕ್ ನೀಡಲೀ. ಜಲ್ಸಾ ಸಾಲಾನ ಪ್ರತಿಯೊಂದು ವಿಷಯದಲ್ಲೂ ಅನುಗ್ರಹದಾಯಕವಾಗಲಿ ಅದೇ ರೀತಿ ಶುದ್ಧ ಆತ್ಮಗಳ ಮಾರ್ಗದರ್ಶನಕ್ಕೆ ಕಾರಣವಾಗಲಿ ಎಂದು ದುಆ ಮಾಡುತ್ತಾಯಿರಿ. **ಜಝಾಕುಮಲ್ಲಾಹ್.**

**(ನಾಝಿರ್ ಇಸ್ಲಾಹ್–ವ–ಇರ್‌ಶಾದ್ ಖಾದಿಯಾನ್)**

لَآ اِلٰهَ اِلَّا اللّٰهُ مُحَمَّدٌ رَّسُوْلُ اللّٰه

**"ಮುಜ್‌ಕೋ ಕಾಫಿರ್ ಕಹ್‌ಕೆ ಅಪ್ನೆ ಕುಫ್ರ್ ಪರ್ ಕರ್ತೆ ಹೈಂ ಮುಹರ್ ಎ ತೋ ಹೈ ಸಬ್ ಶಕಲ್ ಉನ್‌ಕೀ ಹಮ್ ತೋ ಹೈಂ ಆಯಿನಾದಾರ್॥"**

ಅನುವಾದ: ನನ್ನನ್ನು ಅವಿಶ್ವಾಸಿ (ಕಾಫಿರ್) ಎಂದು ಘೋಷಿಸಿ ಸ್ವಯಂ ತನ್ನ ಅವಿಶ್ವಾಸವನ್ನು ದೃಡೀಕರಿಸುತ್ತಿದ್ದಾರೆ. ಇವೆಲ್ಲವು ಅವರ ಕಾರಸ್ತಾನವಾಗಿದೆ, ನವು ಕನ್ನಡಿಯಾಗಿದ್ದೇವೆ ಅಷ್ಟೇ.

**(ಹಝ್ರತ್ ಮಸೀಹ್ ಮೌಊದ್(ಅಲೈಹಿಸ್ಸಲಾಮ್))...............(10)**

## ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಮೇಲೆ "ಮುನ್ಸಿಫ್" ಹೈದರಾಬಾದ್ ಪತ್ರಿಕೆ ಮಾಡಿರುವ ಆಕ್ಷೇಪಣೆಗಳಿಗೆ ಉತ್ತರ.

ಕಳೆದ ಒಂಬತ್ತು ಸಂಚಿಕೆಗಳಿಂದ, ನಾವು ಅಹ್ಮದಿಯಾ ಜಮಾತ್‌ನ ಸಂಸ್ಥಾಪಕರಾದ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್ ಖಾದಿಯಾನಿ, ವಾಗ್ದತ್ತ ಮಸೀಹ್ ಮತ್ತು ಮಹದಿ ಅಲೈಹಿಸ್ಸಲಾಮ್ ಅವರ ಬಗ್ಗೆ "ಮುನ್ಸಿಫ್" ಹೈದರಾಬಾದ್ ಪತ್ರಿಕೆಯ ಆಕ್ಷೇಪಣೆಗಳಿಗೆ ಪ್ರತಿಕ್ರಿಯಿಸುತ್ತಿದ್ದೇವೆ. ಆಕ್ಷೇಪಣೆಗಳ ವಿವರಗಳು ಮತ್ತು ಅವುಗಳ ಹಿನ್ನೆಲೆಯನ್ನು ಆಗಸ್ಟ್ 17 ರ ಸಂಚಿಕೆಯಲ್ಲಿ ನೋಡಬಹುದು. 'ಮುನ್ಸಿಫ್'ನ ಆಕ್ಷೇಪಣೆಗಳಲ್ಲಿ ಒಂದು ಆಕ್ಷೇಪಣೆ ಹೀಗಿದೆ:

"ಮಿರ್ಝಾ ಗುಲಾಮ್ ಅಹ್ಮದ್ ಖಾದಿಯಾನಿ ಅವರು ಮುಜದ್ದಿದ್, ಮುಹದ್ದಿಸಿಯ್ಯತ್ (ಆವಿಷಕಾರಕ), ಮಹದಿವಿಯ್ಯತ್, ಮಸೀಹಿಯ್ಯತ್, ಝಿಲ್ಲಿ ನಬೀ, ಬರೂಝಿ ನಬೀ, ಹಖೀಖಿ ನಬೀ, ಝಿಲ್ ಮುಹಮ್ಮದ್(ಸ) ಮತ್ತು ಭಗವಂತ ಆಗಿರುವ ಬಗ್ಗೆ ವಾದವನ್ನು ಮಮಡಿದ್ದಾರೆ. ಅದೇನೇ ಇದ್ದರೂ, ಅದನ್ನು ಅನುಸರಿಸುವವರು ತಮ್ಮನ್ನು ಅಹ್ಮದಿ ಮುಸ್ಲಿಮರು ಎಂದು ಕರೆದುಕೊಳ್ಳಲು ಇಷ್ಟಪಡುತ್ತಾರೆ ಮತ್ತು ಇತರೆ ಮುಸ್ಲಿಮರು ಅವರನ್ನು ಹೀಗೆಯೇ ಯೋಚಿಸಬೇಕು ಎಂದು ಭಾವಿಸುತ್ತಾರೆ."

ಇಂದು ನಾವು ಝಿಲ್ಲಿ (ಸಾದೃಶ್ಯರೂಪ) ನಬಿ ಮತ್ತು ಬುರೂಝಿ (ತದ್ರೂಪ) ನಬಿಯ ಬಗ್ಗೆ ಅವರ ಆಕ್ಷೇಪಣೆಗೆ ಉತ್ತರಿಸುತ್ತೇವೆ. ಹಿಂದಿನ ಸಂಚಿಕೆಯಲ್ಲಿ, ನಾವು ಝಿಲ್ ಮುಹಮ್ಮದ್(ಸ) ಎಂಬ ಆಕ್ಷೇಪಣೆಗೆ ಉತ್ತರಿಸಿದ್ದೇವೆ ಮತ್ತು ಉಮ್ಮತ್ತಿನ ಅನೇಕ ಹಿರಿಯ ವಿದ್ವಾಂಸರು ಇಮಾಮ್ ಮಹದಿ(ಅ) ಅವರನ್ನು ಹಝ್ರತ್ ಪೈಗಂಬರ್(ಸ) ಅವರ ಪರಿಪೂರ್ಣ ಝಿಲ್(ಸಾದೃಶ್ಯ ರೂಪ) ಎಂದು ಪರಿಗಣಿಸಿದ್ದಾರೆ ಎಂದು ಹಲವಾರು ಉಲ್ಲೇಖಗಳಿಂದ ಸಾಬೀತುಪಡಿಸಿದ್ದೇವೆ, ಪರಿಪೂರ್ಣ ಝಿಲ್, ಪರಿಪೂರ್ಣ ಬುರೂಝ್, ಪರಿಪೂರ್ಣ ಅಭಿವ್ಯಕ್ತಿ, ಹಝ್ರತ್ ಪೈಗಂಬರ್(ಸ) ರ ಎರಡನೇ ಆವೃತ್ತಿ ಮತ್ತು ಹಝ್ರತ್ ಪೈಗಂಬರ್(ಸ) ಅವರ ಪರಿಪೂರ್ಣ ತದ್ರೂರೂಪ ಎಂದು ಸಾಬೀತುಪಡಿಸಲಾಗಿದೆ. ಇದರೊಂದಿಗೆ, ಝಿಲ್ಲಿ ನಬಿ ಮತ್ತು ಬುರೂಝಿ ನಬಿಯ ಸಮಸ್ಯೆಯನ್ನು ಸಹ ಸಂಪೂರ್ಣವಾಗಿ ಸ್ಪಷ್ಟಪಡಿಸಲಾಗಿದೆ ಮತ್ತು ಪರಿಹರಿಸಲಾಗಿದೆ. ಝಿಲ್ಲಿ ನಬುವ್ವತ್ ಹಾಗೂ ಬುರೂಝಿ ನಬುವ್ವತ್‌ನ ವಾಸ್ತವತೆ ಏನೆಂದರೆ ಇಮಾಮ್ ಮಹದಿ ಅವರು ಹಝ್ರತ್ ಪೈಗಂಬರ್(ಸ) ಅವರ ಸಾದೃಶ್ಯರೂಪವಾಗಿರುವರು, ಅವರನ್ನು ಹೋಲುವವರಾಗಿರುವರು, ಝಿಲ್ ಹಾಗೂ ಬುರೂಝ್ ಆಗಿರುವರು. ಉಮ್ಮತ್ತಿನ ಹಿರಿಯ ವಿದ್ವಾಂಸರು ಇಮಾಮ್ ಮಹದಿಯವರನ್ನು ಕಂಡು ಹಝ್ರತ್ ಪೈಗಂಬರ್(ಸ) ಸ್ವತಃ ಪುನಃ ಲೋಕಕ್ಕೆ ಆಗಮಿಸಿರುವರೋ ಎಂದು ಭಾವಿಸಬಹುದು ಎಂದು ಹೇಳಿದ್ದಾರೆ.

ಈಗ ನಾವು ಸಯ್ಯದುನಾ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್ ಖಾದಿಯಾನಿ, ವಾಗ್ದತ್ತ ಮಸೀಹ್ ಮತ್ತು ಮಹದಿ ಅಲೈಹಿಸ್ಸಲಾಮ್ ಅವರ ಕೆಲವು ಅಧ್ಯಾಪನೆಗಳನ್ನು ಪ್ರಸ್ತುತಪಡಿಸುತ್ತೇವೆ. ಇದರಿಂದ ಝಿಲ್ಲಿ ಮತ್ತು ಬುರೂಝಿ ನಬುವ್ವತ್‌ನ (ಪ್ರವಾದಿತ್ವದ) ಸಮಸ್ಯೆ ಸ್ಪಷ್ಟವಾಗುತ್ತದೆ ಮತ್ತು ಅದರ ನೈಜತೆ ಸಂಪೂರ್ಣವಾಗಿ ಬಹಿರಂಗಗೊಳ್ಳುತ್ತದೆ.

### ಹಝ್ರತ್ ಮಸೀಹ್ ಮೌಊದ್(ಅ) ಅವರು ಹಝ್ರತ್ ಪೈಗಂಭರ್(ಸ) ಅವರ ಸಾದೃಶ್ಯರೂಪ ಹಾಗೂ ತದ್ರೂಪವಾಗಿದ್ದಾರೆ ಏಕೆಂದರೆ ಸರ್ವಶಕ್ತನಾದ ಅಲ್ಲಾಹನು ಹಝ್ರತ್ ಮಸೀಹ್ ಮೌಊದ್(ಅ) ಅವರ ಹೆಸರು ಮುಹಮ್ಮದ್ ಮತ್ತು ಅಹ್ಮದ್ ಎಂದಿರಿಸಿದ್ದಾನೆ

ಖಾತಮುನ್ನಬಿಯ್ಯೀನರಾದ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ನಂತರ ನಾನು ನಬಿ ಎಂದು ಕರೆಯಲ್ಪಡುವುದರಿಂದ ಯಾವುದೇ ಆಕ್ಷೇಪ ಉಂಟಾಗಲಾರದು. ಮತ್ತು ಅದರಿಂದ ಖತ್‌ಮಿಯ್ಯತ್ತಿನ ಮುದ್ರೆ ಮುರಿಯಲ್ಪಡುವುದೂ ಇಲ್ಲ. ಏಕೆಂದರೆ ನಾನು ಪದೇ ಪದೇ ಹೇಳಿರುವೆನು **ವ ಆಖರೀನ ಮಿನ್‌ಹುಮ್ ಲಮ್ಮಾ ಯಲ್‌ಹಖೂ ಬಿಹಿಮ್** ಅವರೊಂದಿಗೆ ಇಷ್ಟರವರೆಗೆ ಸೇರಿಲ್ಲದ ಅವರ ಪೈಕಿಯ ಇನ್ನೊಂದು ಜನತೆಯಲ್ಲೂ (ಪವಿತ್ರ ಖುರ್‌ಆನ್ 12:4) ಎಂಬ ಪವಿತ್ರ ಖುರ್‌ಆನ್ ವಚನದ ಪ್ರಕಾರ ನಾನು ಬರೂಝೀ (ತದ್ರೂಪ) ಪ್ರಕಾರ ಅದೇ ಖಾತಮುಲ್ ಅಂಬಿಯಾ ಆಗಿರುವೆನು. ಇಂದಿನಂದ ಇಪ್ಪತ್ತು ವರ್ಷಗಳ ಹಿಂದೆ ಬರಾಹೀನೆ ಅಹ್ಮದಿಯಾದಲ್ಲಿ ನನ್ನ ಹೆಸರು ಮುಹಮ್ಮದ್ ಮತ್ತು ಅಹ್ಮದ್ ಎಂದು ಅಲ್ಲಾಹನು ಇರಿಸಿದ್ದಾನೆ. ನನ್ನನ್ನು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಅದೇ ಅಸ್ತಿತ್ವ ಎಂದು ಹೇಳಿದ್ದಾನೆ. ನನ್ನ ನುಬುವ್ವತ್ ಕಾರಣದಿಂದ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಖಾತಮುನ್ನಬಿಯ್ಯೀನ್ ಆಗಿರುವುದಕ್ಕೆ ಯಾವುದೇ ಭಂಗವುಂಟಾಗುವುದಿಲ್ಲ. ಏಕೆಂದರೆ ನೆರಳು ಅದರ ಮೂಲ ವಸ್ತುವಿನಂದ ಬೇರೆ ಅಲ್ಲ. ನಾನು ನೆರಳಿನ ರೂಪದಲ್ಲಿ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಆಗಿದ್ದೇನೆ. ಈ ಕಾರಣದಿಂದ ಖಾತಮುನ್ನಬಿಯ್ಯೀನ್ ಮುದ್ರೆ ಮುರಿಯಲ್ಪಡುವುದಿಲ್ಲ. ಏಕೆಂದರೆ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ನುಬುವ್ವತ್ ಮುಹಮ್ಮದ್ ತನಕ ಸೀಮಿತವಾಯಿತು. ಎಂದರೆ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೇ ನಬಿ ಆಗಿರುತ್ತಾರೆ. ಬೇರೆ ಯಾರೂ ಅಲ್ಲ. ನಾನು ಬರೂಝಿ (ತದ್ರೂಪ) ರೂಪದಲ್ಲಿ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಆಗಿರುವಾಗ ಮತ್ತು ನುಬುವ್ವತ್‌ಗೆ ಎಲ್ಲ ಪರಿಪೂರ್ಣತೆಗಳು ಮುಹಮ್ಮದೀ ನುಬುವ್ವತ್‌ನೊಂದಿಗೆ ನನ್ನ ನೆರಳಿನ ಕನ್ನಡಿಯಲ್ಲಿ ಪ್ರತಿಬಿಂಬಿಸುವುದರಿಂದ ಬೇರೆ ಒಬ್ಬನು ನುಬುವ್ವತ್ ವಾದ ಮಾಡಿದ ಹಾಗೆ ಆಗಲಾರದು.

### ಮಹದಿಯು ಹಝ್ರತ್ ಪೈಗಂಬರ್(ಸ) ಅವರತೆಯೇ ಖಲಕ್ ಮತ್ತು ಖುಲ್‌ಕ್‌ನಲ್ಲಿ ಒಂದೇ ಬಣ್ಣವನ್ನು ಹೊಂದಿರುತ್ತಾನೆ

ನನ್ನನ್ನು ಅಂಗೀಕರಿಸುವುದಿಲ್ಲವಾದರೆ ನೀವು ತಿಳಿದುಕೊಳ್ಳಿರಿ ನಿಮ್ಮ ಹದೀಸುಗಳಲ್ಲಿ ಬರೆದಿದೆ, ಮಹ್‌ದಿ ಮೌಊದ್ ಖಲಕ್ (ಸೃಷ್ಟಿಯಲ್ಲೂ) ಖುಲ್‌ಕ್‌ನಲ್ಲೂ (ಸ್ವಭಾವ ಗುಣದಲ್ಲೂ) ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಸಮಾನವಾಗಿರುವರು. ಮಹ್‌ದಿಯ ಹೆಸರು ಅವರ ಹೆಸರಿನ ಹಾಗೆಯೇ ಇರುವುದು. ಎಂದರೆ ಅವರ ಹೆಸರು ಮುಹಮ್ಮದ್ ಮತ್ತು ಅಹ್ಮದ್ ಎಂದಾಗಿರುವುದು. ಮತ್ತು ಅವರು ಅಹ್ಲೆ ಬೈತ್‌ಗೆ ಸೇರಿದವರಾಗುವರು.  ಕೆಲವು ಹದೀಸುಗಳಲ್ಲಿ ಹೀಗೆ ಬರೆದಿದೆ: ನನ್ನಿಂದ ಆಗುವನೆಂದು. ಇದು ಗಾಢವಾದ ಒಂದು ಸೂಚನೆ ನೀಡುತ್ತದೆ. ಮಹ್‌ದಿ ಆಧ್ಯಾತ್ಮಿಕವಾಗಿ ಆ ಪ್ರವಾದಿಯಿಂದಲೇ ಹೊರಬಂದವರು ಎಂದು. ಮತ್ತು ಆ ಪ್ರವಾದಿಯ ಆತ್ಮದ ರೂಪವಾಗಿರುವರು ಎಂದು. ಇದನ್ನು ಸೂಚಿಸುವ ಗಮನಾರ್ಹ ಅಂಶವೇನೆಂದರೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ತನ್ನ ಸಂಬಂಧವನ್ನು ಯಾವ ಶಬ್ದಗಳಲ್ಲಿ ಸೂಚಿಸಿರುವರೋ ಉದಾಹರಣೆಗೆ ಇಬ್ಬರ ಹೆಸರನ್ನೂ ಒಂದಾಗಿ ಮಾಡಿದ್ದಾರೆ. ಇವುಗಳಿಂದ ಸ್ಪಷ್ಟವಾಗಿ ತಿಳಿಯುವುದೇನೆಂದರೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ವಾಗ್ದತ್ತ ವ್ಯಕ್ತಿಯನ್ನು ತನ್ನ ಹಾಗೆ ಇರುವವನು ಎಂದು ಹೇಳಿದ್ದಾರೆ.

### ಬುರೂಝ್ (ತದ್ರೂಪ) ಆಗಲು ಸಂಬಂಧಿಕನಾಗಿರಬೇಕು ಎಂದು ಅವಶ್ಯಕತೆ ಇಲ್ಲ

ಒಬ್ಬನು ಇನ್ನೊಬ್ಬನಿಗೆ ತದ್ರೂಪಿಯಾಗಲು ಪುತ್ರ ಅಥವಾ ಮೊಮ್ಮಗನಾಗಬೇಕಾಗಿಲ್ಲ. ಆಧ್ಯಾತ್ಮಿಕವಾಗಿ ತದ್ರೂಪಿಯಾಗಿರುವವನು ಅವರಿಂದ ಹೊರಬಂದವನಾಗಿರಬೇಕು. ಆದಿಯಿಂದಲೇ ಪರಸ್ಪರ ಆಕರ್ಷಣೆ ಮತ್ತು ಸಂಬಂಧ ಅವರ ಮಧ್ಯೆ ಇರಬೇಕು.

### ಮಹದಿಯನ್ನು ಹಝ್ರತ್ ಪೈಗಂಬರ್(ಸ) ಅವರ ದೈಹಿಕ ಸಂಬಂಧಿ ಎಂದು ಘೋಷಿಸುವುದು ಪೈಗಂಬರ್(ಸ)ರ ವೈಭವಕ್ಕೆ ವಿರುದ್ಧವಾಗಿದೆ.

ತದ್ರೂಪಿಯನ್ನು (ಬರೂಝ್) ಅರ್ಥ ಮಾಡಲು ಆವಶ್ಯಕವಾದ ಈ ಹೇಳಿಕೆಯನ್ನು ಬಿಟ್ಟುಬಿಡುವುದು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ವೈಭವಕ್ಕೆ ವಿರುದ್ಧವಾಗಿದೆ. ಅದರ ಬದಲಾಗಿ ನನ್ನ ಮೊಮ್ಮಗನಾಗುವನು ಎಂದು ಹೇಳುವುದು ತಪ್ಪಾಗುವುದು. ಏಕೆಂದರೆ ಮೊಮ್ಮಗನಿಗೆ ತದ್ರೂಪಿಯಾಗುವ ಯಾವ ಸಂಬಂಧವಿದೆ.

### ರಕ್ತಸಂಬಂಧದ ಅವಶ್ಯಕತೆ ಇರುತ್ತಿದ್ದರೆ ಮೊಮ್ಮಗನ ಬದಲು ಮಗನ ಭವಿಷ್ಯವಾಣಿ ನುಡಿಯಬೇಕಾಗಿತ್ತು

ತದ್ರೂಪಿಯಾಗಲು ಈ ಸಂಬಂಧ ಆವಶ್ಯಕವಾದರೆ ಕೇವಲ ಮೊಮ್ಮಗನೆಂಬ ನ್ಯೂನತೆ ಭರಿತ ಸಂಬಂಧ ಏಕೆ ಪುತ್ರನೆಂಬ ಸಂಬಂಧ ಆವಶ್ಯಕವಾಗಿತ್ತು. ಆದರೆ ಅಲ್ಲಾಹನು ತನ್ನ ವಚನದಲ್ಲಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಯಾರದಾದರೂ ಪಿತನಲ್ಲ ಎಂದು ಹೇಳಿದ್ದಾನೆ. ಅದರೊಂದಿಗೆ ತದ್ರೂಪಿ ಆಗಮಿಸುವ ಸಮಾಚಾರ ನೀಡಿದ್ದಾನೆ.

### ಬುರೂಝ್ (ತದ್ರೂಪ) ಸರಿಯಾಗಿಲ್ಲದಿದ್ದರೆ, ಮಸೀಹರ ಸಹಾಬಗಳು ಹಝ್ರತ್ ಪೈಗಂಬರ್(ಸ)ರ ಸಹಾಬರಾಗಿರಲು ಹೇಗೆ ಸಾಧ್ಯ?

ತದ್ರೂಪಿ ಆಗಮಿಸುವುದು ಸತ್ಯವಲ್ಲವಾದರೆ ವ ಆಖರೀನ ಮಿನ್‌ಹುಮ್ ಎಂಬ ಪವಿತ್ರ ಖುರ್‌ಆನ್ ವಚನದಲ್ಲಿ ವಾಗ್ದತ್ತ ಮಹಾನುಭಾವರ ಸಂಗಡಿಗರಿಗೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸಹಾಬರ ಸ್ಥಾನ ನೀಡಿದುದೇಕೆ. ತದ್ರೂಪಿಯ ಆಗಮನವನ್ನು ನಿರಾಕರಿಸಿದರೆ ಈ ಪವಿತ್ರ ಖುರ್‌ಆನ್

*(ಪುಟ ಸಂಖ್ಯೆ-11 ರಲ್ಲಿ ಮುಂದುವರಿಸಲಾಗಿದೆ)*

# ಖುತ್‌ಬ ಜುಮುಅ

"ನಿಮಗೆ ಪ್ರಿಯವಾದವುಗಳಿಂದ ದೇವಮಾರ್ಗದಲ್ಲಿ ವ್ಯಯಿಸುವ ವರೆಗೆ ಮೋಕ್ಷದ ಕಡೆಗೆ ಕೊಂಡೊಯ್ಯುವ ನೈಜ ಒಳಿತನ್ನು ಖಂಡಿತ ಗಳಿಸಲಾರಿರಿ." (ಹಝ್ರತ್ ಮಸೀಹ್ ಮೌಊದ್ (ಅಲೈಹಿಸ್ಸಲಾಮ್))

ಲೌಕಿಕವಾದಿಯ ದೃಷ್ಟಿಯಲ್ಲಿ ಇದನ್ನು ಮನವರಿಕೆ ಮಾಡುವುದು ಕಷ್ಟ. ಆದರೆ ಯಾರ ವಿಶ್ವಾಸ ಸುದೃಢವಾಗಿರುತ್ತದೋ ಅವರು ಈ ತ್ಯಾಗದ ಪ್ರತಿಫಲವಾಗಿ ಅಲ್ಲಾಹನ ಅನುಗ್ರಹವನ್ನು ಕಾಣುತ್ತಾರೆ.

ನಾನು ಈ ಶ್ರೀಮಂತರನ್ನು ಇದರಿಂದ ಪಾಠ ಕಲಿಯಲು ಮತ್ತು ಅವರ ತ್ಯಾಗದ ಗುಣಮಟ್ಟವನ್ನು ಹೆಚ್ಚಿಸುವಂತೆ ಕೇಳುತ್ತೇನೆ.

ಅಲ್ಲಾಹನು ಯಾರಿಗೂ ಸಾಲಗಾರನಾಗಿ ಇರುವುದಿಲ್ಲ

ಅಲ್ಲಾಹನು ಹೊತ್ತಿಸಿದ ಈ ದೀಪವನ್ನು ಈ ಎದುರಾಳಿಗಳು ಊದುವುದರಿಂದ ನಂದಿಹೋಗುವುದೇ? ಅವರು ಎಷ್ಟು ಶ್ರಮಿಸುವುದಾದರೂ ಪರಾಜಯ ಮತ್ತು ಸೋಲೇ ವಿರೋಧಿಗಳಿಗೆ ವಿಧಿಸಿದೆ ಮತ್ತು ಜಮಾಅತ್ ಲೋಕದ ಎಲ್ಲ ಮೂಲೆಗಳಲ್ಲೂ ತ್ಯಾಗಗಳ ಉದಾಹರಣೆಗಳನ್ನು ನೆಲೆನಿಲ್ಲಿಸುತ್ತಾ ಅಭಿವೃದ್ಧಿ ಹೊಂದುತ್ತಾ ಇದೆ.

ತಬ್ಲೀಗ್ ಮಾಡಿಕೊಂಡು ಜಮಾಅತನ್ನು ವರ್ಧಿಸುವುದು ಮತ್ತು ಲೋಕದ ಪ್ರತಿಯೊಂದು ದೇಶದಲ್ಲಿ ಅಹ್ಮದಿಯಾ ಜಮಾಅತಿನ ಮೂಲಕ ಇಸ್ಲಾಮಿನ ಧ್ವಜವನ್ನು ಹಾರಿಸುವುದೇ ತಹ್ರೀಕ್ ಜದೀದಿನ ಉದ್ದೇಶವಾಗಿತ್ತು. ಒಟ್ಟಿನಲ್ಲಿ, ಅಹ್ಮದಿಯಾ ಜಮಾಅತಿನ ಮೂಲಕ ಇಸ್ಲಾಮಿನ ಮಡಿಲಲ್ಲಿ ಬಂದ ಈ ಜನರೇ ನಂಬಿಕೆ, ದೃಢವಿಶ್ವಾಸ ಮತ್ತು ತ್ಯಾಗದ ಉದಾಹರಣೆಗಳನ್ನು ಸ್ಥಾಪಿಸಲು ಪ್ರಯತ್ನಿಸುವವರಾಗಿದ್ದಾರೆ.

ಆರಂಭದಲ್ಲಿ ಹಝ್ರತ್ ಮುಸ್ಲಿಹ್ ಮೌಊದ್(ರ) ಈ ಯೋಜನೆಯನ್ನು ಹತ್ತು ವರ್ಷಗಳಿಗೆ ವರ್ಧಿಸಿದ್ದರು. ಮೂರು ವರ್ಷಗಳಿಗೆ ಮಾಡಿದ್ದನ್ನು ಹತ್ತು ವರ್ಷಗಳಿಗೆ ಮಾಡಿದ್ದರು. ಅನಂತರ ಹತ್ತು ವರ್ಷಗಳು ಪೂರ್ತಿಯಾಗಿ ಅದರ ಸಕರಾತ್ಮಕ ಪರಿಣಾಮಗಳು ಪ್ರಕಟಗೊಂಡಾಗ ಹೆಚ್ಚಿನ ತ್ಯಾಗಗಳನ್ನು ಮಾಡುವವರ ಅಭಿಲಾಷೆ ಪ್ರಕಾರ ಅದನ್ನು ಇನ್ನಷ್ಟು ವರ್ಧಿಸಿದರು. ಹೀಗೆ ಇದು ಸ್ಥಾಯಿಯಾದ ಯೋಜನೆಯಾಯಿತು.

ಇಂದು, ಹತ್ತೊಂಬತ್ತು ವರ್ಷಗಳು ಪೂರ್ಣಗೊಂಡ ನಂತರ, ನಾನು ಆರನೇ ದಫ್ತರ್‌ನ ಪ್ರಾರಂಭವನ್ನು ಘೋಷಿಸುತ್ತೇನೆ. ಈಗ ಹೊಸದಾಗಿ ಸೇರ್ಪಡೆಗೊಂಡವರು ಮತ್ತು ಹೊಸದಾಗಿ ಹುಟ್ಟಿದ ಮಕ್ಕಳು ಅಥವಾ ಮೊದಲು ಯಾವುದೇ ಕಚೇರಿಯಲ್ಲಿಲ್ಲದವರು ಆರನೇ ದಫ್ತರ್‌ಗೆ ಸೇರುತ್ತಾರೆ.

ಅಲ್ಲಾಹನು ಈ ಎಲ್ಲ ತ್ಯಾಗಗಳನ್ನು ಮಾಡುವವರ ಸಂಪತ್ತು ಮತ್ತು ಸಂತಾನಗಳಲ್ಲಿ ಅನುಗ್ರಹ ಸುರಿಸಲಿ. ಈ ಜನರು ಹಿಂದಿಗಿಂತ ಹೆಚ್ಚಾಗಿ ತ್ಯಾಗಗಳನ್ನು ಮಾಡುವವರಾಗಲಿ.

ತೆಹ್ರೀಕ್ ಜದೀದ್‌ನ ಮೂಲ ಉದ್ದೇಶಗಳಲ್ಲಿ ತಬ್ಲೀಗ್ ಕೂಡ ಒಂದು ಉದ್ದೇಶವಾಗಿದೆ

ಪೆಲಸ್ತೀನಿಯರನ್ನು ಯಾವಾಗಲೂ ದುಆವಿನಲ್ಲಿ ನೆನಪಿಡಿರಿ. ಅವರನ್ನು ಮರೆಯಬೇಡಿರಿ. ಪೀಡನೆಯಿಂದ ತತ್ತರಿಸುತ್ತಿರುವ ಮಹಿಳೆಯರು ಮತ್ತು ಮಕ್ಕಳನ್ನು ಅಲ್ಲಾಹನು ರಕ್ಷಿಸಲಿ.

**ತೆಹ್ರೀಕ್ ಜದೀದ್‌ನ 89ನೇ ವರ್ಷದಲ್ಲಿ ಪ್ರಪಂಚಾದ್ಯಂತ ಅಹ್ಮದಿಯರ ಆರ್ಥಿಕ ತ್ಯಾಗಗಳ ಪ್ರಸ್ತಾವನೆ ಮತ್ತು 90ನೇ ವರ್ಷ ಆರಂಭದ ಘೋಷಣೆ**

ಈ ವರ್ಷ, ಸರ್ವಶಕ್ತನಾದ ಅಲ್ಲಾಹನ ಅನುಗ್ರಹದಿಂದ, ಜಾಗತಿಕ ಅಹ್ಮದಿಯಾ ಮುಸ್ಲಿಮ್ ಜಮಾತ್‌ಗೆ ಪ್ರಪಂಚದಾದ್ಯಂತ 17.20 ಮಿಲಿಯನ್ ಪೌಂಡ್‌ಗಳನ್ನು ದಾನ ಮಾಡಲು ಸಾಧ್ಯವಾಯಿತು. ಅಲ್ಹಮ್ದುಲಿಲ್ಲಾಹ್ ಮತ್ತು ಪ್ರಪಂಚದ ಆರ್ಥಿಕ ಪರಿಸ್ಥಿತಿಗಳ ಹೊರತಾಗಿಯೂ, ಇದು ಕಳೆದ ವರ್ಷಕ್ಕಿಂತ ಏಳು ನೂರ ಐವತ್ತು ಸಾವಿರ ಪೌಂಡ್‌ಗಳು ಹೆಚ್ಚಾಗಿದೆ.

**ವಿವಿಧ ರಾಷ್ಟ್ರಗಳ ನಿಷ್ಠಾವಂತ ಅಹ್ಮದಿಯರ ಹಾಗೂ ನವ ಅಹ್ಮದಿಯರ ಸಾಂಪತ್ತಿಕ ದಾನಗಳ ವಿಶ್ವಾಸ ವರ್ಧಕ ಪ್ರಸ್ತಾವನೆ**

**ಪಂಚಮ ಖಲೀಫರ ಅನುಗ್ರಹದಾಯಕ ಕಾಲಘಟ್ಟದಲ್ಲಿ ಎರಡನೇಯ ದಫ್ತರ್‌ನ ಸ್ಥಾಪನೆ ಹೀಗೆ ಒಟ್ಟಿನಲ್ಲಿ ತೆಹ್ರೀಕ್ ಜದೀದ್‌ನ ಆರನೇಯ ದಫ್ತರ್‌ನ ಉದ್ಘಾಟನೆ**

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಇಸ್ಲಾಮಾಬಾದ್ (ಯು.ಕೆ) ಯ **'ಮಸ್ಜಿದ್ ಮುಬಾರಕ್'** ನಿಂದ **03–11–2023** ರಂದು ನೀಡಿದ **ಖುತ್‌ಬ ಜುಮುಅ**

اَشْهَدُ اَنْ لَّا اِلٰهَ اِلَّا اللّٰهُ وَحْدَهٗ لَا شَرِيْكَ لَهٗ وَاَشْهَدُ اَنَّ مُحَمَّدًا عَبْدُهٗ وَرَسُوْلُهٗ
اَمَّا بَعْدُ فَاَعُوْذُ بِاللّٰهِ مِنَ الشَّيْطٰنِ الرَّجِيْمِ- بِسْمِ اللّٰهِ الرَّحْمٰنِ الرَّحِيْمِ-
اَلْحَمْدُ لِلّٰهِ رَبِّ الْعٰلَمِيْنَ○ الرَّحْمٰنِ الرَّحِيْمِ○ مٰلِكِ يَوْمِ الدِّيْنِ○ اِيَّاكَ نَعْبُدُ وَاِيَّاكَ نَسْتَعِيْنُ○
اِهْدِنَا الصِّرَاطَ الْمُسْتَقِيْمَ○ صِرَاطَ الَّذِيْنَ اَنْعَمْتَ عَلَيْهِمْ ۙ غَيْرِ الْمَغْضُوْبِ عَلَيْهِمْ وَلَا الضَّآلِّيْنَ○
لَنْ تَنَالُوا الْبِرَّ حَتّٰى تُنْفِقُوْا مِمَّا تُحِبُّوْنَ ۬ؕ وَمَا تُنْفِقُوْا مِنْ شَيْءٍ فَاِنَّ اللّٰهَ بِهٖ عَلِيْمٌ

ನಿಮಗೆ ಪ್ರೀಯವಾದವುಗಳಿಂದ (ದೈವ ಮಾರ್ಗದಲ್ಲಿ) ವ್ಯಯಿಸು ವರೆಗೆ ನೀವು (ಪರಿಪೂರ್ಣ) ಒಳಿತನ್ನು ಗಳಿಸಲಾರಿರಿ. ನೀವು ಖರ್ಚು ಮಾಡುವುದನ್ನೆಲ್ಲ ಅಲ್ಲಾಹನು ಚೆನ್ನಾಗಿ ಬಲ್ಲವನಾಗಿದ್ದಾನೆ.

ಅಲ್ಲಾಹನ ಸಂತೃಪ್ತಿಯನ್ನು ಪಡೆಯಲು ನೀವು ಇಷ್ಟಪಡುವದನ್ನು ಅಲ್ಲಾಹನ ಮಾರ್ಗದಲ್ಲಿ ವಿನಿಯೋಗಿಸಿದಾಗ ಮಾತ್ರ ಉತ್ತಮ ಗುಣಮಟ್ಟವನ್ನು ಸಾಧಿಸಲಾಗುತ್ತದೆ ಎಂದು ಅಲ್ಲಾಹನು ಈ ಆಯತ್‌ನಲ್ಲಿ ಸ್ಪಷ್ಟಪಡಿಸಿದನು. ಇದನ್ನು ವಿವರಿಸುತ್ತಾ, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಒಂದು ಸ್ಥಳದಲ್ಲಿ ಹೀಗೆ ಹೇಳಿದರು: ನಿಮಗೆ ಪ್ರಿಯವಾದವುಗಳಿಂದ ದೇವಮಾರ್ಗದಲ್ಲಿ ವ್ಯಯಿಸುವ ವರೆಗೆ ಮೋಕ್ಷದ ಕಡೆಗೆ ಕೊಂಡೊಯ್ಯುವ ನೈಜ ಒಳಿತನ್ನು ಖಂಡಿತ ಗಳಿಸಲಾರಿರಿ.

(ಫತಹ್ ಇಸ್ಲಾಮ್, ರೂಹಾನಿ ಖಝಾಇನ್, ಸಂಪುಟ–3, ಪುಟ–

38)

ಮತ್ತೊಂದೆಡೆ ಅವರು ಹೇಳುತ್ತಾರೆ: ಸಂಪತ್ತಿನೊಂದಿಗೆ ಪ್ರೀತಿ ಸಲ್ಲದು. **ಲನ್ ತನಾಲುಲ್ ಬಿರ್ರ ಹತ್ತಾ ತುನ್‌ಫಿಖೂ ಮಿಮ್ಮಾ ತುಹಿಬ್ಬೂನ್** ನಿಮಗೆ ಪ್ರಿಯವಾದವುಗಳಿಂದ ದೇವಮಾರ್ಗದಲ್ಲಿ ವ್ಯಯಿಸುವ ವರೆಗೆ ನೀವು ಒಳಿತನ್ನು ಖಂಡಿತವಾಗಿಯೂ ಗಳಿಸಲಾರಿರಿ ಎಂದು ಅಲ್ಲಾಹನು ಹೇಳುತ್ತಾನೆ. (ತಫ್ಸೀರ್ ಹಝ್ರತ್ ಮಸೀಹ್ ಮೌಊದ್(ಅ), ಸಂಪುಟ–2, ಪುಟ–130)

ವ್ಯರ್ಥ ಮತ್ತು ನಿರುಪಯುಕ್ತ ವಸ್ತುಗಳನ್ನು ಖರ್ಚು ಮಾಡುವುದರಿಂದ ಯಾವನೇ ವ್ಯಕ್ತಿಯು ಒಳಿತು ಮಾಡಿದ್ದಾಗಿ ವಾದಿಸಲು ಸಾಧ್ಯವಲ್ಲ. ಒಳಿತಿನ ಬಾಗಿಲು ಇಕ್ಕಟ್ಟಾಗಿರುವುದಾಗಿದೆ. ನಿರುಪಯುಕ್ತ ವಸ್ತುಗಳನ್ನು ಖರ್ಚು ಮಾಡುವುದರಿಂದ ಯಾರೂ ಇದರಲ್ಲಿ ಪ್ರವೇಶಿಸಲು ಸಾಧ್ಯವಲ್ಲ ಎಂಬ ಸಂಗತಿಯನ್ನು ನೆನಪಿಡಬೇಕು. ಏಕೆಂದರೆ **ಲನ್ ತನಾಲುಲ್ ಬಿರ್ರ ಹತ್ತಾ ತುನ್‌ಫಿಖೂ ಮಿಮ್ಮಾ ತಹಿಬ್ಬೂನ್** (ಆಲಿ ಇಮ್ರಾನ್: 93) ಎಷ್ಟರ ತನಕ ಅತ್ಯಂತ ಪ್ರಿಯವಾದ ವಸ್ತುಗಳನ್ನು ಖರ್ಚು ಮಾಡುವುದಿಲ್ಲವೋ ಅಷ್ಟರ ತನಕ ಅಲ್ಲಾಹನ ಪ್ರಿಯ ದಾಸನೆಂಬ ಸ್ಥಾನ ಲಭಿಸದು. ಕಷ್ಟತೆಗಳನ್ನು ಅನುಭವಿಸಲು ತಯಾರಲ್ಲವೆಂದಾದರೆ ಮತ್ತು ನಿಜವಾದ ಒಳಿತನ್ನು ಮಾಡಲು ತಯಾರಲ್ಲವೆಂದಾದರೆ ಹೇಗೆ ವಿಜಯ ಮತ್ತು ಯಶಸ್ಸು ಗಳಿಸಲು ಸಾಧ್ಯ? ಶ್ರೇಷ್ಠ ಸಹಾಬಿಯರಿಗೆ ಈ ಪದವಿ ಉಚಿತವಾಗಿ ಲಭಿಸಿತ್ತೇ? ಪ್ರಾಪಂಚಿಕ ಬಿರುದುಗಳನ್ನು ಪಡೆಯಲು ಒಬ್ಬರು ಎಷ್ಟು ಖರ್ಚು ಮತ್ತು ತೊಂದರೆಗಳನ್ನು ಸಹಿಸಿಕೊಳ್ಳಬೇಕಾಗುತ್ತದೆ. ನಂತರ ಎಲ್ಲೋ ಹೋಗಿ, ನಿಮಗೆ ಮನಸ್ಸಿಗೆ ಶಾಂತಿ ನೀಡದ ಸಣ್ಣ ಬಿರುದನ್ನು ಪಡೆಯಲಾಗುತ್ತದೆ." ಎಂತಹ ಬಿರುದು ಲಭಿಸುತ್ತದೆ ಅಂದರೆ ಅದರಿಂದ ಮನಸ್ಸಿಗೆ ಶಾಂತಿಯನ್ನು ಲಭಿಸುತ್ತದೆ ಎಂದಲ್ಲ ಆದರೆ ಒಬ್ಬ ವ್ಯಕ್ತಿಯು ಅದಕ್ಕಾಗಿ ಬಹಳ ಶ್ರಮಿಸುತ್ತಾನೆ. "ನಂತರ ಆಲೋಚಿಸಿ ರಝಿಯಲ್ಲಾಹು ಅನ್‌ಹುಮ್ ಎಂಬ ಬಿರುದು ಮನಸ್ಸಿಗೆ ಸಾಂತ್ವನ ಮತ್ತು ಹೃದಯದ ತೃಪ್ತಿ ಮತ್ತು ಭಗವಂತನ ಅನುಮೋದನೆಯ ಸಂಕೇತವಾಗಿದೆ, ಅದು ಅಷ್ಟು ಸುಲಭವಾಗಿ ಲಭಿಸುವುದೇ?" ಸಹಾಬರವರಿಗೆ(ರ), "ಸರ್ವಶಕ್ತನಾದ ಅಲ್ಲಾಹನ ಸಂಪ್ರೀತಿಯು ಕಾರಣವಾಗಿದೆ. ತಾತ್ಕಾಲಿಕವಾದ ಕಷ್ಟತೆಗಳನ್ನು ಸಹಿಸುವ ವರೆಗೆ ಯಥಾರ್ಥ ಸಂತೋಷಕ್ಕೆ ಕಾರಣವಾಗುವಂತಹ ಅಲ್ಲಾಹನ ಸಂಪ್ರೀತಿಯನ್ನು ಗಳಿಸಲು ಸಾಧ್ಯವಲ್ಲ. ಅಲ್ಲಾಹನನ್ನು ಮೋಸಗೊಳಿಸಲು ಸಾಧ್ಯವಲ್ಲ. ಅಲ್ಲಾಹನ ಸಂಪ್ರೀತಿಯನ್ನು ಗಳಿಸಲಿಕ್ಕಾಗಿ ಕಷ್ಟತೆಗಳ ಪರಿವೆ ಮಾಡದವನು ಅನುಗ್ರಹೀತನು. ಏಕೆಂದರೆ ಸ್ಥಾಯಿಯಾದ ಸಂತುಷ್ಟಿ ಮತ್ತು ಸ್ಥಿರವಾದ ಆರಾಮದ ಬೆಳಕು ತಾತ್ಕಾಲಿಕ ತೊಂದರೆಯ ನಂತರ ಸತ್ಯವಿಶ್ವಾಸಿಗೆ ಲಭಿಸುತ್ತದೆ. (ಮಲ್‌ಫೂಝಾತ್, ಸಂಪುಟ–1, ಪುಟ–75–76, 1984 ಆವೃತ್ತಿ)

ಆದ್ದರಿಂದ ಸಂಪತ್ತನ್ನು ಖರ್ಚು ಮಾಡುವುದರ ಬಗ್ಗೆಗಿನ ಈ ಅರಿವನ್ನು ಅಲ್ಲಾಹನ ನಿರ್ದೇಶನ ಪ್ರಕಾರ ಹಝ್ರತ್ ಮಸೀಹ್ ಮೌಊದ್(ಅ) ನಮ್ಮಲ್ಲಿ ಉಂಟುಮಾಡಲು ಬಯಸುತ್ತಾರೆ. ಈ ಸಂಗತಿಯನ್ನು ಈ ಜಮಾಅತ್ ಅರಿತಿದೆ ಮತ್ತು ತನ್ನ ಸಂಪತ್ತನ್ನು ದೀನಿನ ಮಾರ್ಗದಲ್ಲಿ ಖರ್ಚು ಮಾಡಲಿಕ್ಕಾಗಿ ಮುಂದಿರಿಸಿದೆ ಎಂಬುದು ಜಮಾಅತಿನ ಮೇಲೆ ಮತ್ತು ಪ್ರತಿಯೊಬ್ಬ ಅಹ್ಮದಿಯರ ಮೇಲೆ ಅಲ್ಲಾಹನ ಬಹಳ ದೊಡ್ಡ ಔದಾರ್ಯವಾಗಿದೆ. ಜಮಾಅತಿನ ಬಹುತೇಕರು ತಮಗೆ ಆವಶ್ಯತೆಗಳು ಇದ್ದೂ ಕೂಡ ತಮ್ಮ ಸಂಪತ್ತನ್ನು ದೀನಿನ ಅಗತ್ಯಕ್ಕಾಗಿ ನೀಡುತ್ತಾರೆ. ಇಂತಹ ಅನೇಕ ಉದಾಹರಣೆಗಳು ಇವೆ. ಲೋಕದ ಆರ್ಥಿಕ ಸ್ಥಿತಿ ಕೆಟ್ಟುಹೋಗುತ್ತಾ ಇವೆ. ವಿಶೇಷವಾಗಿಯೂ ಅಭಿವೃದ್ಧಿಶೀಲ ದೇಶಗಳ ಸ್ಥಿತಿ ಕೆಟ್ಟುಹೋಗಿದೆ. ಅಭಿವೃದ್ಧಿ ಹೊಂದಿದ ರಾಷ್ಟ್ರಗಳ ಸ್ಥಿತಿಯೂ ಹಿಂದಿನಂತೆ ಇಲ್ಲ. ರಶ್ಯಾ ಮತ್ತು ಉಕ್ರೇನಿನ ಯುದ್ಧ ಕೂಡ ಸ್ಥಿತಿಯನ್ನು ಸಾಕಷ್ಟು ಹಾಳು ಮಾಡಿದೆ. ಅದಲ್ಲದೇ ಆ ದೇಶಗಳ ರಾಜಕರಣಿಗಳ ಭ್ರಷ್ಟಚಾರ ಕೂಡ ಸ್ಥಿತಿಯನ್ನು ಕೆಡಿಸಿದೆ. ಆದರೂ ಅಹ್ಮದಿಯರು ತಮ್ಮ ಧನತ್ಯಾಗದಲ್ಲಿ ಮುಂದೆಯಾಗುತ್ತಾ ಹೋಗುತ್ತಿದ್ದಾರೆ.

ಲೌಕಿಕವಾದಿಯ ದೃಷ್ಟಿಯಲ್ಲಿ ಇದನ್ನು ಮನವರಿಕೆ ಮಾಡುವುದು ಕಷ್ಟ. ಆದರೆ ಯಾರ ವಿಶ್ವಾಸ ಸುದೃಢವಾಗಿರುತ್ತದೋ ಅವರು ಈ ತ್ಯಾಗದ ಪ್ರತಿಫಲವಾಗಿ ಅಲ್ಲಾಹನ ಅನುಗ್ರಹವನ್ನು ಕಾಣುತ್ತಾರೆ.

ನವೆಂಬರಿನ ಮೊದಲ ವಾರದಲ್ಲಿ ತಹ್ರೀಕ್ ಜದೀದಿನ ಹೊಸ ವರ್ಷದ ಘೋಷಣೆಯಾಗುತ್ತದೆ. ಆದ್ದರಿಂದ ನಾನು ತಹ್ರೀಕ್ ಜದೀದ್‌ಗೆ ಸಂಬಂಧಿಸಿದ ಕೆಲವು ಘಟನೆಗಳನ್ನು ಪ್ರಸ್ತುತಪಡಿಸುತ್ತೇನೆ.

ಲಾಹೋರ್ ಜಿಲ್ಲೆಯ ಸದರ್ ಲಜ್ನಾ ನನಗೆ ಬರೆದಿದ್ದಾರೆ: ಒಂದು ಸಭೆಯಲ್ಲಿ ನನ್ನನ್ನು ತಹ್ರೀಕ್ ಜದೀದ್ ಚಂದದ ಬಗ್ಗೆ ಗಮನ ಸೆಳೆಯಲು ಕೇಳಲಾಯಿತು. ಇದು ಮಧ್ಯಮ ಆದಾಯವನ್ನು ಗಳಿಸುವ ಮಧ್ಯಮ ವರ್ಗದ ಜನರ ಗುಂಪಿನ ಸಭೆಯಾಗಿತ್ತು. ಅವರು ಹೇಳುತ್ತಾರೆ, ಅಲ್ಲಿ ಕುಳಿತಿರುವ ಜನರು ಈಗಾಗಲೇ ಸಾಕಷ್ಟು ತ್ಯಾಗಗಳನ್ನು ಮಾಡುತ್ತಿರುವ ಕಾರಣ ನಾನಗೆ ನಾಚಿಕೆಯಾಗುತ್ತಿತ್ತು ಮತ್ತು ಅವರನ್ನು ಪ್ರೇರೇಪಿಸಬೇಕೆ ಎಂದು ನಾನು ಹಿಂಜರಿಯುತ್ತಿದ್ದೆ. ಆದಾಗ್ಯೂ, ನನಗೆ ಹೇಳಲಾಗಿದ್ದರಿಂದ ನಾನು ಗಮನ ಹರಿಸಬೇಕಾಗಿತ್ತು. ಮಹಿಳೆಯರು ತಮ್ಮ ತ್ಯಾಗವನ್ನು ಅರ್ಪಿಸಲು ಹೇಗೆ ಮುಂದಾಗಿದ್ದಾರೆ ಎಂಬುದನ್ನು ನೋಡಿದಾಗ ನನಗೆ ಆಶ್ಚರ್ಯವಾಯಿತು. ಕಡಿಮೆ ಆದಾಯ ಹೊಂದಿರುವವರು ನಾವು ಊಹಿಸಲೂ ಸಾಧ್ಯವಾಗದ ರೀತಿಯಲ್ಲಿ ಮತ್ತು ಅನೇಕ ಶ್ರೀಮಂತರು ಊಹಿಸಲೂ ಸಾಧ್ಯವಾಗದ ರೀತಿಯಲ್ಲಿ ತ್ಯಾಗ ಮಾಡುತ್ತಿರುವುದು ನನಗೆ ನಾಚಿಕೆಗೇಡಿನ ಸಂಗತಿ ಎಂದು ಅವರು ಹೇಳಿದರು. ಹಲವಾರು ಲಕ್ಷ ರೂಪಾಯಿಗಳನ್ನು ನಗದು ಮತ್ತು ಆಭರಣದ ರೂಪದಲ್ಲಿ ನೀಡಲಾಯಿತು. ಅಂತೆಯೇ, ವಕೀಲುಲ್ ಮಾಲ್ ಅವ್ವಲ್ ಅವರ ವರದಿಯಲ್ಲಿ, ಆಭರಣಗಳನ್ನು ನಿಡಿರುವ ಮಹಿಳೆಯರ ದೊಡ್ಡ ಪಟ್ಟಿಯು ಅನೇಕ ಪುಟಗಳಲ್ಲಿ ಪ್ರಸ್ತುತಪಡಿಸಲಾಗಿದೆ. ಹಝ್ರತ್ ಮುಸ್ಲಿಹ್ ಮೌಊದ್(ರ) ತಹ್ರೀಕ್ ಜದೀದಿನ ಘೋಷಣೆ ಮಾಡಿದ್ದರು ಮತ್ತು ಆಗ ಅವರು ಕೆಲವು ಬೇಡಿಕೆಗಳನ್ನು ಇರಿಸಿದ್ದರು. ಅವುಗಳಲ್ಲಿ ಮಹಿಳೆಯರಿಗೆ ಸಂಬಂಧಿಸಿ ಇರಿಸಿದ್ದ ಬೇಡಿಕೆಗಳಲ್ಲಿ ಒಂದು ಏನೆಂದರೆ, ಅವರು ಆಭರಣಗಳನ್ನು ಇರಿಸಬಾರದು ಅಥವಾ ಸ್ವಲ್ಪವೇ ತಮ್ಮ ಬಳಿ ಇರಿಸಿ ತ್ಯಾಗವನ್ನು ಮಾಡಬೇಕು ಎಂದಾಗಿತ್ತು.

ಆದ್ದರಿಂದ ಅಹ್ಮದಿ ಮಹಿಳೆಯರು ಹಝ್ರತ್ ಮುಸ್ಲಿಹ್ ಮೌಊದ್(ರ) ಅವರ ತೆಹ್ರೀಕ್‌ನಿಂದ ಆಗಲೂ ಈಗಲೂ ಮಹಿಳೆಯರು ತ್ಯಾಗಗಳನ್ನು ಮಾಡುತ್ತಿದ್ದಾರೆ. ಒಂದು ದೇಶದಲ್ಲಿ ಮಾತ್ರವಲ್ಲ, ಈ ಪಾಶ್ಚಿಮಾತ್ಯ ದೇಶಗಳಲ್ಲಿಯೂ ಸಹ, ತಮ್ಮ ಆಭರಣಗಳನ್ನು ದಾನ ಮಾಡುವ ಮಹಿಳೆಯರು ಇದ್ದಾರೆ, ಕೆಲವು ಮಹಿಳೆಯರು ತಮ್ಮ ಎಲ್ಲ ಆಭರಣಗಳನ್ನು ಚಂದಾವಾಗಿ ನೀಡುತ್ತಾರೆ. ನಂತರ ಅವರು ಹೊಸ ಆಭರಣಗಳನ್ನು ಮಾಡಿಸಿದರೆ ಅವರಿಗೆ ನೆಮ್ಮದಿ ದೊರಕುವುದಿಲ್ಲ ಆದ್ದರಿಂದ ಅವರು ಆ ಆಭರಣಗಳನ್ನು ಚಂದವಾಗಿ ನೀಡುತ್ತಾರೆ ಏಕೆಂದರೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿರುವರು: ಅವರು ಸ್ಥಾಯಿಯಾದ ಮತ್ತು ಸ್ಥಿರವಾದ ಸಂತೋಷವನ್ನು ಪಡೆಯಲು ಬಯಸಬೇಕಾದರೆ ಅದನ್ನು ತ್ಯಾಗವಿಲ್ಲದೆ ಪಡೆಯಲಾಗುವುದಿಲ್ಲ.

ಬಡ ಜನರು ತಮ್ಮ ಆಹಾರದ ಖರ್ಚನ್ನು ಕಡಿಮೆಗೊಳಿಸಿ ಚಂದಾ ನೀಡುತ್ತಾರೆ. ಅನೇಕರಿಗೆ ಅಲ್ಲಾಹನು ದಯಪಾಲಿಸುತ್ತಾನೆ ಮತ್ತು ಈ ದಾನಕ್ಕಿಂತ ಹೆಚ್ಚಿನದನ್ನು ನೀಡುತ್ತಾನೆ. ಅದು ಅವರಿಗೆ ಸ್ವತಃ ಅಚ್ಚರಿಗೊಳಿಸುತ್ತದೆ. ಅಂತಹ ಜನರ ಕೆಲವು ಘಟನೆಗಳನ್ನು ನಾನು ಇಲ್ಲಿ ಪ್ರಸ್ತಪಿಸುತ್ತೇನೆ ಆದರೆ ಅದೇ ಸಮಯದಲ್ಲಿ ನಾನು ಈ ಶ್ರೀಮಂತರನ್ನು ಇದರಿಂದ ಪಾಠ ಕಲಿಯಲು ಮತ್ತು ಅವರ ತ್ಯಾಗದ ಗುಣಮಟ್ಟವನ್ನು ಹೆಚ್ಚಿಸುವಂತೆ ಕೇಳುತ್ತೇನೆ.

ಹಝ್ರತ್ ಮುಸ್ಲಿಹ್ ಮೌಊದ್(ರ) ಹೀಗೆ ಹೇಳಿದ್ದರು: ತಮ್ಮ ತಿಂಗಳ ಆದಾಯದ ಶೇಕಡ 45 ನೀಡುವ ಬಡವರು ಕೂಡ ಇದ್ದಾರೆ. ಆದರೆ ಶ್ರೀಮಂತರು ಕೇವಲ ಶೇಕಡ ಒಂದುವರೆಯಷ್ಟು ನೀಡುತ್ತಾರೆ. ಈಗಂತು ಶೇಕಡ ನೂರರಷ್ಟು ನೀಡುವ ಬಡವರು ಕೂಡ ಇದ್ದಾರೆ ಮತ್ತು ಶ್ರೀಮಂತರು ಶೇಕಡ ಒಂದರಷ್ಟು ನೀಡುತ್ತಾರೆ. ಈ ರೀತಿಯಲ್ಲಿ ಬಡವರ ತ್ಯಾಗದ ಮಟ್ಟ ಬಹಳ ಉನ್ನತವಾಗಿರುವುದಾಗಿದೆ. (ಖುತ್‌ಬಾತೆ ಮಹ್ಮೂದ್, ಸಂಪುಟ–156, ಪುಟ–443)

ಈ ನಿಟ್ಟಿನಲ್ಲಿ ಸಿರಿವಂತರು ತಮ್ಮ ಅವಲೋಕನ ನಡೆಸಬೇಕು. ಅಲ್ಲಾಹನು ಯಾರಿಗೂ ಸಾಲಗಾರನಾಗಿ ಇರುವುದಿಲ್ಲ. ಏಳುನೂರು ಪಟ್ಟು ಅಥವಾ ಅದಕ್ಕಿಂತ ಹೆಚ್ಚು ವರ್ಧಿಸಿ ಕೊಡುವನು ಎಂದು ಪವಿತ್ರ ಖುರ್‌ಆನಿನಲ್ಲಿ ಮತ್ತೊಂದೆಡೆ ಹೇಳಿರುವನು. ಹೇಗಾದರೂ, ನಾನು ಹೇಳಿದಂತೆ, ನಾನು ಇಲ್ಲಿ ತ್ಯಾಗದ ಕೆಲವು ಉದಾಹರಣೆಗಳನ್ನು ಪ್ರಸ್ತುತಪಡಿಸುತ್ತೇನೆ. ಅವರ ತ್ಯಾಗ ಮತ್ತು ನಂಬಿಕೆಯ ಮನೋಭಾವವು ಎಲ್ಲಿ ಪ್ರಕಟವಾಗುತ್ತದೆಯೋ ಅಲ್ಲಿ ಅಲ್ಲಾಹನ ಅನುಗ್ರಹವು ಅವರ ಮೇಲೆ ತಕ್ಷಣವೇ ಕಂಡುಬರುತ್ತದೆ.

ಆಫ್ರಿಕಾದ ಒಂದು ದೇಶ ಗಿನಿ ಬಸಾವ್ ಎಂದಾಗಿದೆ. ಅಲ್ಲಿನ ಮೋಟರ್ ಸೈಕ್ಲ್ ಮೆಕ್ಯಾನಿಕ್ ಆಗಿರುವ ಮಹ್ಮೂದ್ ಸಾಹಿಬ್ ಇದ್ದಾರೆ. ತೆಹ್ರೀಕ್ ಜದೀದ್‌ಗೆ ಚಂದ ನೀಡುವಂತೆ ಮಿಷನರಿ ಸಾಃಇಬ್ ಅವರು ಅವರನ್ನು ಪ್ರೋತ್ಸಾಹಿಸಿದರು. ಆದ್ದರಿಂದ ಅವರು ತಮ್ಮ ಜೇಬಿನಲ್ಲಿದ್ದ 10,000 ಫ್ರಾಂಕ್‌ಗಳ ಹಣವನ್ನು ತೆಗೆದುಕೊಂಡರು. ಅವರು ತಮ್ಮ ಮನೆಯಲ್ಲಿಯೇ ಕುಳಿತಿರುವಾಗ ಅವರ ಸೊಸೆಯೂ ಅಲ್ಲಿಗೆ ಬಂದು ಮನೆಯಲ್ಲಿ ಅಡುಗೆ ಮಾಡಲು ಹಣ ಕೇಳಿದರು. ಮಹ್ಮೂದ್ ಸಾಹಿಬ್ ತೆಹ್ರೀಕ್ ಜದೀದ್ ಚಂದಾದಲ್ಲಿ ಎಲ್ಲಾ ಹಣವನ್ನು ಪಾವತಿಸಲು ಉದ್ದೇಶಿಸಿದ್ದರಿಂದ ಅವರು ಎಲ್ಲಾ ಹಣವನ್ನು ಚಂದಾದಲ್ಲಿ ಪಾವತಿಸಿದರು ಮತ್ತು ತನ್ನ ಸೊಸೆಗೆ ತಾಳ್ಮೆಯಿಂದಿರಲು ಹೇಳಿದರು. ಆ ಸಂದರ್ಭದಲ್ಲಿ ಅವರ ಸೊಸೆ ಹಿಂದಿರುಗಿದರು. ಮಹ್ಮೂದ್ ಜಗ್ರಾ ಸಾಹಿಬ್ ಹೇಳುತ್ತಾರೆ: ನಾನು ಇದೇ ಯೋಚನೆಯಲ್ಲಿ ಕುಳಿತಿದ್ದೇ ಈಗ ತನ್ನ ಸೊಸೆಗೆ ಅಡುಗೆ

ಮಾಡಲು ಹಣ ಹೇಗೆ ಕೊಡಲಿ ಎಂದು ಅಷ್ಟರಲ್ಲಿ ಸರಕಾರದ ಒಂದು ಕಚೇರಿಯಿಂದ ಕಚೇರಿಗೆ ಬರುವಂತೆ ಕರೆ ಬಂದಿತು ಅದಕ್ಕೆ ಅವರು ಆ ಕಚೇರಿಗೆ ಹೋದಾಗ ಅವರು ಹೇಳಿದರು ಕಳೆದ ವರ್ಷ ನೀವು ನಮ್ಮ ಮೊಟರ್ ಸೈಕಲ್ ಅನ್ನು ರಿಪೇರಿ ಮಾಡಿದ್ದೀರಿ ಅದಕ್ಕಾಗಿ ನಾವು ನಿಮಗೆ ಹಣ ನೀಡಿರಲಿಲ್ಲ ಎಂದು ಹೇಳಿದರು ಮತ್ತು ಅವರಿಗೆ ಒಂದು ಲಕ್ಷದ ತೊಂಬತ್ತು ಸಾವಿರ ಸೆಫಾ ಫ್ರಾಂಕ್‌ಗಳ ಚೆಕ್ ಅನ್ನು ನೀಡಿದರು. ಚೆಕ್ ಸ್ವೀಕರಿಸಿದ ಮಹ್ಮೂದ್ ಸಾಹಿಬ್ ತಕ್ಷಣ ಅವರ ಮನೆಗೆ ಬಂದರು. ಅವರು ತಮ್ಮ ಸೊಸೆಯನ್ನು ಮತ್ತು ಕುಟುಂಬದ ಇತರರನ್ನು ಕರೆದು "ನೋಡಿ! ಅಲ್ಲಾಹನ ಮಾರ್ಗದಲ್ಲಿ ಖರ್ಚು ಮಾಡುವ ಅನುಗ್ರಹಗಳು. ನಾನು ನಿರೀಕ್ಷಿಸದ ಹಣವನ್ನು ನನ್ನ ಭಗವಂತ ನನಗೆ ನೀಡಿದನು ಎಂದು ಹೇಳಿದರು.

ಫಿಜಿಯ ಮುಬಲ್ಲಿಗ್ ಸಾಹೇಬರು ಬರೆಯುತ್ತಾರೆ: ನಾಂದಿಯ ಸ್ನೇಹಿತರಲ್ಲಿ ಒಬ್ಬರು ಅಶ್ಫಾಕ್ ಸಾಹಿಬ್ ಇದ್ದಾರೆ. ಪ್ರಯಾಣದ ಸಮಯದಲ್ಲಿ, ಅವರು ತೆಹ್ರೀಕ್ ಜದೀದ್ ಕುರಿತು ನನ್ನ ಹಿಂದಿನ ಖುತ್‌ಬ ಜುಮುಅವನ್ನು ಕೇಳಿದರು ಮತ್ತು ನಾನು ವಿವರಿಸಿದ ಘಟನೆಗಳನ್ನು ಆಲಿಸಿದರು. ಅವರು ಹೇಳುತ್ತಾರೆ ಈ ಘಟನೆಗಳು ತನ್ನ ಮೇಲೆ ಹೆಚ್ಚಿನ ಪ್ರಭಾವ ಬೀರಿವೆ ಮತ್ತು ಚಾಲನೆ ಮಾಡುವಾಗ, ಅವರು ತೆಹ್ರೀಕ್ ಜದೀದ್‌ಗೆ ನನ್ನ ಚಂದವನ್ನು ದ್ವಿಗುಣಗೊಳಿಸಲು ತೆಹ್ರೀಕ್ ಜದೀದ್‌ನ ಕಾರ್ಯದರ್ಶಿಯನ್ನು ಫೋನ್ ಮಾಡಿದರು. ಇವರು ವ್ಯಾಪಾರ ಮಾಡುತ್ತಾರೆ. ಅದರ ನಂತರ, ವ್ಯವಹಾರದ ವಾರ್ಷಿಕ ಹಣಕಾಸು ವರದಿಯನ್ನು ಸಿದ್ಧಪಡಿಸಿದಾಗ, ಈ ವರ್ಷವೂ ಅವರ ಲಾಭವು ದ್ವಿಗುಣಗೊಂಡಿದ್ದನ್ನು ನೋಡಿದರು. ಈ ದುಪ್ಪಟ್ಟು ಲಾಭವು ನಮ್ಮ ಶ್ರಮದಿಂದ ಬಂದಿಲ್ಲ, ಅದು ಕೇವಲ ಸರ್ವಶಕ್ತನಾದ ಅಲ್ಲಾಹನ ಅನುಗ್ರಹದಿಂದ, ಚಂದವನ್ನು ದ್ವಿಗುಣಗೊಳಿಸುವ ಮೂಲಕ ಪಡೆಯಲಾಗಿದೆ ಎಂದು ನಾನು ನಂಬುತ್ತೇನೆ ಎಂದು ಅವರು ಹೇಳುತ್ತಾರೆ.

ಮಾಸ್ಕೋವಿನ ಮುಬಲ್ಲಿಗ್ ಸಾಹಿಬ್ ಬರೆಯುತ್ತಾರೆ: ಕಿರ್ಗಿಸ್ತಾನ್‌ನ ರುಸ್ಲಾನ್ ಕಿಕಿಯು ಸಾಹಿಬ್ ಇದ್ದಾರೆ. ಅವರು 14 ವರ್ಷದಿಂದ ಮಾಸ್ಕೋದಲ್ಲಿ ವಾಸಿಸುತ್ತಿದ್ದಾರೆ. ಈ ಹಿಂದೆಯೂ ಅವರು ಸಾಂಪತ್ತಿಕ ತ್ಯಾಗಕ್ಕೆ ಗಮನ ನೀಡುತ್ತಿದ್ದರು. ಸುಮಾರು ಒಂದು ವರ್ಷದ ಹಿಂದೆ ಅವರು ನನ್ನ ಈ ಆರ್ಥಿಕ ತ್ಯಾಗದ ಖುತ್‌ಬವನ್ನು ಆಲಿಸಿದಾಗ, ನಾನು ಅದನ್ನು ಕೇಳಿ ಆನಂದಿಸಿದೆ ಎಂದು ಅವರು ಹೇಳಿದರು ಮತ್ತು ನಂತರ ಅವರು ಹೇಳಿದರು ನಾನೂ ಸಹ ಆರ್ಥಿಕ ತ್ಯಾಗ ನೀಡುವ ಜನರಲ್ಲಿ ಸೇರುತ್ತೇನೆ ಎಂದು ಪ್ರತಿನಿತ್ಯದ ಆದಾಯದಿಂದ 10% ಚಂದವನ್ನು ನಿಯಮಿತವಾಗಿ ನೀಡಲು ಪ್ರರಂಭಿಸಿದರು. ಅದರಲ್ಲಿ ಸ್ವಲ್ಪ ಸದಖದಲ್ಲಿತ್ತು ಮತ್ತು ಉಳಿದಿರುವ ಮೊತ್ತ ಚಂದವಾಗಿತ್ತು. ಅವರು ಹೇಳುತ್ತಾರೆ ಈ ವಿಧಾನವನ್ನು ಒಂದು ವರ್ಷದಿಂದ ನಿರ್ವಹಿಸುತ್ತಿದ್ದಾರೆ. ಮುಬಲ್ಲಿಗ್ ಸಾಹಿಬ್ ಅವರು ತಮ್ಮ ಸ್ಥಳವನ್ನು ಬದಲಾಯಿಸಿದಾಗ, ಆ ಸಮಯದಲ್ಲಿ ಅವರು ರಷ್ಯಾದ ಮೂಲದವರಾಗಿದ್ದಾರೆ, ಅವರು ಕಿರ್ಗಿಸ್ತಾನ್‌ನಿಂದ ಬಂದವರಾಗಿದ್ದಾರೆ, ನಾನು ಪಾವತಿಸಿದ ರೀತಿಯಲ್ಲಿ ನನ್ನ ಚಂದಗಳನ್ನು ಮುಂದುವರಿಸಲು ನನಗೆ ಸಾಧ್ಯವಾಗುತ್ತದೆಯೇ ಎಂಬುದು ಅವರ ಮೊದಲ ಪ್ರಶ್ನೆಯಾಗಿತ್ತು. ಹೀಗೆ ಇದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರು ಜನರಲ್ಲಿ ಸೃಷ್ಟಿಸಿದ ಕ್ರಾಂತಿಯಾಗಿದೆ. ಚಂದ ನೀಡುವ ಬಗ್ಗೆ ಒಂದು ಕಾಳಜಿ ಇದೆ.

ತಾಂಜಾನಿಯಾದ ಅಮೀರ್ ಸಾಹಿಬ್ ಬರೆಯುತ್ತಾರೆ: ಅಲ್ಲಿನ ಒಂದು ಜಮಾತ್‌ನಲ್ಲಿ ಮುಹಮ್ಮದ್ ಸಾನಿ ಸಾಹಿಬ್ ಎಂಬ ವ್ಯಕ್ತಿ ಇದ್ದಾರೆ. ಅಲ್ಲಿ ಕೆಲಸ ಮಾಡುವಾಗ ಅವರು ಕೆಲಸ ಮಾಡುತ್ತಿದ್ದ ಕಂಪನಿಗೆ ಆರ್ಥಿಕ ನಷ್ಟ ಉಂಟಾಗಿದೆ ಹಾಗಾಗಿ ಎಲ್ಲಾ ಕಾರ್ಮಿಕರ ಸಂಬಳದಲ್ಲಿ ಕಡಿತಗೊಳಿಸಲಾಗುವುದು ಎಂದು ಮಾಲೀಕರು ತಿಳಿಸಿದ್ದಾರೆ. ಅವರಿಗೆ ಅದರ ಬಗ್ಗೆ ತುಂಬಾ ದುಃಖವಾಯಿತು. ಚಂದಾ ತೆಹ್ರೀಕ್ ಜದೀದ್ ಪಾವತಿಯ ಕೊನೆಯ ತಿಂಗಳಾಗಿತ್ತು. ಮುಅಲ್ಲಿಮ್ ಸಾಹಿಬರು ಅವರನ್ನು ಸಂಪರ್ಕಿಸಿದಾಗ, ಅವರು ತಮ್ಮ ಕಷ್ಟಗಳನ್ನು ಹೇಳಿಕೊಳ್ಳಲಿಲ್ಲ, ಏನು ಕಷ್ಟ ಎಂದು, ಆದರೆ ಸರ್ವಶಕ್ತನಾದ ಅಲ್ಲಾಹನಲ್ಲಿ ಸಂಪೂರ್ಣ ವಿಶ್ವಾಸದೊಂದಿಗೆ ತನ್ನ ವಾಗ್ದಾನವನ್ನು ಪೂರೈಸಿದರು. ಮರುದಿನ ಅವರ ಮಾಲಿಕರು ಅವರನ್ನು ಕರೆ ಮಾಡಿ ಅವರ ಸಂಬಳದಲ್ಲಿ ಯಾವುದೇ ಕಡಿತ ಇರುವುದಿಲ್ಲ ಎಂದು ಹೇಳಿದರು. ಆದ್ದರಿಂದ, ಇತರ ಸಹೋದ್ಯೋಗಿಗಳ ಸಂಬಳವನ್ನು ಕಡಿತಗೊಳಿಸಲಾಯಿತು, ಆದರೆ ಅವರ ಸಂಬಳವನ್ನು ಪೂರ್ಣವಾಗಿ ಸ್ವೀಕರಿಸಲಾಯಿತು. ಅವರು ಹೇಳುತ್ತಾರೆ ನಾನು ಆ ಸಮಯದಲ್ಲಿ ನೀಡಿದ ಚಂದಾ ತೆಹ್ರೀಕ್ ಜದೀದ್‌ನ ಕಾರಣದಿಂದಲೇ ಹೀಗಾಯಿತು ಎಂದು ಅವರು ಹೇಳುತ್ತಾರೆ.

ಮಲಾವಿ ಎಂಬ ದೇಶವಿದೆ ಅಲ್ಲಿನ ಮಂಗೋಚಿ ಜಿಲ್ಲೆಯ ಹಿರಿಯ ಮಹಿಳೆ ಇದ್ದಾರೆ. ಅವರು ಕೃಷಿ ಮಾಡುತ್ತಾರೆ. ಇದೇ ಅವರ ಜೀವನಾಧಾರವಾಗಿದೆ. ಅವರು ತೆಹ್ರೀಕ್ ಜದೀದ್‌ನ ವಾಗ್ದಾನವನ್ನು ಬರೆಸಿದ್ದರು ಆದರೆ ಅದನ್ನು ಪಾವತಿಸಲು ಸಾಧ್ಯವಾಗಲಿಲ್ಲ. ವರ್ಷಾಂತ್ಯದಲ್ಲಿ ಯಾರದ್ದಾದರೂ ವಾಗ್ದಾನ ಅಪೂರ್ಣವಾದರೆ ಹಣ ನೀಡಿ ಎಂದು ಜ್ಞಾಪಿಸಿದಾಗ. ಅವರು ಹೇಳುತ್ತಾರೆ ಅವರು ವಾಗ್ದಾನವನ್ನು ಪೂರೈಸಲು ಕೆಲಸಕ್ಕಾಗಿ ಬಹಳ ಶ್ರಮವಹಿಸಿದರು ಮತ್ತು ಅದರೊಂದಿಗೆ ದುಆ ಸಹ ಮಾಡುತ್ತಿದ್ದರು. ಎಷ್ಟು ಪ್ರಯತ್ನ ಮಾಡಿದರೂ ಕೆಲಸ ಸಿಗಲಿಲ್ಲ. ಒಂದು ದಿನ ಅವರು ಮಸೀದಿಯಲ್ಲಿ ಅಸರ್ ನಮಾಝ್ ನಿರ್ವಹಿಸಿ ಮನೆಗೆ ಹಿಂದಿರುಗಿದಾಗ, ಅವರ ಮೊಮ್ಮಗ ಅವರಿಗೆ ಸ್ಥಳೀಯ ಕರೆನ್ಸಿಯಾದ ನಲವತ್ತೈದು ಸಾವಿರ ಕ್ವಾಚಾವನ್ನು ಉಡುಗೊರೆಯಾಗಿ ಕಳುಹಿಸಿದ್ದಾರೆ ಎಂಬ ಸುದ್ದಿ ಅವರಿಗೆ ಲಭಿಸಿತು. ಹಾಗಾಗಿ ಅವರ ಸಂತೋಷಕ್ಕೆ ಕೊನೆಯೇ ಇರಲಿಲ್ಲ. ಅವರು ತಕ್ಷಣ ಮುಅಲ್ಲಿಮ್ ಸಾಹೆಬರ ಬಳಿಗೆ ಹೋಗಿ ತಮ್ಮ ವಾಗ್ದಾನವನ್ನು ಪೂರೈಸಿದರು ಮತ್ತು ಅವರು ತಮ್ಮ ವಾಗ್ದಾನವನ್ನು ಪೂರೈಸಲು ಸಾಧ್ಯವಾಗಿಸಿದ ಅಲ್ಲಾಹನಿಗೆ ಕೃತಜ್ಞತೆಯನ್ನು ಅರ್ಪಿಸಿದರು. ಈಗ ಬಡವರೂ ಸಹ ಬಹಳ ಕಾಳಜಿಯಿಂದ ಚಂದ ನೀಡುತ್ತಾರೆ.

ತಾಂಜಾನಿಯಾದ ಅಮೀರ್ ಸಾಹಿಬ್ ಹೇಳುತ್ತಾರೆ: ಶಿಯಾಂಗಾಗೆಯ ಒಂದು ಜಮಾತ್‌ನ ಮರಿಯಮ್ ಸಾಃಇಬ ಎಂಬ ಓರ್ವ ಮಹಿಳೆ ಇದ್ದಾರೆ, ಅವರು ಹೇಳುತ್ತಾರೆ ನನಗೆ ಓರ್ವ ಮುಅಲ್ಲಿಮ್ ಸಾಹಿಬ್ ಅವರ ಕರೆ ಬಂತು. ಅವರು ತೆಹ್ರೀಕ್ ಜದೀದ್ ಚಂದದ ಬಾಖಿಯ ಬಗ್ಗೆ ಗಮನ ಸೆಳದರು. ಅವರು ಏಳುತ್ತಾರೆ: ಆ ಸಮಯದಲ್ಲಿ ನನ್ನ ಬಳಿ ಮನೆಯ ಬಳಕೆಗೆ ಕೇವಲ ಹತ್ತು ಸಾವಿರ ಶಿಲ್ಲಿಂಗ್ ಇತ್ತು, ಅದನ್ನು ನಾನು ಚಂದವಾಗಿ ಪಾವತಿಸಿದೆ. ಆಗ ಅದೇ ದಿನ ಸರ್ವಶಕ್ತನಾದ ಅಲ್ಲಾಹನು ನನಗೆ ಒಂದು ಲಕ್ಷ ಶಿಲ್ಲಿಂಗ್‌ಗಳನ್ನು ಹಿಂದಿರುಗಿಸಿದನು ಮತ್ತು ಇದು ಚಂದದ ಅನುಗ್ರಹಗಳ ಕಾರಣದಿಂದಾಗಿದೆ ಎಂದು ಅವರು ಹೇಳುತ್ತಾಳೆ.

ಗಿನಿ ಬಸಾವ್‌ನಿಂದ ಓರ್ವ ನವ ಅಹ್ಮದಿ ಉಸ್ಮಾನ್ ಸಾಹಿಬ್ ಇದ್ದಾರೆ. ಅವರ ಜೀವನದಲ್ಲಿ ಹಲವು ಆರ್ಥಿಕ ಸಂಕಷ್ಟಗಳಿದ್ದವು. ಯಾವುದೇ ವ್ಯವಹಾರದಲ್ಲಿ ಯಶಸ್ಸು ಕಾಣಲಿಲ್ಲ. ಈ ಸಂಕಟದಲ್ಲಿ ರಾತ್ರಿ ಮಲಗಿದ್ದಾಗ ಹೇ ಉಸ್ಮಾನ್ ನಿಮ್ಮ ಚಂದವನ್ನು ನಿಯಮಿತವಾಗಿ ಪಾವತಿಸಬೇಕೆಂಬ ಧ್ವನಿ ಕೇಳಿಸಿತು. ಬೆಳಿಗ್ಗೆ ಉಸ್ಮಾನ್ ಸಾಹಿಬ್ ಮಿಷನರಿ ಬಳಿಗೆ ಬಂದು ತಮ್ಮ ಕನಸನ್ನು ವಿವರಿಸಿದರು. ತೆಹ್ರೀಕ್ ಜದೀದ್ ಮತ್ತು ಇತರ ಚಂದಗಳ ಬಗ್ಗೆ ಮಿಷನರಿಯು ಅವರಿಗೆ ತಿಳಿಸಿದರು, ಅದಕ್ಕೆ ಉಸ್ಮಾನ್ ಸಾಹಿಬ್ ತಕ್ಷಣವೇ ತೆಹ್ರೀಕ್ ಜದೀದ್‌ನ ಚಂದವನ್ನು ಪಾವತಿಸಿದರು. ಮತ್ತು ತಮ್ಮ ಎಲ್ಲಾ ಚಂದಗಳ ಪಟ್ಟಿಯನ್ನು ಮಾಡಿ ಅದನ್ನು ನಿಯಮಿತವಾಗಿ ಪಾವತಿಸಲು ಪ್ರಾರಂಭಿಸಿದರು. ಉಸ್ಮಾನ್ ಸಾಹಿಬ್ ಅವರು ತಮ್ಮ ಎಲ್ಲಾ ಚಂದಗಳನ್ನು ನಿಯಮಿತವಾಗಿ ಪಾವತಿಸಲು ಪ್ರಾರಂಭಿಸಿದಾಗಿನಿಂದ, ಸರ್ವಶಕ್ತನಾದ ಅಲ್ಲಾಹನು ಅವರನ್ನು ಪ್ರತಿಯೊಂದು ವ್ಯವಹಾರದಲ್ಲಿ ಅನುಗ್ರಹಿಸಿದ್ದಾನೆ ಮತ್ತು ಅವರ ಎಲ್ಲಾ ಮನೆಯ ಸಮಸ್ಯೆಗಳು ಸಹ ಬಗೆಹರಿಸಿವೆ ಎಂದು ಹೇಳುತ್ತಾರೆ. ಈಗ ಇವೆಲ್ಲವೂ ತೆಹ್ರೀಕ್ ಜದೀದ್‌ನ ಮತ್ತು ಇತರೆ ಚಂದಗಳ ಅನುಗ್ರಹಗಳಾಗಿವೆ ಎಂದು ಅವರ ದೃಢವಾದ ನಂಬಿಕೆಯಾಗಿದೆ. ಇದು ಸರ್ವಶಕ್ತನಾದ ಅಲ್ಲಾಹನ ವರ್ತನೆಯಾಗಿದೆ ಮತ್ತು ಅವನು ನವ ಅಹ್ಮದಿಯರನ್ನು ಸಗ ಹೇಗೆ ನೆನಪಿಸುತ್ತಾನೆ. ಸರ್ವಶಕ್ತನಾದ ಅಲ್ಲಾಹನಿಗೆ ಇದರ ಅವಶ್ಯಕತೆ ಇಲ್ಲ ಬದಲಿಗೆ ಅಲ್ಲಾಹನು ಅನುಗ್ರಹಿಸಲು ಹೀಗೆ ಮಾತ್ರ ಮಾಡುತ್ತಾನೆ.

ಆಸ್ಟ್ರೇಲಿಯಾದ ಮುರಬ್ಬಿ ಕಮ್ರಾನ್ ಸಾಹಿಬ್ ಹೇಳುತ್ತಾರೆ: ಓರ್ವ ಖಾದಿಮ್ ಸುಮಾರು ಹತ್ತು ವರ್ಷಗಳಿಂದ ಚಂದ ನೀಡಿರಲಿಲ್ಲ. ನಾನು ಅವರೊಂದಿಗೆ ಕುಳಿತು ಆರ್ಥಿಕ ತ್ಯಾಗದ ಅನುಗ್ರಹಗಳನ್ನು ವಿವರಿಸಿದೆ. ತದನಂತರ ಅವರು ತಮ್ಮ ಚಂದ ನೀಡಲು ಪ್ರಾರಂಭಿಸಿದರು ಮತ್ತು ತೆಹ್ರೀಕ್ ಜದೀದ್ ಮತ್ತು ವಕ್ಫೆ ಜದೀದ್‌ನ ಚಂದವನ್ನು ನೀಡಿದರು. ಅವರು ಹೇಳುತ್ತಾರೆ: ಕೆಲವು ದಿನಗಳ ನಂತರ ಅವರು(ಖಾದಿಮ್) ಕರೆ ಮಾಡಿ ಹೇಳಿದರು: ಅಲ್ಲಾಹನ ಅನುಗ್ರಹದಿಂದ ನನಗೆ ಕೆಲಸದಲ್ಲಿ ಪ್ರಮೋಶನ್ ಲಭಿಸಿದೆ, ನಾನು ನಿರೀಕ್ಷಿಸದ ಕೆಲಸದಲ್ಲಿ ಪ್ರಮೋಶನ್ ಲಭಿಸಿದೆ ಇದು ಅಲ್ಲಾಹನ ಮಾರ್ಗದಲ್ಲಿ ಮಾಡಿದ ಆರ್ಥಿಕ ತ್ಯಾಗಗಳ ಕಾರಣದಿಂದಾಗಿದೆ. ಅಲ್ಲಾಹನ ಮಾರ್ಗದಲ್ಲಿ ಹತ್ತು ವರ್ಷಗಳ ಕಾಲದಿಂದ ಸೋಮಾರಿಯಾಗಿದ್ದವನು ಈಗ ನಾನು ಎಂದಿಗೂ ಸೋಮಾರಿಯಾಗುವುದಿಲ್ಲ ಎಂದು ಹೇಳಿದನು.

ಗ್ಯಾಂಬಿಯಾ ಕಗಾಂವ್ ನಿಯಾಮಿನಾ. ಅಲ್ಲಿಯು ಕೂಡ ಓರ್ವ ಸ್ನೇಹಿತ ಉಸ್ಮಾನ್ ಸಾಹಿಬ್ ಎಂಬವರಿದ್ದಾರೆ. ಸೆಕ್ರೇಟರಿ ತೆಹ್ರೀಕ್ ಜದೀದ್ ಅವರ ಗ್ರಾಮಕ್ಕೆ ತೆರಳಿ ಚಂದವನ್ನು ನೀಡಲು ಆಜ್ಞಾಪಿಸುತ್ತಾ ಹೇಳಿದರು ಇದು ಕೇವಲ ಆರ್ಥಿಕ ತ್ಯಾಗವಲ್ಲ ಬದಲಿಗೆ ಇದರ ಮೂಲ ಉದ್ದೇಶಗಳಲ್ಲಿ ಜ್ಞಾನವನ್ನು ಹೆಚ್ಚಿಸುವುದು ಮತ್ತು ತಬ್ಲೀಗ್ ಮಾಡುವುದೂ ಆಗಿದೆ. ನೀವು ತೆಹ್ರೀಕ್ ಜದೀದ್‌ಗೆ ಸೇರಲು ಹೊರಟಿದ್ದರೆ, ಚಂದವನ್ನು ನೀಡಿದರೆ ಸಾಕು ನಮ್ಮ ಕೆಲಸ ಮುಗಿದಿದೆ ಎಂದು ಭಾವಿಸಬೇಡಿ. ಅದನ್ನು ನೀಡಲಾಗಿದೆ ಅದಲ್ಲದೆ ತಮ್ಮ ಧಾರ್ಮಿಕ ಜ್ಞಾನವನ್ನು ಸಹ ಹೆಚ್ಚಿಸಿಕೊಂಡು ನಂತರ ತಬ್ಲೀಗ್‌ನ ಕ್ಷೇತ್ರಕ್ಕೆ ಬರಬೇಕು. ಹಿಂದಿನ ದಿನಗಳಲ್ಲಿ ಖುದ್ದಾಮ್ ಅನ್ಸಾರ್

ಅವರಿಂದ ನಾನು ಪ್ರತಿಜ್ಞೆ ತೆಗೆದುಕೊಂಡಾಗ, ಈ ಜಮಾತ್ ನವರು ಅದನ್ನು ನಮ್ಮ ಮುಂದಿರಿಸಿದರೆ, ನಾವು ತಬ್ಲೀಗ್‌ನ ಕ್ಷೇತ್ರದಲ್ಲಿ ಬಹಳ ಮುಂದಾಗಬೇಕು. ಕೇವಲ ಆರ್ಥಿಕ ತ್ಯಾಗದಿಂದ ನಮ್ಮ ಕರ್ತವ್ಯವನ್ನು ಪೂರೈಸಿದ್ದೇವೆ ಎಂದು ಭಾವಿಸಬೇಡಿ.

ತೆಹ್ರೀಕ್ ಜದೀದ್‌ನ ಮೂಲ ಉದ್ದೇಶಗಳಲ್ಲಿ ತಬ್ಲೀಗ್ ಕೂಡ ಒಂದು ಉದ್ದೇಶವಾಗಿದೆ ಮತ್ತು ಇದು ಬಹಳ ಪ್ರಮುಖವಾದ ಉದ್ದೇಶವಾಗಿದೆ.

ಅವರು ಹೇಳುತ್ತಾರೆ ಇದರಿಂದ ನಾನು ತುಂಬಾ ಪ್ರಭಾವಿತನಾಗಿ ಬೈಅತ್ ಮಾಡಿ ಜಮಾತ್‌ಗೆ ಸೇರಲು ನಿರ್ಧರಿಸಿದ್ದಲ್ಲದೆ ಒಂದು ನೂರ ಐವತ್ತು ಡಾಲರ್‌ಗಳನ್ನು ಚಂದಾ ತೆಹ್ರೀಕ್ ಜದೀದ್‌ನಲ್ಲಿ ನಿಡಿದರು. ಚಂದವನ್ನು ಪಾವತಿಸಿದ ನಂತರ, ಅವರು ಹೇಳುತ್ತಾರೆ ನಾನು ನನ್ನಲ್ಲಿ ಶುದ್ಧ ಬದಲಾವಣೆಯನ್ನು ಅನುಭವಿಸುತ್ತಿದ್ದೇನೆ ಮತ್ತು ನಾನು ಅಹ್ಮದಿಯನ್ನು ಹಾಗೂ ಅಹ್ಮದಿಯೇತರರನ್ನು ಇಸ್ಲಾಂ ಅಹ್ಮದಿಯ್ಯತ್ ಬಗ್ಗೆ ಬೋಧಿಸುತ್ತಿದ್ದೇನೆ. ಅಲ್ಲದೆ ಈಗ ನಾನು ನಿಯಮಿತವಾಗಿ ಚಂದಾ ಆಮ್ ನಹ ನೀಡುತ್ತಿದ್ದೇನೆ.

ಗ್ಯಾಂಬಿಯಾದ ಮಹಿಳೆಯೊಬ್ಬರು ಬರೆಯುತ್ತಾರೆ, ನಾನು ಚಂದ ನೀಡಿದಾಗಿನಿಂದ, ನನ್ನಲ್ಲಿ ಮತ್ತು ನನ್ನ ಮಕ್ಕಳಲ್ಲಿ ನಾನು ಕ್ರಾಂತಿಯನ್ನು ಅನುಭವಿಸುತ್ತೇನೆ ಮತ್ತು ಸರ್ವಶಕ್ತನಾದ ಅಲ್ಲಾಹನು ನಮ್ಮ ಪ್ರತಿಯೊಂದು ಅಗತ್ಯವನ್ನು ಪೂರೈಸುತ್ತಿರುವುದನ್ನು ನೋಡುತ್ತೇನೆ. ಸರ್ವಶಕ್ತನಾದ ಅಲ್ಲಾಹನಿಗಾಗಿ ಅವನ ಮಾರ್ಗದಲ್ಲಿ ಒಳಿತು ಮತ್ತು ತ್ಯಾಗವು ಅಲ್ಲಾಹನ ಅನುಗ್ರಹಗಳಿಗೆ ವಾರಸುದಾರನನ್ನಾಗಿ ಮಾಡುತ್ತಾನೆ.

ಆಫ್ರಿಕಾದ ಒಂದು ದೇಶ ಗಿನಿ ಕೊನಾಕ್ರಿ ಅಲ್ಲಿನ ಸ್ಥಳೀಯ ಮಿಷನರಿ ಕಮಾರ ಸಾಹಿಬ್ ಹೇಳುತ್ತಾರೆ: ಚಂದವನ್ನು ಸಂಗ್ರಹಿಸಲು ಒಂದು ಗ್ರಾಮಕ್ಕೆ ಭೇಟಿ ನೀಡಿದಾಗ ಅಲ್ಲಿ ನವ ಅಹ್ಮದಿ ಇಮಾಮರ ಪತ್ನಿಯಿಂದ ಚಂದವನ್ನು ನೀಡಲು ಕೇಳಿಕೊಂಡಾಗ ಅವರು ಐದು ಸಾವಿರ ಗಿನಿ ತೆಗದುಕೊಂಡು ಆಕಾಶಕ್ಕೆ ಕೈ ಎತ್ತಿ ಹೇಳಿದರು, ಓ ಅಲ್ಲಾಹನೇ! ನಿಮ್ಮ ಮಾರ್ಗದಲ್ಲಿ ನಾನು ಪಾವತಿಸುತ್ತಿರುವ ಈ ಒಟ್ಟು ಮೊತ್ತ ಮಾತ್ರ ನನ್ನ ಬಳಿ ಇದೆ, ಆದ್ದರಿಂದ ಅದನ್ನು ಸ್ವೀಕರಿಸು ಎಂದು ಆ ಮೊತ್ತವನ್ನು ಚಂದದಲ್ಲಿ ಪಾವತಿಸಿದರು. ಇವರು ನವ ಅಹ್ಮದಿ ಆಗಿದ್ದಾರೆ. ಅವಳು ಆಫ್ರಿಕಾದ ದೂರದ ಭಾಗದಲ್ಲಿ ವಾಸಿಸುತ್ತಿದ್ದಾಳೆ. ಸ್ಥಳೀಯ ಮಿಷನರಿ ಸಾಹಿಬ್ ಹೇಳುತ್ತಾರೆ: ನಾನು ಗ್ರಾಮಕ್ಕೆ ಭೇಟಿ ನೀಡಿ ಹಿಂದಿರುಗಿದಾಗ, ಐದು ಸಾವಿರ ಗಿನಿಗಳನ್ನು ಪಾವತಿಸಿದ ಮಹಿಳೆ ನನಗೆ ಹೇಳಿದರು. ಸರ್ವಶಕ್ತನಾದ ಅಲ್ಲಾಹನೊಂದಿಗಿನ ಇವತ್ತಿನ ವ್ಯಾಪಾರದಲ್ಲಿ ಲಭೆ ಲಭಿಸಿದೆ. ನೀವು ಹೋದ ನಂತರ, ಸರ್ವಶಕ್ತನಾದ ಅಲ್ಲಾಹನು ನನಗೆ ಸಂಬಂಧಿಕರೊಬ್ಬರ ಮೂಲಕ ಎಂಬತ್ತು ಸಾವಿರ ಗಿನಿ ಫ್ರಾಂಕ್‌ಗಳನ್ನು ಕಳುಹಿಸಿದನು, ಅದು ನನ್ನ ತ್ಯಾಗಕ್ಕಿಂತ ಬಹಳ ಹೆಚ್ಚಾಗಿದೆ.

ಗಿನಿ ಕೊನಾಕ್ರಿಯ ಸ್ಥಳೀಯ ಮಿಷನರಿ ಜಾಲು ಸಾಹಿಬ್ ಹೇಳುತ್ತಾರೆ ಅಶ್ರಹ್ ತೆಹ್ರೀಕ್ ಜದೀದ್‌ನ ಸಂದರ್ಭದಲ್ಲಿ, ಮಿಅಲ್ಲಿವ್ ಓಬ್ಬರು ಕುಂತಾಯಾಹ್‌ನ ಒಂದು ಗ್ರಾಮಕ್ಕೆ ಚಂದಾ ಸಂಗ್ರಹಿಸಲು ಬಂದರು. ಓರ್ವ ನವ ಅಹ್ಮದಿ ಶೇಖೂ ಸಾಹಿಬ್ ಮೂವತ್ತು ಸಆವಿರ ಫ್ರೆಂಕ್ ಗಿನಿಗಳನ್ನು ತೆಹ್ರೀಕ್ ಜದೀದ್‌ನಲ್ಲಿ ನೀಡಲು ವಾಗ್ದಾನ ಮಾಡಿದರು. ಪಾವತಿಯತ್ತ ಗಮನ ಸೆಳೆದಾಗ, ಇಂದು ನನ್ನ ಬಳಿ ಮನೆ ಖರ್ಚಿಗೆ ಕೇವಲ 30,000 ಇದೆ, ಆದರೆ ನಾನು ಅದನ್ನು ಅಲ್ಲಾಹನ ಮಾರ್ಗದಲ್ಲಿ ಅರ್ಪಿಸುತ್ತೇನೆ, ಅಲ್ಲಾಹನು ಇದನ್ನು ಸ್ವೀಕರಿಸಲಿ ಎಂದು ಹೇಳಿದರು. ಮರುದಿನ, ಅಲ್ಲಾಹನು ನನ್ನ ತ್ಯಾಗವನ್ನು ಸ್ವೀಕರಿಸಿದ್ದಾನೆ ಎಂದು ಅವರು ಬಹಳ ಉತ್ಸಾಹದಿಂದ ಕರೆ ಮಾಡಿ ಹೇಳಿದರು. ಚಂದ ನೀಡಿದ ಕೆಲವೇ ಗಂಟೆಗಳ ನಂತರ ನನ್ನ ಮಗ ನನಗೆ ಮನೆಯ ಖರ್ಚಿಗಾಗಿ ಮೂರು ಲಕ್ಷ ಫ್ರಾಂಕ್‌ಗಳನ್ನು ಕಳುಹಿಸಿದನು. ಈ ಘಟನೆಯ ನಂತರ ಅಲ್ಲಾಹನು ನನ್ನ ನಂಬಿಕೆಯನ್ನು ಬಲಪಡಿಸಿದ್ದಾನೆ ಎಂದು ಅವರು ಹೇಳುತ್ತಾರೆ. ಜಮಾತ್ ನಮ್ಮಿಂದ ಪಡೆಯುವ ಚಂದವನ್ನು ಅಲ್ಲಾಹನ ಮಾರ್ಗದಲ್ಲಿ ಖರ್ಚು ಮಾಡಲಾಗುವುದು ಮತ್ತು ನಾನು ಅದೇ ರೀತಿಯಲ್ಲಿ ತ್ಯಾಗವನ್ನು ಮುಂದುವರಿಸುತ್ತೇನೆ ಎಂದು ಗೇಳಿದರು. ಈ ಹಣದ ಖರ್ಚು ಸರಿಯಾಗಿದೆ ಮತ್ತು ಹಣ ವ್ಯರ್ಥವಾಗದ ಕಾರಣ ಅಲ್ಲಾಹನು ಅನುಗ್ರಹಿಸಿದ್ದಾನೆ ಎಂದು ಅವನು ತೃಪ್ತಿಪಡಿಸಿದನು.

ಕಝಾಕಿಸ್ತಾನ್‌ನ ಸ್ನೇಹಿತ ಶ್ರೀ ಬೈಗಾಮೆಟೋವ್ ಸಾಹಿಬ್. ಚಂದದಲ್ಲಿ ನಿಯಮಿತವಾಗಿ ಭಾಗವಹಿಸುವವರಾಗಿದ್ದಾರೆ ಅವರು ಹೇಳುತ್ತಾರೆ: ಜೂನ್ ತಿಂಗಳಲ್ಲಿ ನನ್ನನ್ನು ಕೆಲಸದಿಂದ ವಜಾಗೊಳಿಸಿ ನನ್ನ ಎಲ್ಲಾ ಸಂಬಳವನ್ನು ಮಾಲೀಕರು ಪಾವತಿಸಿದ್ದಾರೆ. ಈಗ ನಾನು ಪಿಂಚಣಿಯಲ್ಲಿದ್ದೇನೆ ಎನ್ನುತ್ತಾರೆ. ಕೆಲಸ ಬಿಟ್ಟ ಕೆಲವು ತಿಂಗಳುಗಳಲ್ಲಿ ಯಾವುದೋ ಅನಾರೋಗ್ಯದ ಕಾರಣ ದುಬಾರಿ ಬೆಲೆಯ ಔಷಧಗಳು ಮತ್ತು ಇತರ ವಸ್ತುಗಳನ್ನು ಖರೀದಿಸಬೇಕಾಗಿತ್ತು ಆದರೆ ಆರ್ಥಿಕ ಬೆಂಬಲದ ಕೊರತೆಯಿಂದ ನಾನು ತುಂಬಾ ಚಿಂತಿತನಾಗಿದ್ದೆ. ಮರುದಿನ, ರಸ್ತೆಯಲ್ಲಿ ನಡೆದುಕೊಂಡು ಹೋಗುವಾಗ, ನನ್ನ ಕ್ರೆಡಿಟ್ ಕಾರ್ಡ್ ಅನ್ನು ಪರಿಶೀಲಿಸಲು ನಾನು ಯೋಚಿಸಿದೆ. ನನ್ನ ಕ್ರೆಡಿಟ್ ಕಾರ್ಡ್ ಖಾಲಿಯಾಗುತ್ತದೆ ಎಂದು ನನಗೆ ತಿಳಿದಿತ್ತು. ಅದರಲ್ಲಿ ಏನೂ ಇಲ್ಲ. ಅದರಲ್ಲಿ ಹಣವನ್ನು ಹೊಂದಲು ಸಾಧ್ಯವಾಗಲಿಲ್ಲ ಆದರೆ ಹೇಗಾದರೂ ಪರಿಶೀಲಿಸಲು ನಿರ್ಧರಿಸಿದೆ. ನಾನು ಪರಿಶೀಲಿಸಿದಾಗ, ಕಾರ್ಡ್‌ನಲ್ಲಿ 190,000 ಸ್ಥಳೀಯ ಕರೆನ್ಸಿ ಇರುವುದರಿಂದ ನನಗೆ ಆಶ್ಚರ್ಯವಾಯಿತು. ನಾನು ಆಶ್ಚರ್ಯಚಕಿತನಾದನು ಮತ್ತು ಅಲ್ಲಾಹನಿಗೆ ಅಪಾರವಾಗಿ ಧನ್ಯವಾದವನ್ನು ಅರ್ಪಿಸಿದೆ. ನಾನು ಯಾವುದೇ ಕಾರಣ ನೀಡದೆ ರಾಜೀನಾಮೆ ನೀಡಿದ ಕಂಪನಿಯಿಂದ ನನ್ನ ಖಾತೆಗೆ ಹಣ ವರ್ಗಾವಣೆಯಾಗಿತ್ತು. ಕಂಪನಿಗೆ ಕರೆ ಮಾಡಿ ಕಾರಣ ತಿಳಿದುಕೊಂಡಿದ್ದು, ಕಂಪನಿಯ ಮಾಲೀಕರು ಪ್ರಾಮಾಣಿಕತೆ ಮತ್ತು ಸತ್ಯವಂತಿಕೆಯಿಂದ ಈ ಹಣವನ್ನು ಉಡುಗೊರೆಯಾಗಿ ಕಳುಹಿಸಿದ್ದಾರೆ ಎಂದು ಹೇಳಿದ್ದಾರೆ. ಇದೆಲ್ಲವೂ ತೆಹ್ರೀಕ್ ಜದೀದ್ ಮತ್ತು ವಕ್ಫ್ ಜದೀದ್ ನಿಧಿಗಳಲ್ಲಿ ಕ್ರಮಬದ್ಧತೆಯ ಪರಿಣಾಮವಾಗಿದೆ ಎಂದು ಹೇಳುತ್ತಾರೆ.

ಮಲೇಷಿಯಾದ ಸ್ನೇಹಿತರೊಬ್ಬರು ಭಾಕ್ರ ಸಾಃಇಬ್ ಅವರು ಹೇಳುತ್ತಾರೆ: ನನ್ನ ವೈಯಕ್ತಿಕ ಅನುಭವವೆಂದರೆ 2016–17ರ ನಡುವೆ ನಾನು ತೆಹ್ರೀಕ್ ಜದೀದ್‌ನಲ್ಲಿ 1000 ರಿಂಗಿಟ್ ನೀಡುವುದಾಗಿ ವಾಗ್ದಾನ ಮಾಡಿದ್ದೆ. ಆ ಸಮಯದಲ್ಲಿ ನನ್ನ ಆರ್ಥಿಕ ಪರಿಸ್ಥಿತಿಯಿಂದಾಗಿ ನಾನು ಪಾವತಿಸಲು ಸಾಧ್ಯವಾಗಲಿಲ್ಲ, ಅದು ಆ ಸಮಯದಲ್ಲಿ ನಿಜವಾಗಿಯೂ ಕಷ್ಟಕರವಾಗಿತ್ತು ಮತ್ತು ನನ್ನ ವ್ಯವಹಾರವು ತೊಂದರೆಗೊಳಗಾಗಿತ್ತು. ವಾಗ್ದಾನದ ಮೊತ್ತ ಪೂರ್ಣವಾಗಿ ಪಾವತಿಸುತ್ತೇನೆ ಎಂಬ ಭರವಸೆ ನನಗಿತ್ತು ಆದರೆ ನನಗೆ ಹಣ ಕೂಡ ಲಭಿಸುತ್ತಿರಲಿಲ್ಲ. ನನ್ನ ಉದ್ದೇಶವು ನಿಜವಾಗಿದ್ದರೆ ಮತ್ತು ಜಮಾತ್ ನಿಜವಾಗಿಯೂ ನಿಜವಾಗಿದೆ ಎಂದಾದರೆ, ಖಂಡಿತವಾಗಿಯೂ ಅಲ್ಲಾಹನು ವಿಷಯಗಳನ್ನು ಸುಲಭಗೊಳಿಸುತ್ತಾನೆ ಎಂದು ನಾನು ಅಲ್ಲಾಹನನ್ನು ಪ್ರಾರ್ಥಿಸುತ್ತಿದ್ದೆ. ವಾಗ್ದಾನವನ್ನು ಪಾವತಿಸಲು ಕೊನೆಯ ದಿನದ ಮೊದಲು, ವ್ಯಾಪಾರದಿಂದ ಆದಾಯವು ನಿಖರವಾಗಿ ಒಂದು ಸಾವಿರ ರಿಂಗಿಟ್ ಆಗಿತ್ತು. ನಾನು ಯೋಚಿಸದೆ ಸೆಕ್ರೆಟರಿ ಮಾಲ್ ಮನೆಗೆ ಹೋಗಿ 1000/– ರಿಂಗಿಟ್ ನೀಡಿದೆ. ಈ ಘಟನೆಯ ನಂತರದಿಂದ ನನಗೆ ಜಮಾತ್ ಮತ್ತು ಇಸ್ಲಾಂನ ಅಭಿವೃದ್ಧಿಗಾಗಿ ನಮ್ಮ ಉದ್ದೇಶಗಳು ಪ್ರಾಮಾಣಿಕವಾಗಿದ್ದರೆ, ಅಲ್ಲಾಹನು ಖಂಡಿತವಾಗಿಯೂ ಅಸಾಧಾರಣ ಸೌಲಭ್ಯಗಳನ್ನು ಸೃಷ್ಟಿಸುತ್ತಾನೆ ಎಂದು ನಾನು ಈ ಜಮಾತ್ನಲ್ಲಿ ಸಂಪೂರ್ಣ ನಂಬಿಕೆ ಹೊಂದಿದ್ದೇನೆ. ಆದ್ದರಿಂದ ಇದು ಪ್ರಪಂಚದ ಪ್ರತಿಯೊಂದು ದೇಶದಲ್ಲಿ ವಾಸಿಸುವ ಅಹ್ಮದೀಯರು ಹೊಂದಿರುವ ಒಂದು ರೀತಿಯ ಚಿಂತನೆಯಾಗಿದೆ. ಅವುಗಳ ನಡುವೆ ಸಾವಿರಾರು ಮೈಲುಗಳ ಅಂತರವಿದ್ದರೂ ಅಲ್ಲಾಹನು ಈ ರೀತಿಯಲ್ಲಿ ನಂಬಿಕೆಯನ್ನು ಬಲಪಡಿಸುತ್ತಾನೆ ಮತ್ತು ಜಮಾತ್‌ನ ಸತ್ಯಾಂಶವನ್ನು ಅವರಿಗೆ ತಿಳಿಸುತ್ತಾನೆ. ಇದು ನಂಬಿಕೆಯನ್ನು ಸಹ ಬಲಪಡಿಸುತ್ತದೆ.

ಜರ್ಮನಿಯ ಸ್ನೇಹಿತರೊಬ್ಬರು ಹೇಳುತ್ತಾರೆ: ನನ್ನ ಸಂಸ್ಥೆಯ ಆರ್ಥಿಕ ಪರಿಸ್ಥಿತಿ ಹದಗೆಟ್ಟಾಗ, ಕೆಲಸದ ಸಮಯವನ್ನು ಕಡಿಮೆಗೊಳಿಸಲಾಯಿತು, ಇದು ನನ್ನ ಆದಾಯವನ್ನು ಕಡಿಮೆ ಮಾಡಿತು. ತೆಹ್ರೀಕ್ ಜದೀದ್ ಸೆಮಿನಾರ್ ನಡೆದ ದಿನ, ವಿಶ್ವಾಸವರ್ಧಕ ಘಟನೆಗಳನ್ನು ಆಲಿಸುತ್ತ ನಾನು ನನ್ನ ಮನಸ್ಸಿನಲ್ಲಿ ಸರ್ವಶಕ್ತನಾದ ಅಲ್ಲಾಹನಿಗೆ ಐನೂರು ಯುರೋಗಳನ್ನು ಹೆಚ್ಚು ಪಾವತಿಸುತ್ತೇನೆ ಎಂದು ವಾಗ್ದಾನ ನೀಡಿದ್ದೆ. ಈ ನಿಟ್ಟಿನಲ್ಲಿ ಅವರು ನನಗೆ ದುಆಗಾಗಿ ಪತ್ರವನ್ನು ಬರೆದಿದ್ದರು ಮತ್ತು ಸ್ವತಃ ತಾವು ದುಆ ಮಾಡುತ್ತಿದ್ದರು. ಅಲ್ಲಾಹನು ಅನುಗ್ರಹಿಸಿದನು ಮತ್ತು ತೆಹ್ರೀಕ್ ಜದೀದ್‌ನ ಮೊದಲ ವಾಗ್ದಾನವನ್ನು ಪಾವತಿಸಿದ ನಂತರ, ಅವರು ಇನ್ನೂ ಆರು ನೂರು ಯುರೋಗಳನ್ನು ಪಾವತಿಸಲು ಸಾಧ್ಯವಾಯಿತು. ಕೆಲವು ದಿನಗಳ ನಂತರ, ಇನ್ನೊಂದು ಸಂಸ್ಥೆಯು ನೀವು ಮೊದಲ ಸಂಸ್ಥೆಯನ್ನು ತೊರೆದು ನಮಗೆ ಕೆಲಸ ಮಾಡಿದರೆ, ನಿಮ್ಮ ಸಂಬಳ ಮೊದಲ ಸಂಸ್ಥೆಗಿಂತ 1000 ಯುರೋಗಳು ಹೆಚ್ಚು ನೀಡಲಾಗುವುದು ಎಂದು ಕರೆದರು. ಅದರ ಬಗ್ಗೆ ಯೋಚಿಸಿದ ನಂತರ, ನಾನು ಈ ಹೊಸ ಸಂಸ್ಥೆಯಲ್ಲಿ ಕೆಲಸ ಮಾಡಲು ನಿರ್ಧರಿಸಿದೆ. ಈ ಸಂಸ್ಥೆಯ ಮಾಲೀಕರು, ನೀವು ನಿಮ್ಮ ಹಳೆಯ ಸಂಸ್ಥೆಯನ್ನು ತೊರೆದಿರುವುದರಿಂದ, ನಿನಗೂ ಮೂರು ತಿಂಗಳಿಗೆ ಪ್ರತಿ ತಿಂಗಳು ಎರಡು ಸಾವಿರ ಯುರೋಗಳ ನಿಯಮಿತ ಬೋನಸ್ ಅನ್ನು ಮೂರು ಕಂತುಗಳಲ್ಲಿ ನೀಡಲಾಗುವುದು ಮತ್ತು ಶುಕ್ರವಾರ, ಶನಿವಾರ ಮತ್ತು ಭಾನುವಾರ ರಜೆ ಇರುತ್ತದೆ ಎಂದು ಕೆಲಸದ ಬಗ್ಗೆ ಹೇಳಿದರು. ಈ ರೀತಿಯಾಗಿ, ಸರ್ವಶಕ್ತನಾದ ಅಲ್ಲಾಹನ ಅನುಗ್ರಹದಿಂದ ತೆಹ್ರೀಕ್ ಜದೀದ್‌ನಲ್ಲಿ ಹೆಚ್ಚುವರಿ ತ್ಯಾಗದ ಪರಿಣಾಮವಾಗಿ, ನನ್ನ ಸಂಬಳವನ್ನು ಹೆಚ್ಚಿಸಿದೆ ಮಾತ್ರವಲ್ಲದೆ ಜುಮುಅ ನಮಾಝ್‌ಗೆ ನಿಯಮಿತವಾಗಿ ವ್ಯವಸ್ಥೆಯನ್ನು ಸಹ ಮಾಡಲಾಯಿತು.

ಐವರಿ ಕೋಸ್ಟ್‌ನ ಮುಬಲ್ಲಿಗ್ ಸಾಹಿಬ್ ಬರೆಯುತ್ತಾರೆ ತೆಹ್ರೀಕ್ ಜದೀದ್‌ನ ಚಂದವನ್ನು ಸಂಗ್ರಹಿಸುವ ಸಲುವಾಗಿ ಅವರು ಯೋಲ್ಲೆಸ್ಸೊ

ಎಂಬ ಗ್ರಾಮದಲ್ಲಿ ಚಂದಾದ ಅಭಿಯಾನವನ್ನು ಆಯೋಜಿಸಿದರು. ತೀರಾ ಬಡವನಾಗಿದ್ದ ಒಬ್ಬ ಮುದುಕ ತನ್ನ ಆರ್ಥಿಕ ಸ್ಥಿತಿಗೆ ತಕ್ಕಂತೆ ಇನ್ನೂರು ಮುನ್ನೂರು ಫ್ರಾಂಕ್ ಕೊಟ್ಟರೆ ದೊಡ್ಡದು ಎಂದುಕೊಂಡೆವು. ಅವರು ಎದ್ದು ಮನೆಗೆ ಹೋದರು. ಚಂದಾದಲ್ಲಿ ನೀಡಲು ಹಣವನ್ನು ಸ್ವತಃ ತಂದಿದ್ದಲ್ಲದೆ ತಮ್ಮ ಪುತ್ರನನ್ನು ಸಹ ನೀನೂ ಚಂದಾ ನೀಡು ಎಂದು ಕರೆತಂದರು. ಹೀಗೆ ಅವರು ಎರಡು ಸಆವಿರ ಫ್ರಾಂಕ್‌ಗಳನ್ನು ನೀಡಿದರು, ಇದು ಅವರ ಯೋಗ್ಯತೆಯ ಪ್ರಕಾರ ಗಣನೀಯ ಮೊತ್ತವಾಗಿತ್ತು. ಅವರ ಮಗನೂ ಐನೂರು ಫ್ರಾಂಕ್ ನೀಡಿದನು. ಇದು ಸಂಪತ್ತಿನ ಮೇಲಿನ ಪ್ರೀತಿಯಿಂದ ಅಲ್ಲಾಹನ ಧರ್ಮಕ್ಕಾಗಿ ತ್ಯಾಗದ ಮನೋಭಾವವಾಗಿದೆ.

ಆಫ್ರಿಕಾದ ಇನ್ನೊಂದು ದೇಶ ಸೆನೆಗಲ್. ಮುಅಲಿಮ್ ಸಾಹಿಬ್ ಹೇಳುತ್ತಾರೆ ಮುಹಮ್ಮದ್ ಅಂಜೈ ಸಾಹಿಬ್ ಬಡ ಆದರೆ ಪ್ರಾಮಾಣಿಕ ಅಹ್ಮದಿಯಾಗಿದ್ದಾರೆ. ಅವರ ಪತ್ನಿ ಅನಾರೋಗ್ಯದಿಂದ ಬಳಲುತ್ತಿದ್ದರು. ವೈದ್ಯರು ಬರೆದ ಔಷಧಿಗಳ ಬೆಲೆ ಹದಿನೈದು ಸಾವಿರ ಫ್ರಾಂಕ್ ಆಗಿತ್ತು ಆದರೆ ಅವರ ಬಳಿ ಅಷ್ಟು ಮೊತ್ತ ಇರಲಿಲ್ಲ. ಸಾಲ ಪಡೆಯಲು ಸ್ನೇಹಿತನ ಬಳಿ ಹೋಗಿದ್ದರು. ಅವನಿಂದ ಸಾಲ ಪಡೆದರು. ಅಷ್ಟರಲ್ಲಿ ನಮಾಝ್‌ನ ಸಮಯ ಬಂತು. ಅವರು ನಮಝ್ ನಿರ್ವಹಿಸಲು ಮಿಷನ್ ಹೌಸ್‌ಗೆ ಬಂದರು. ಅವರು ತಮ್ಮ ಪತ್ನಿಯ ಆರೋಗ್ಯದ ಬಗ್ಗೆ ಮುಅಲ್ಲಿಮ್ ಸಾಹಿಬ್ ಅವರಲ್ಲಿ ಪ್ರಸ್ತಾಪಿಸಿದರು ಮತ್ತು ಅವರು ಇನ್ನೂ ಸಂಪೂರ್ಣ ವಿವರಗಳನ್ನು ಹೇಳಿರಲಿಲ್ಲ, ಅಷ್ಟರಲ್ಲಿ ಮುಅಲ್ಲಿಮ್ ಸಾಹಿಬ್ ಅವರು ಮೊದಲು ತಮ್ಮ ಭಾಷಣವನ್ನು ಪ್ರಾರಂಭಿಸಿದರು ಮತ್ತು ದೇವರ ಮಾರ್ಗದಲ್ಲಿ ತ್ಯಾಗ ಮಾಡುವ ಅಶ್ರಃ ತೆಹ್ರೀಕ್ ಜದೀದ್ ಬಗ್ಗೆ ಪ್ರಸ್ತಾಪಿಸಲು ಪ್ರಾರಂಭಿಸಿದರು. ಅಲ್ಲಾಹನು ಸೌಲಭ್ಯವದಗಿಸುತ್ತಾನೆ. ಅದಾಗ್ಯೂ, ಅವರು ತಮ್ಮ ಸಂಕಷ್ಟದ ಬಗ್ಗೆ ಪ್ರಸ್ತಾಪಿಸಿ ಹೇಳಿದರು ನಾನು ನಾನು ಎರಡು ನಾಲ್ಕು ದಿನಗಳ ನಂತರ ಚಂದವನ್ನು ಪಾವತಿಸುತ್ತೇನೆ. ಈ ವೇಳೆ ಪತ್ನಿಗೆ ಔಷಧಿ ಖರೀದಿಸಲು ಸಾಲ ಮಾಡಿದ್ದೇನೆ. ಆದಾಗ್ಯೂ, ಅವರು ಮಿಷನ್ ಹೌಸ್ ಅನ್ನು ತೊರೆದರು. ಕೆಲವು ನಿಮಿಷಗಳ ನಂತರ, ಅವರು ಹಿಂತಿರುಗಿದರು ಮತ್ತು ನಾನು ಮಿಷನ್ ಹೌಸ್ನಿಂದ ಹೊರಬಂದ ತಕ್ಷಣ, ನಾನು ಮುಅಲ್ಲಿಮ್ ಸಾಹಿಬರು ಚಂದ ನೀಡಲು ಪ್ರೇರೇಪಿಸಿದರು ಆದರೆ ನಾನು ಅವರ ಪ್ರೇರಣೆಗೆ ಏನನ್ನೂ ಪಾವತಿಸಲಿಲ್ಲ ಎಂದು ಹೇಳಿದರು. ಇದರಿಂದ ನನ್ನ ಹೃದಯ ತುಂಬಾ ಭಾರವಾಗಿತ್ತು. ಆದ್ದರಿಂದ, ನೀವು ತೆಹ್ರೀಕ್ ಜದೀದ್‌ನಲ್ಲಿ ಈ ಐದು ಸಾವಿರ ಫ್ರಾಂಕ್ಗಳನ್ನು ಕಡಿತಗೊಳಿಸಿಕೊಳ್ಳಿ. ಅಗತ್ಯ ಔಷಧ ಮಾತ್ರ ಖರೀದಿಸುತ್ತೇನೆ. ಇಷ್ಟು ಹೇಳಿ ರಸೀದಿ ತೆಗೆದುಕೊಂಡು ಹೊರಟರು. ಅವರು ಮಿಷನ್ ಹೌಸ್‌ನಿಂದ ಹೊರಬಂದ ನಂತರ ಇನ್ನೂ ಫಾರ್ಮಸಿಯನ್ನು ತಲುಪಿರಲಿಲ್ಲ ಅಷ್ಟರಲ್ಲಿ ಅವರಿಗೆ ಒಂದು ಕರೆ ಬಂತು. ನನಗೆ ಬೆಡ್ ಮಾಡಿಸಬೇಕಾಗಿದೆ ಎಂದು ಒಬ್ಬ ಮಹಾನುಭಾವರು ಹೇಳಿದರು. ನಾನು ನಿಮಗೆ ಐವತ್ತು ಸಾವಿರ ಫ್ರಾಂಕ್‌ಗಳನ್ನು ಸೆಫಾದಲ್ಲಿ ಟೆಲಿಫೋನ್ ಆರ್ಡರ್ ಮೂಲಕ ಕ್ರೆಡಿಟ್ ಬ್ಯಾಂಕ್‌ಗೆ ವರ್ಗಾಯಿಸುತ್ತಿದ್ದೇನೆ. ನಿಮ್ಮ ಪತ್ನಿ ಚೇತರಿಸಿಕೊಂಡಾಗ, ನನ್ನ ಬೆಡ್ ಅನ್ನು ತಯಾರಿಸಿ ಕೊಡಿ ಮತ್ತು ಉಳಿದ ಹಣವನ್ನು ನಾನು ನಂತರ ಪಾವತಿಸುತ್ತೇನೆ. ಅವರು ಫಾರ್ಮಸಿಗೆ ಹೋಗದೆ ಮತ್ತೆ ಮಿಷನ್ ಹೌಸ್‌ಗೆ ಬಂದು ಮುಅಲ್ಲಿಮ್ ಅವರಿಗೆ ನಡೆದ ಘಟನೆಯನ್ನೆಲ್ಲ ಹೇಳಿ ಚಂದಾದ ಅನುಗ್ರಹದಿಂದ ದೇವರು ನನಗೆ ವಿಶೇಷ ಕೃಪೆ ನೀಡಿದ್ದಾನೆ ಮತ್ತು ನನಗೆ ಅವಶ್ಯಕ್ಕಿಂತ ಹೆಚ್ಚು ಹಣವನ್ನು ನೀಡಿದ್ದಾನೆ ಎಂದು ಹೇಳಿದರು.

ಸೆನೆಗಲ್‌ನಿಂದ, ಓವ್ ಮುಸಲ್ಲಿಮ್ ಸಾಹಿಬ್ ಅವರು ಹೇಳುತ್ತಾರೆ. ಪ್ರಾಮಾಣಿಕ ಸ್ನೇಹಿತರಾದ ವಾಗನ್ ಸಾಹಿಬ್ ತೆಹ್ರೀಕ್ ಜದೀದ್ ಚಂದಾಗಾಗಿ ಹತ್ತು ಸಾವಿರ ಫ್ರಾಂಕ್‌ಗಳನ್ನು ವಾಗ್ದಾನ ನೀಡಿದರು. ತೆಹ್ರೀಕ್ ಜದೀದ್ ವರ್ಷವು ಕೊನೆಗೊಳ್ಳುತ್ತಿದೆ ಮತ್ತು ನಿಮ್ಮ ಚಂದವು ಇನ್ನೂ ಬಾಖಿ ಇದೆ. ಅದಕ್ಕೆ ಅವರು ಹೇಳಿದರು ಸದ್ಯದಲ್ಲಿ ನನ್ನ ಬಳಿ ಹಣವಿಲ್ಲ, ಆದರೆ ಚಿಂತೆ ಬೇಡ, ನನ್ನ ಬಟ್ಟೆ ಮಾರಬೇಕಾದರೂ ಅವಧಿ ಮುಗಿಯುವ ಮುನ್ನವೇ ಪಾವತಿಸುತ್ತೇನೆ ಎಂದರು. ಇದು ಅವರ ಉತ್ಸಾಹವಾಗಿತ್ತು. ಕೆಲವು ದಿನಗಳ ನಂತರ ಅವರೇ ನನ್ನ ಮನೆಗೆ ಬಂದು ಅವರ ತೆಹ್ರೀಕ್ ಜದೀದ್ ಚಂದವನ್ನು ಸ್ವೀಕರಿಸಲು ಕೇಳಿದರು ಮತ್ತು ಅವರು ತುಂಬಾ ಚಿಂತಿತರಾಗಿದ್ದಾರೆಂದು ಹೇಳಿದರು ಮತ್ತು ಇಂದು ನನ್ನ ಪುತ್ರಿಯು ನನಗೆ ನಂಬಲಾಗದಷ್ಟು ಹಣವನ್ನು ಕಳುಹಿಸಿದ್ದಾಳೆ. ಆದ್ದರಿಂದ ಮೊತ್ತ ಮೊದಲು ನಾನು ಚಂದವನ್ನು ಪಾವತಿಸಲು ಬಂದಿದ್ದೇನೆ. ಯಾವುದಕ್ಕೂ ತಲೆಕೆಡಿಸಿಕೊಳ್ಳದ ಅಂತಹ ಪ್ರಾಮಾಣಿಕ ಜನರಿದ್ದಾರೆ.

ನೈಜರ್‌ನ ಅಮೀರ್ ಸಾಹಿಬ್ ಹೇಳುತ್ತಾರೆ: ಓರ್ವ ಮುಅಲ್ಲಿಮ್ ಸಾಹಿಬ್ ಇದ್ದಾರೆ ಅವರ ಪತ್ನಿ ಗೃಹಿಣಿಯಾಗಿದ್ದಾರೆ. ಅವರ ಸ್ವಂತ ಆದಾಯವಿಲ್ಲ. ಮುಅಲಿಮ್ ಸಾಹಿಬ್ ಅವರೇ ಸ್ವತಃ ಅವರ ತೆಹ್ರೀಕ್ ಜದೀದ್‌ನ ವಾಗ್ದಾನವನ್ನು ಪೂರೈಸುತ್ತಿದ್ದರು. ಅವರ ಪತ್ನಿಗೆ ಇದರ ಬಗ್ಗೆ ತಿಳಿದಾಗ, ಈ ವರ್ಷ ನನ್ನ ಚಂದವನ್ನು ನಾನೇ ಪಾವತಿಸುತ್ತೇನೆ ಮತ್ತು ಎಂಟು ಸಾವಿರ ಸೆಫವನ್ನು ವಾಗ್ದಾನವನ್ನು ಬರೆಸಿದರು. ಅವರ ಪತಿ ಅವರಿಗೆ ನೀವು ಹೇಗೆ ಪಾವತಿಸುತ್ತೀರಿ ಎಂದು ಕೇಳಿದರು. ಅವರು ಹೇಳಿದರು, ಅಲ್ಲಾಹನು ನನ್ನ ತ್ಯಾಗವನ್ನು ಸ್ವೀಕರಿಸುತ್ತಾನೆ ಎಂದು ನನಗೆ ಖಾತ್ರಿಯಿದೆ ಮತ್ತು ಕೆಲವು ದಿನಗಳು ಕಳೆದವು, ಅವರ ನೆರೆಹೊರೆಯ ಮಹಿಳೆಯೊಬ್ಬರು ಅವಳ ಬಳಿಗೆ ಬಂದು ನಿಮಗೆ ಹೊಲಿಯಲು ತಿಳಿದಿದ್ದರೆ ನನ್ನ ಬಟ್ಟೆಗಳನ್ನು ಹೊಲಿಯಿರಿ ಎಂದು ಹೇಳಿ ಅದೇ ಸಮಯದಲ್ಲಿ 3000 ಸೆಫಾ ಮುಂಗಡವನ್ನು ನೀಡಿದರು, ಅವರು ತಕ್ಷಣವೇ ತೆಹ್ರೀಕ್ ಜದೀದ್‌ಗೆ ಆ ಮೊತ್ತವನ್ನು ಪಾವತಿಸಿದರು. ಅಂದಿನಿಂದ ಅವರು ತುಂಬಾ ಕೆಲಸವನ್ನು ಹೊಂದಿದ್ದರು, ಅವರು ತಮ್ಮ ದಾನವನ್ನು ಸುಲಭವಾಗಿ ಪೂರ್ಣಗೊಳಿಸಿದರು. ತೆಹ್ರೀಕ್ ಪ್ರಾರಂಭವಾದಾಗ, ಮಹಿಳೆಯರು ಹಝ್ರತ್ ಮುಸ್ಲೆಹ್ ಮೌಊದ್(ರ) ಅವರಿಗೆ ಪತ್ರ ಬರೆದರು, ಇಂದು ನೀವು ಐದು ರೂಪಾಯಿ ಅಥವಾ ಹತ್ತು ರೂಪಾಯಿಗಳನ್ನು ನೀಡಿ ಎಂದು ಹೇಳಿದ್ದೀರಿ, ಆದರೆ ನಾವು ಒಂದೇ ಬಾರಿಗೆ ಈ ಮೊತ್ತವನ್ನು ನೀಡಲು ಸಾಧ್ಯವಿಲ್ಲ. ಒಂದೊಂದು, ಎರಡರಿಂದ ಎರಡು ರೂಪಾಯಿ ನಾವು ಕೊಡಬಹುದು. ನಮಗೆ ಒಂದು ತಿಂಗಳು ಕೊಡಿ. ಅಂದು ತೋರಿದ ಚೈತನ್ಯ ಇಂದಿಗೂ ಉಳಿದುಕೊಂಡಿದೆ, ಆದರೆ ಸಾವಿರಾರು ಮೈಲುಗಳಷ್ಟು ದೂರದಲ್ಲಿರುವ ಜನರಲ್ಲಿ. ಅವರು ಕಾಲಘಟ್ಟದ ಖಲೀಫ ಅವರ ನೇರ ಧ್ವನಿಯನ್ನು ಕೇಳುತ್ತಾರೆ, ಆದರೆ ಅವರಿಗೆ ಅರ್ಥವಾಗುವುದಿಲ್ಲ. ಕೆಲವರಿಗೆ ಭಾಷೆ ಗೊತ್ತಿಲ್ಲದಿದ್ದರೂ ಪ್ರಾಮಾಣಿಕತೆಯನ್ನು ಬೆಳೆಸಿಕೊಂಡಿದ್ದಾರೆ.

ಸೆನೆಗಲ್‌ನಿಂದ ಮುಅಲ್ಲಿಮ್ ಸಾಹಿಬ್ ಬರೆಯುತ್ತಾರೆ. ತಾಂಬಕೊಂಡದಲ್ಲಿ ಒಂದು ಜಮಾತ್ ಇದೆ ಅಲ್ಲಿ ಸಯೀದಿ ಸಾಹಿಬ್ ಅವರ ಬಳಿ ತನ್ನದೇ ಆದ ಹಸು ಮೈಕೆಗಳ ಹಿಂಡಿದೆ. ಅವರು ಕರೆ ಮಾಡಿ ತೆಹ್ರೀಕ್ ಜದೀದ್ ಎಂದರೇನು ಎಂದು ಕೇಳಿದರು. ತೆಹ್ರೀಕ್ ಜದೀದ್‌ಗೆ ಅಹ್ಮದಿಯರು ಕೊಡುಗೆ ನೀಡಬೇಕು ಎಂದು ಅವರು ಜನರಿಂದ ಕೇಳಿದ್ದರು. ಮುಅಲ್ಲಿಮ್ ಸಾಹಿಬ್ ಅವರಿಗೆ ತೆಹ್ರೀಕ್ ಜದೀದ್ ಬಗ್ಗೆ ವಿವರವಾಗಿ ಹೇಳಿದರು ಮತ್ತು ಈ ದಿನಗಳಲ್ಲಿ ತೆಹ್ರೀಕ್ ಜದೀದ್‌ನ ಅಶ್ರಹ್ ನಡೆಯುತ್ತಿದೆ ಎಂದು ಹೇಳಿದರು. ಅವರು ಹೇಳಿದರು ನನ್ನ ತಂದೆ ಅತ್ಯಂತ ಶ್ರೀಮಂತ ವ್ಯಕ್ತಿಯಾಗಿದ್ದರು ಆದರೆ ಅವರು ಅಲ್ಲಾಹನ ಸಲುವಾಗಿ ಝಕಾತ್ ಮತ್ತು ಅಲ್ಲಾಹನ ಮಾರ್ಗದಲ್ಲಿ ಚಂದ ನೀಸುವುದರಲ್ಲಿ ದುರ್ಬಲರಾಗಿದ್ದರು, ಆದರೆ ಅವರು ಮೌಲವಿಗಳಿಗಾಗಿ ಸತ್ಕರಿಸುತ್ತಿದ್ದರು. ಅವರ ತಂದೆಯ ಮರಣದ ನಂತರ, ಅನೇಕ ಪ್ರಾಣಿಗಳು ಅವರ ಪಾಲಿಗೆ ಬಂದಿವೆ, ಆದರೆ ಅವರಿಗೂ ಕೂಡ ಅನ್ಫಾಕ್ ಫೀ ಸಬೀಲಿಲ್ಲಾಹ್ ಬಗ್ಗೆ ಆಸಕ್ತಿಯನ್ನು ಬೆಳೆಸಿಕೊಂಡಿಲ್ಲ. ಮುಅಲಿಂ ಸಾಹೇಬರು ಝಕಾತ್ ಮತ್ತಿತರ ಚಂದಗಳತ್ತ ಗಮನ ಸೆಳೆದಾಗ ಅವರು ಒಂದು ಹಸು ಮತ್ತು ಎರಡು ಕುರಿಗಳನ್ನು ಚಂದಾದಲ್ಲಿ ನೀಡಿದರು. ಮತ್ತು ಅದರಲ್ಲಿ ಒಂದು ಕುರಿ ವಿಶೇಷವಾಗಿ ತೆಹ್ರೀಕ್ ಜದೀದ್‌ಗೆ ಎಂದು ಹೇಳಿದರು. ಏಳು ದಿನಗಳ ನಂತರ, ಪ್ರಾಣಿಗಳಲ್ಲಿ ವಿಶೇಷ ರೀತಿಯ ಸಾಂಕ್ರಾಮಿಕ ರೋಗವು ಹರಡುತ್ತಿದೆ, ಇದರಿಂದಾಗಿ ದೇಹದಿಂದ ನೀರು ಹರಿಯುತ್ತದೆ ಮತ್ತು ಪ್ರಾಣಿಗಳು ಸಾಯುತ್ತಿವೆ ಎಂದು ಅವರು ಕನಸು ಕಂಡರು. ಅವರು ಸ್ವತಃ ದೊಡ್ಡ ಹಿಂಡಿನ ಒಡೆಯನಾಗಿರುವುದರಿಂದ ತನ್ನ ಪ್ರಾಣಿಗಳೂ ಅಲ್ಲೇ ಇರುತ್ತವೆ ಎಂದು ಕನಸಿನಲ್ಲಿ ಅಂದುಕೊಂಡರು. ಆದ್ದರಿಂದ ಅವರು ತನ್ನ ಕನಸಿನಲ್ಲಿ ಓ ದೇವರೇ! ನನ್ನ ಪ್ರಾಣಿಗಳನ್ನು ರಕ್ಷಿಸು ಎಂದು ಹೇಳಿದರು. ಇದಕ್ಕೆ, ತೆಹ್ರೀಕ್ ಜದೀದ್ ಇಂದಾಗಿ ನಿಮ್ಮ ಪ್ರಾಣಿಗಳು ಸುರಕ್ಷಿತವಾಗಿರುತ್ತವೆ ಎಂಬ ದೊಡ್ಡ ಧ್ವನಿಯನ್ನು ಅವರು ಕನಸಿನಲ್ಲಿ ಕೇಳಿದರು. ಇದರ ನಡುವೆ ಅವರಿಗೆ ಒಂದು ಕಾಗದವನ್ನು ತೋರಿಸಲಾಯಿತು ಅದರಲ್ಲಿ ಮೊದಲ ಸಾಲಿನಲ್ಲಿ ಬಿಸ್ಮಿಲ್ಲಾಹಿರ್ರಹ್ಮಾನ್ ನಿರ್ರಹೀಮ್ ಎಂದು ಬರೆದು ಅವರ ಹೆಸರನ್ನೂ ಬರೆದಿತ್ತು. ಅವರ ಕಣ್ಣು ತೆರೆಯಿತು. ಮುಅಲ್ಲಿಮ್ ಸಾಹಿಬ್ ಅವರನ್ನು ಕರೆ ಮಾಡಿ ಕನಸನ್ನು ಹೇಳಿದರು. ಅದಕ್ಕೆ ಮುಅಲ್ಲಿಮ್ ಸಾಹಿಬರು ನಿಮಗೆ ನೀಡಿದ ರಶೀದಿಯ ಮೇಲಿನ ಸಾಲನ್ನು ಓದಿ. ಅಲ್ಲಿ ಬಿಸ್ಮಿಲ್ಲಾಹಿರ್ರಹ್ಮಾನ್ ನಿರ್ರಹೀಮ್ ಎಂದು ಬರೆಯಲಾಗಿದೆ ಮತ್ತು ಅದರ ಕೆಳಗೆ ನಿಮ್ಮ ಹೆಸರನ್ನೂ ಬರೆಯಲಾಗಿದೆ. ತದನಂತರ ತೆಹ್ರೀಕ್ ಜದೀದ್‌ನ ಚಂದಾವನ್ನು ಕೆಳಗೆ ಬರೆಯಲಾಗಿದೆ. ಇದಲ್ಲದೆ, ಅವರು ಏನನ್ನೂ ಓದಲು ಸಾಧ್ಯವಿಲ್ಲ. ಆದರೆ, ನಾನು ರಸೀದಿಯನ್ನು ನೋಡಿದಾಗ ಮತ್ತು ಕನಸನ್ನು ನೋಡಿದಾಗ, ಈ ಘಟನೆಯು ನನ್ನ ವಿಶ್ವಾಸವನ್ನು ವರ್ಧಿಸಿದೆ ಎಂದು ಅವರು ಹೇಳುತ್ತಾರೆ. ಅಲ್ಲಾಹನು ವಿಚಿತ್ರ ರೀತಿಯಲ್ಲಿ ಮಾರ್ಗದರ್ಶನ ನೀಡುತ್ತಾನೆ.

ಶಿಯಾಂಗಾ, ತಂಜಾನಿಯಾದ ಶಿಕ್ಷಣತಜ್ಞ ಬರೆಯುತ್ತಾರೆ. ಜಮಾತ್‌ನ ನವ ಅಹ್ಮದಿ ಹಿರಿಯರಲ್ಲಿ ಒಬ್ಬರಾದ ರಂಜಾನ್ ಸಾಹಿಬ್ ತೆಹ್ರೀಕ್ ಜದೀದ್‌ಗಾಗಿ ಉತ್ತಮ ಗುಣಮಟ್ಟದ ವಾಗ್ದಾನವನ್ನು ಬರೆಸಿದರು. ವ್ಯವಸಾಯ ಮಾಡಿ ಜೀವನ ನಡೆಸುತ್ತಿದ್ದ ಇವರು ಮಳೆ ಕೊರತೆಯಿಂದ ಸಾಕಷ್ಟು ರೈತರಿಗೆ ಉತ್ತಮ ಬೆಳೆ ಸಿಗದೇ ಪರದಾಡುವಂತಾಗಿತ್ತು. ರಂಜಾನ್

ಸಾಹಿಬ್ ಅವರು ತಹ್ರೀಕ್ ಜದೀದ್‌ನ ವಾಗ್ದಾನವನ್ನು ಹೇಗೆ ಪೂರೈಸುತ್ತಾರೆ ಎಂಬ ಬಗ್ಗೆ ಯಾವಾಗಲೂ ಚಿಂತಿಸುತ್ತಿದ್ದರು ಎಂದು ಹೇಳಿದರು. ಅವರು ಹೇಳುತ್ತಾರೆ ನಾನು ಇದೇ ಚಿಂತೆಯಲ್ಲಿದ್ದೆ ಒಂದು ದಿನ ಬಹಳ ದಿನಗಳಿಂದ ನನ್ನನ್ನು ಸಂಪರ್ಕಿಸದ ಆತ್ಮೀಯರಿಂದ ಕರೆ ಬಂದಿತು ಅವರು ಕರೆ ಮಾಡಿ ನಾನು ನಿಮಗೆ ಸ್ವಲ್ಪ ಹಣ, ನಿಮ್ಮ ಮನೆಗೆ ಸ್ವಲ್ಪ ಆಹಾರವನ್ನು ಖರೀದಿಸಲು ಹಣವನ್ನು ಕಳುಹಿಸುತ್ತಿದ್ದೇನೆ ಎಂದು ಹೇಳಿದರು. ಈ ಹಿರಿಯರು ಹಣವನ್ನು ಸ್ವೀಕರಿಸಿದಾಗ, ಅವರು ನೇರವಾಗಿ ಸೆಕ್ರೆಟರಿ ಮಾಲ್ ಬಳಿ ಹೋಗಿ ತಮ್ಮ ವಾಗ್ದಾನವನ್ನು ಪೂರೈಸಿದರು ಮತ್ತು ಹೆಚ್ಚುವರಿ ಹಣವನ್ನು ಪಾವತಿಸಿದರು. ಚಂದಾದ ವಗ್ದಾನವನ್ನು ಪೂರೈಸಲು ನನ್ನ ಅಲ್ಲಾಹನು ನನಗೆ ಸಹಾಯ ಮಾಡಿದ್ದಾನೆ ಎಂದು ಅವರು ಹೇಳುತ್ತಾರೆ.

ಒಂದೆಡೆ ಜಮಾಅತಿನ ವಿರೋಧಿಗಳು ಜಮಾಅತನ್ನು ಕೊನೆಗೊಳಿಸಲಿಕ್ಕಾಗಿ ಪರಿಶ್ರಮಿಸುತ್ತಿದ್ದಾರೆ. ಆದರೆ ಮತ್ತೊಂದೆಡೆ ಅಲ್ಲಾಹನು ನವ ಅಹ್ಮದಿಯರ ಹೃದಯದಲ್ಲಿ ಜಮಾಅತಿನ ಪರವಾಗಿ ತ್ಯಾಗಮಾಡುವ ಉತ್ಸಾಹವನ್ನು ಉಂಟುಮಾಡಿದನು ಮತ್ತು ಅವರಿಗೆ ದಯಪಾಲಿಸುತ್ತಲೂ ಇರುವನು.

ಅಲ್ಲಾಹನು ಹೊತ್ತಿಸಿದ ಈ ದೀಪವನ್ನು ಈ ಎದುರಾಳಿಗಳು ಊದುವುದರಿಂದ ನಂದಿಹೋಗುವುದೇ? ಅವರು ಎಷ್ಟು ಶ್ರಮಿಸುವುದಾದರೂ ಪರಾಜಯ ಮತ್ತು ಸೋಲೇ ವಿರೋಧಿಗಳಿಗೆ ವಿಧಿಸಿದೆ ಮತ್ತು ಜಮಾಅತ್ ಲೋಕದ ಎಲ್ಲ ಮೂಲೆಗಳಲ್ಲೂ ತ್ಯಾಗಗಳ ಉದಾಹರಣೆಗಳನ್ನು ನೆಲೆನಿಲ್ಲಿಸುತ್ತಾ ಅಭಿವೃದ್ಧಿ ಹೊಂದುತ್ತಾ ಇದೆ.

ಜಮಾಅತಿನ ವಿರುದ್ಧ ಎಲ್ಲೆಡೆ ಪಿತೂರಿ ಇದ್ದ ಕಾರಣದಿಂದಲೇ ಹಝ್ರತ್ ಮುಸ್ಲಿಹ್ ಮೌಊದ್(ರ) ತಹ್ರೀಕ್ ಜದೀದನ್ನು ಆರಂಭಿಸಿದ್ದರು. ಎಲ್ಲಿಯ ವರೆಗೆ ಎಂದರೆ, ಸರ್ಕಾರದ ಅಧಿಕಾರಿಗಳು ಕೂಡ ಎದುರಾಳಿಗಳನ್ನು ಬೆಂಬಲಿಸುತ್ತಿದ್ದರು.

ತಬ್ಲೀಗ್ ಮಾಡಿಕೊಂಡು ಜಮಾಅತನ್ನು ವರ್ಧಿಸುವುದು ಮತ್ತು ಲೋಕದ ಪ್ರತಿಯೊಂದು ದೇಶದಲ್ಲಿ ಅಹ್ಮದಿಯಾ ಜಮಾಅತಿನ ಮೂಲಕ ಇಸ್ಲಾಮಿನ ಧ್ವಜವನ್ನು ಹಾರಿಸುವುದೇ ತಹ್ರೀಕ್ ಜದೀದಿನ ಉದ್ದೇಶವಾಗಿತ್ತು. ಒಟ್ಟಿನಲ್ಲಿ, ಅಹ್ಮದಿಯಾ ಜಮಾಅತಿನ ಮೂಲಕ ಇಸ್ಲಾಮಿನ ಮಡಿಲಲ್ಲಿ ಬಂದ ಈ ಜನರೇ ನಂಬಿಕೆ, ದೃಢವಿಶ್ವಾಸ ಮತ್ತು ತ್ಯಾಗದ ಉದಾಹರಣೆಗಳನ್ನು ಸ್ಥಾಪಿಸಲು ಪ್ರಯತ್ನಿಸುವವರಾಗಿದ್ದಾರೆ.

ತಹ್ರೀಕ್ ಜದೀದ್ ಮತ್ತು ಅದರ ಚಾರಿತ್ರಿಕ ಹಿನ್ನೆಲೆಗೆ ಸಂಬಂಧಿಸಿ ಇನ್ನಷ್ಟು ಹೇಳುವೆನು. ಜಮಾಅತಿನ ವಿರುದ್ಧ ಎಲ್ಲೆಡೆ ಪಿತೂರಿ ಮತ್ತು ಕೋಲಾಹಲ ಏಳುತ್ತಿತ್ತು. ವಿಶೇಷವಾಗಿ ಅಹ್‌ರಾರಿಗಳು ಗಲಭೆಯನ್ನು ಉಂಟುಮಾಡಲಿಕ್ಕಾಗಿ ತಮ್ಮ ಎಲ್ಲ ಶಕ್ತಿಯನ್ನು ಪ್ರಯೋಗಿಸಿದ್ದರು ಮತ್ತು ಅಹ್ಮದಿಯ್ಯತ್ತಿನ ಅಸ್ತಿತ್ವವೇ ಇಲ್ಲದಂತೆ ಮಾಡುವೆವು ಮತ್ತು ಖಾದಿಯಾನಿನ ಹೆಸರು ಹಾಗೂ ಕುರುಹು ಇಲ್ಲದಂತೆ ಮಾಡುವೆವು ಎಂದು ಘೋಷಿಸುತ್ತಿದ್ದರು. ಖಾದಿಯಾನಿನ ಪ್ರತಿಯೊಂದು ಇಟ್ಟಿಗೆಯನ್ನು ಪುಡಿ ಮಾಡುವೆವು ಎಂದು ಹೇಳುತ್ತಿದ್ದರು. ಎಲ್ಲಿಯ ವರೆಗೆ ಎಂದರೆ, ಹಝ್ರತ್ ಮಸೀಹ್ ಮೌಊದ್(ಅ)ರ ಖಬರ್ ಮತ್ತು ಪರಿಶುದ್ಧ ಸ್ಥಳಗಳನ್ನು ಅಪಮಾನಿಸಲು ಯೋಜನೆ ಹಾಕಿದ್ದರು. ಸರ್ಕಾರದ ವತಿಯಿಂದಲೂ ವಿರೋಧಿಗಳ ಕಡೆಗೆ ಹೆಚ್ಚು ಒಲವು ತೋರುತ್ತಿತ್ತು. ಆ ಸಮಯದಲ್ಲಿ ಆಂಗ್ಲೇಯ ಸರ್ಕಾರ ಇತ್ತು. ಆದರೂ ಸರ್ಕಾರ ಪಿತೂರಿಯನ್ನು ಕೊನೆಗೊಳಿಸಲು ಪ್ರಯತ್ನಿಸುವುದಕ್ಕೆ ಬದಲಾಗಿ ಅವರಿಗೆ ನೆರವು ನೀಡುತ್ತಿದ್ದರು.

ಈ ಅವಸ್ಥೆಗಳಲ್ಲಿ ಹಝ್ರತ್ ಮುಸ್ಲಿಹ್ ಮೌಊದ್(ರ) ಜಮಾಅತಿನ ಮುಂದೆ ಒಂದು ಯೋಜನೆಯನ್ನು ಇರಿಸಿ ಹುರಿದುಂಬಿಸಿದರು. ಅದರಲ್ಲಿ ಧನತ್ಯಾಗದ ಬಗ್ಗೆ ಗಮನ ಸೆಳೆದರು. ಇದು 1934ರ ಮಾತಾಗಿದೆ. ಅವರು ಹೇಳಿದರು: ಕೆಲವೊಮ್ಮೆ ದೀರ್ಘಕಾಲಕ್ಕೆ ತ್ಯಾಗಗಳನ್ನು ಮಾಡಬೇಕಾಗಿ ಬರುತ್ತವೆ. ಮಹಿಳೆಯರು ಮತ್ತು ಮಕ್ಕಳು ಕೂಡ ಅದಕ್ಕಾಗಿ ತಯಾರಾಗಿರಿ. ಇದು ಕೇವಲ ಪುರುಷರ ಕೆಲಸವಲ್ಲ. ಬದಲಾಗಿ ಸ್ತ್ರೀಯರು ಕೂಡ ತಮ್ಮ ಹೊಣೆಗಾರಿಕೆಗಳನ್ನು ಮನವರಿಕೆ ಮಾಡಬೇಕು. ಆ ಸಮಯದಲ್ಲಿ ಇದು ಪ್ರತಿಯೊಬ್ಬ ಅಹ್ಮದಿಗೆ ಕಡ್ಡಾಯವಾಗಿರದಿದ್ದರೂ ಕೂಡ ನಿಷ್ಠೆ ಮತ್ತು ಪ್ರಾಮಾಣಿಕತೆಯ ಅಸಾಮಾನ್ಯವಾದ ಆವೇಶವನ್ನು ಜಮಾಅತ್ ತೋರಿಸಿತು.

(ಖುತ್ಬಾತೆ ಮಹ್ಮೂದ್, ಸಂಘುಟ–15, ಪುಟ–411)

ಹೇಗಿದ್ದರೂ 1934ರಲ್ಲಿ ಅವರು ಒಂದು ಫಂಡಿನ ಘೋಷಣೆ ಮಾಡಿದರು. ನಾವು ಶತ್ರುಗಳ ಆಕ್ಷೇಪಗಳಿಗೆ ಉತ್ತರಿಸಬೇಕು ಎಂದು ಅವರು ಹೇಳಿದರು. ಆ ಕಾಲದಲ್ಲಿ ಅವರು ಜಮಾಅತಿಗೆ ಒಂದು ಯೋಜನೆ ತಯಾರು ಮಾಡಿಕೊಟ್ಟರು. ಅದರಲ್ಲಿ ತಮ್ಮ ಸುಧಾರಣೆ ಮತ್ತು ತ್ಯಾಗದ ಮಟ್ಟವನ್ನು ಉನ್ನತಗೊಳಿಸುವುದರ ಬಗ್ಗೆ ಗಮನಸೆಳೆದರು ಮತ್ತು ಧನತ್ಯಾಗದ ಬಗ್ಗೆಯೂ ಹುರಿದುಂಬಿಸಿದರು. ಆ ಕಾಲದಲ್ಲಿ ತಮ್ಮ ಮತ್ತು ತಮ್ಮ ಮಕ್ಕಳ ಖರ್ಚನ್ನು ಕಡಿಮೆಗೊಳಿಸಿಕೊಂಡು ಜಮಾಅತ್ ಸ್ಥಾಪಿಸಿದ ಮಾದರಿಯನ್ನು ಅಲ್ಲಾಹನು ಹೇಗೆ ಸ್ವೀಕಾರ ಮಾಡಿಕೊಂಡನು ಎಂದರೆ, ಅದರಿಂದ ಲೋಕದಲ್ಲಿ ತಬ್ಲೀಗಿನ ಅಸಾಧಾರಣವಾದ ಮಾರ್ಗಗಳು ತೆರೆದುಕೊಂಡುವು ಮತ್ತು ಈ ತ್ಯಾಗ ಅವರಷ್ಟಕ್ಕೆ ಪರಿಮಿತಗೊಳ್ಳಲಿಲ್ಲ. ಬದಲಾಗಿ ಇಂದು ಕೂಡ ಅಂತಹ ಉದಾಹರಣೆಗಳು ಕಾಣಬಹುದಾಗಿದೆ. ಅಂತಹ ಘಟನೆಗಳನ್ನು ನಾನು ಇಲ್ಲಿ ವಿವರಿಸಿದ್ದೇನೆ. ಹೇಗಿದ್ದರೂ ಆ ಜನರು ಧನತ್ಯಾಗಗಳನ್ನು ಮಾಡುವುದರೊಂದಿಗೆ ತಮ್ಮ ಜೀವಿತಗಳನ್ನು ಕೂಡ ವಖ್ಫ್ ಮಾಡಿದರು. ದೂರ ದೂರ ದೇಶಗಳಿಗೆ ತಬ್ಲೀಗಿಗಾಗಿ ಹೋದರು. ಕೆಲವರು ಜೈಲುವಾಸದ ಕಷ್ಟತೆಗಳನ್ನು ಅನುಭವಿಸಬೇಕಾಗಿ ಬಂತು.

ಆರಂಭದಲ್ಲಿ ಹಝ್ರತ್ ಮುಸ್ಲಿಹ್ ಮೌಊದ್(ರ) ಈ ಯೋಜನೆಯನ್ನು ಹತ್ತು ವರ್ಷಗಳಿಗೆ ವರ್ಧಿಸಿದ್ದರು. ಮೂರು ವರ್ಷಗಳಿಗೆ ಮಾಡಿದ್ದನ್ನು ಹತ್ತು ವರ್ಷಗಳಿಗೆ ಮಾಡಿದ್ದರು. ಅನಂತರ ಹತ್ತು ವರ್ಷಗಳು ಪೂರ್ತಿಯಾಗಿ ಅದರ ಸಕರಾತ್ಮಕ ಪರಿಣಾಮಗಳು ಪ್ರಕಟಗೊಂಡಾಗ ಹೆಚ್ಚಿನ ತ್ಯಾಗಗಳನ್ನು ಮಾಡುವವರ ಅಭಿಲಾಷೆ ಪ್ರಕಾರ ಅದನ್ನು ಇನ್ನಷ್ಟು ವರ್ಧಿಸಿದರು. ಹೀಗೆ ಇದು ಸ್ಥಾಯಿಯಾದ ಯೋಜನೆಯಾಯಿತು.

(ಖುತ್ಬಾತೆ ಮಹ್ಮೂದ್, ಸಂಪುಟ–25, ಪುಟ–699–700) (ಖುತ್ಬಾತೆ ಮಹ್ಮೂದ್, ಸಂಪುಟ–18, ಪುಟ–591)

ನಾವಿಂದು ಅಲ್ಲಾಹನ ನೆರವು ಮತ್ತು ಸಹಾಯದ ದೃಶ್ಯಗಳನ್ನು ನೋಡುತ್ತಿದ್ದೇವೆ. ಅವುಗಳು ಆ ಆರಂಭದ ಜನರ ತ್ಯಾಗಗಳ ಪರಿಣಾಮವಾಗಿದೆ. ಅದನ್ನು ಅಲ್ಲಾಹನು ಸ್ವೀಕಾರ ಮಾಡಿಕೊಂಡನು. ಈಗಲೂ ಹೊಸದಾಗಿ ಭಾಗಿಯಾಗುವವರಿಗೆ ಕೆಲವೊಮ್ಮೆ ಕನಸುಗಳ ಮೂಲಕ ಈ ಯೋಜನೆ ಮತ್ತು ಧನತ್ಯಾಗದ ಕಡೆಗೆ ಗಮನ ಸೆಳೆಯಲಾಗಿದೆ.

ಈ ಆರಂಭಿಕ ತ್ಯಾಗಗಳನ್ನು ಮಾಡಿದವರ ಸಂತಾನಗಳು ಇಂದು ಕೂಡ ತಮ್ಮ ತಂದೆ ತಾತಂದಿರ ತ್ಯಾಗಗಳನ್ನು ನೆನಪಿಡುತ್ತಾ ಸ್ವತಃ ಮತ್ತು ತಮ್ಮ ಸಂತಾನಗಳನ್ನು ಈ ತ್ಯಾಗಗಳ ಪರಂಪರೆಯನ್ನು ಜಾರಿಗೊಳಿಸಲು ಪ್ರಯತ್ನಿಸಬೇಕಾಗಿದೆ. ತಮ್ಮ ಮೇಲೆ ಉಂಟಾದ ಅನುಗ್ರಹಗಳು ಕಾರಣದಿಂದ ಸ್ವತಃ ಕೂಡ ಹೆಚ್ಚು ಹೆಚ್ಚಾಗಿ ತ್ಯಾಗಗಳನ್ನು ಮಾಡಬೇಕು.

(ಖುತ್ಬಾತೆ ತಾಹಿರ್, ಸಂಪುಟ–4, ಪುಟ–865)

ತದನಂತರ ನಾನು ದಫ್ತಾರ್ ಪಂಜಮ್ ಅನ್ನು ಪ್ರಾರಂಭಿಸಿದಾಗ, ನಾನು ಅದರ ಬಗ್ಗೆ ವಿಶೇಷ ಗಮನ ಹರಿಸಿದೆ ಮತ್ತು ಈಗ ಅಲ್ಲಾಹನ ಅನುಗ್ರಹದಿಂದ ಅವರೆಲ್ಲರ ಖಾತೆಗಳು ಜೀವಂತವಾಗಿವೆ. ಮೊದಲ ಕಛೇರಿಯ ಮುಜಾಹಿದ್ದೀನ್ ಹತ್ತು ವರ್ಷಗಳನ್ನು ಪೂರೈಸಿದಾಗ, ನಂತರ ಹಝ್ರತ್ ಖಲೀಫತುಲ್ ಮಸೀಹ್ ಸಾನಿ(ರ) ಅವರು ಎರಡನೇ ದಫ್ತರ್ ಅನ್ನು ಘೋಷಿಸಿದರು, ಮತ್ತು ನಂತರ ಬಂದವರು ಅವರೊಂದಿಗೆ ಸೇರಿಕೊಂಡರು ಮತ್ತು ಅವರು ಹತ್ತೊಂಬತ್ತು ವರ್ಷಗಳ ಕಾಲ ಅದರ ಅವಧಿಯನ್ನು ನಿಗದಿಪಡಿಸಿದರು ಮತ್ತು ಭವಿಷ್ಯದಲ್ಲಿ ಈ ದಫ್ತರ್‌ಗಳು ಹತ್ತೊಂಬತ್ತು ವರ್ಷಗಳವರೆಗೆ ಇರುತ್ತದೆ ಎಂದು ಹೇಳಿದರು. ಪ್ರತಿ ಹತ್ತೊಂಬತ್ತು ವರ್ಷಗಳ ನಂತರ ಒಂದು ದಫ್ತರ್ ಸ್ಥಾಪಿತವಾಗುವುದು.

(ಖುತ್ಬಾತೆ ಮಹ್ಮೂದ್, ಸಂಪುಟ–25, ಪುಟ–731–732)

ಆದ್ದರಿಂದ ಇದರ ಪ್ರಕಾರ ಮೂರನೇಯ ದಫ್ತರ್ ಹಝ್ರತ್ ಖಲೀಫತುಲ್ ಮಸಿಹ್ ಸಾಲಿಸ್(ರಹ್) ಅವರ ಕಾಲಘಟ್ಟದಲ್ಲಿ ಪ್ರಾರಂಭವಾಯಿತು. ಆದರೆ ಇದು ಹತ್ತೊಂಬತ್ತು ವರ್ಷಗಳ ನಂತರ 1964 ರಲ್ಲಿ ಪ್ರಾರಂಭವಾಗಬೇಕಾಗಿತ್ತು ಆದರೆ ಹಝ್ರತ್ ಖಲೀಫತುಲ್ ಮಸಿಹ್ ಸಾನಿ(ರ) ಅವರ ಅನಾರೋಗ್ಯದ ಕಾರಣ ಆ ಸಮಯದಲ್ಲಿ ಅವರು ಅದನ್ನು ಪ್ರಾರಂಭಿಸಲು ಸಾಧ್ಯವಾಗಲಿಲ್ಲ. ಆದ್ದರಿಂದ, ನಾನು ಈ ದಫ್ತರ್ ಅನ್ನು ಪ್ರಾರಂಭಿಸುತ್ತಿದ್ದೇನೆ ಎಂದು ಹಝ್ರತ್ ಖಲೀಫತುಲ್ ಮಸೀಹ್ ಸಾಲಿಸ್(ರಹ್) ಹೇಳಿದರು, ಆದರೆ ಇದು ಹಝ್ರತ್ ಮುಸ್ಲೆಹ್ ಮೌಊದ್(ರ) ಅವರಿಗೆ ಸಲ್ಲುತ್ತದೆ ಮತ್ತು ಸರ್ವಶಕ್ತನಾದ ಅಲ್ಲಾಹನು ನನಗೂ ಪ್ರತಿಫಲ ನೀಡುತ್ತಾನೆ. ಇದನ್ನು 1966 ರಲ್ಲಿ ಘೋಷಿಸಲಾಯಿತು ಆದರೆ ಅದನ್ನು ನವೆಂಬರ್ 1965 ರಿಂದ ಜಾರಿಗೆ ತರುವುದಾಗಿ ಹೇಳಿದರು.

(ಖುತ್ಬಾತೆ ನಾಸಿರ್, ಸಂಪುಟ–1, ಪುಟ–228 ರಿಂದ ಆಯ್ದ ಭಾಗ)

ನಂತರ 1985 ರಲ್ಲಿ, ಹಝ್ರತ್ ಖಲೀಫತುಲ್ ಮಸೀಹ್ ರಾಬಿ(ರಹ್)ರವರು ನಾಲ್ಕನೇ ದಫ್ತರ್ ಅನ್ನು ಪ್ರಾರಂಭಿಸಿದರು.

(ಖುತ್ಬಾತೆ ತಾಹಿರ್, ಸಂಪುಟ–4, ಪುಟ–870 ರಿಂದ ಆಯ್ದ ಭಾಗ)

ನಂತರ, ಅವರ ಹತ್ತೊಂಬತ್ತು ವರ್ಷಗಳ ಅವಧಿಯನ್ನು ಇರಿಸಿ, ಈ ನಾಲ್ಕನೇ ದಫ್ತರ್ ಅನ್ನು ಹತ್ತೊಂಭತ್ತು ವರ್ಷಗಳ ಕಾಲ ಉಳಿಯಿತು. 2004 ರಲ್ಲಿ, ಈ ಹತ್ತೊಂಬತ್ತು ವರ್ಷಗಳ ಅವಧಿಯು ಕೊನೆಗೊಂಡಾಗ, ನಾನು ಐದನೇ ದಫ್ತರ್ ಅನ್ನು ಪ್ರಾರಂಭಿಸಿದ್ದೇನೆ ಮತ್ತು ಇಂದು, ಹತ್ತೊಂಬತ್ತು ವರ್ಷಗಳು ಪೂರ್ಣಗೊಂಡ ನಂತರ, ನಾನು ಆರನೇ ದಫ್ತರ್‌ನ ಪ್ರಾರಂಭವನ್ನು ಘೋಷಿಸುತ್ತೇನೆ. ಈಗ ಹೊಸದಾಗಿ ಸೇರ್ಪಡೆಗೊಂಡವರು ಮತ್ತು ಹೊಸದಾಗಿ ಹುಟ್ಟಿದ ಮಕ್ಕಳು ಅಥವಾ ಮೊದಲು ಯಾವುದೇ ಕಚೇರಿಯಲ್ಲಿಲ್ಲದವರು ಆರನೇ ದಫ್ತರ್‌ಗೆ ಸೇರುತ್ತಾರೆ.

ಹೀಗಾಗಿ ಜಮಾತ್‌ನ ವ್ಯವಸ್ಥಾಪಕರು ಈಗ ತಮ್ಮ ತಮ್ಮ ಜಮಾತ್‌ಗಳಲ್ಲಿ ಅದರಂತೆ ನಡೆದುಕೊಳ್ಳಬೇಕು.

ಹಝ್ರತ್ ಮುಸ್ಲೆಹ್ ಮೌಊದ್(ರ) ಅವರು ಹೊಸ ದಫ್ತರ್ ಅನ್ನು ಘೋಷಿಸಿದಾಗ ಅವರು ಆ ಸಮಯದಲ್ಲಿ ಹೇಳಿದರು ಅದರ ನಂತರ, ಅಂದರೆ, ಎರಡನೇ ದಫ್ತರ್ ನಂತರ, ತೆಹ್ರೀಕ್ ಜದೀದ್‌ನ ಮೂರನೇ, ನಾಲ್ಕನೇ ಮತ್ತು ಐದನೇ ಅವಧಿಗಳು ಬರುತ್ತವೆ ಮತ್ತು ನಾವು ದೀನ್‌ಗಾಗಿ ತ್ಯಾಗಗಳನ್ನು ನೀಡುತ್ತಲೇ ಹೋಗುತ್ತೇವೆ. ನಾವು ಯಾವಾಗ ಧರ್ಮದ ಹೋರಾಟವನ್ನು ಕೈಬಿಟ್ಟ ದಿನ ಮತ್ತು ಮೊದಲ ಯುಗ ಕಳೆದಿದೆ, ಮೂರನೇ ಯುಗವೂ ಕಳೆದಿದೆ, ನಾಲ್ಕನೇ ಯುಗವೂ ಕಳೆದಿದೆ, ಐದನೇ ಯುಗವೂ ಕಳೆದಿದೆ, ಆರನೇ ಯುಗವು ಕಳೆದಿದೆ ಮತ್ತು ಏಳನೇ ಯುಗವೂ ಕಳೆದಿದೆ, ಈಗ ಎಷ್ಟು ದಿನ ಈ ರೀತಿಯ ತ್ಯಾಗ ಮಾಡುತ್ತಾ ಹೋಗುವುದು? ಎಂದು ಹೇಳುವವರು ನಮ್ಮ ನಡುವೆ ಜನಿಸಿದ ದಿನ. ಇದು ಯಾವತ್ತಾದರೂ ಕೊನೆಗೊಳ್ಳಬೇಕಲ್ಲವೇ. ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಅದು ಈಗ ನಮ್ಮ ಆಧ್ಯಾತ್ಮಿಕತೆ ತಣ್ಣಗಾಗಿದೆ ಮತ್ತು ನಮ್ಮ ನಂಬಿಕೆ ದುರ್ಬಲಗೊಂಡಿದೆ ಎಂದು ಒಪ್ಪಿಕೊಳ್ಳುವ ಜನರು ಹೀಗೆ ಹೇಳುತ್ತಾರೆ. ತೆಹ್ರೀಕ್ ಜದೀದ್‌ನ ಈ ಅವಧಿಗಳು ಅನಿಯಮಿತ ಅವಧಿಗಳಾಗಿರುತ್ತವೆ ಎಂದು ನಾವು ಭಾವಿಸುತ್ತೇವೆ ಮತ್ತು ಆಕಾಶದಲ್ಲಿನ ನಕ್ಷತ್ರಗಳನ್ನು ಲೆಕ್ಕಿಸದಂತೆಯೇ, ತೆಹ್ರೀಕ್ ಜದೀದ್‌ನ ಅವಧಿಗಳನ್ನು ಲೆಕ್ಕಿಸಲಾಗುವುದಿಲ್ಲ. ಹೇಗೆ ಸರ್ವಶಕ್ತನಾದ ಅಲ್ಲಾಹನು ಹಝ್ರತ್ ಇಬ್ರಾಹೀಮ್ ಅಲೈಹಿಸ್ಸಲಾಮ್ ಅವರಿಗೆ ನಿಮ್ಮ ಪೀಳಿಗೆಯುನ್ನು ಲೆಕ್ಕಿಸಲಾಗುವುದಿಲ್ಲ ಎಂದು ಹೇಳಿದಂತೆಯೇ ಮತ್ತು ಹಝ್ರತ್ ಇಬ್ರಾಹಿಂ(ಅ) ಅವರ ಪೀಳಿಗೆಯು ಸಾಕಷ್ಟು ಧಾರ್ಮಿಕ ಕೆಲಸಗಳನ್ನು ಮಾಡಿದಂತೆಯೇ, ಇದು ತೆಹ್ರೀಕ್ ಜದೀದ್‌ನ ಪರಿಸ್ಥಿತಿಯಾಗಿದೆ. ತೆಹ್ರೀಕ್ ಜದೀದ್ ಅವಧಿಯು ಜನರ ಸಂಗ್ರಹವಲ್ಲ, ಆದರೆ ಧರ್ಮಕ್ಕಾಗಿ ತ್ಯಾಗಗಳ ಸಂಗ್ರಹವಾಗಿರುವುದರಿಂದ, ಅದರ ಅವಧಿಗಳನ್ನು ಲೆಕ್ಕಿಸದಿದ್ದರೂ, ಇಸ್ಲಾಂ ಮತ್ತು ಅಹ್ಮದೀಯರ ಶಕ್ತಿಗೆ ಇದು ಉತ್ತಮ ಅಡಿಪಾಯವಾಗಿದೆ.

(ಖುತ್ಬಾತೆ ಮಹ್ಮೂದ್, ಸಂಪುಟ-27, ಪುಟ-65 ರಿಂದ ಆಯ್ದುಕೊಳ್ಳಲಾಗಿದೆ)

ಆದ್ದರಿಂದ ಈ ಆಲೋಚನೆಯೊಂದಿಗೆ, ಪ್ರತಿಯೊಬ್ಬ ಅಹ್ಮದಿಯು ತನ್ನ ತ್ಯಾಗದ ಗುಣಮಟ್ಟವನ್ನು ಮುಂದೆ ಇಡಬೇಕು. ತ್ಯಾಗ ಮಾಡುವವರನ್ನು ಅಲ್ಲಾಹನು ಹೇಗೆ ಅನುಗ್ರಹಿಸುತ್ತಾನೆ ಎಂಬುದರ ಕೆಲವು ಘಟನೆಗಳನ್ನು ನಾನು ಹೇಳಿದಂತೆ, ನಾನು ವಿವರಿಸಿದ್ದೇನೆ.

ಇದೊಂದು ದೈವಿಕ ಚಲನೆ ಎಂಬುದಕ್ಕೆ ಅಲ್ಲಾಹನ ಪ್ರಾಯೋಗಿಕ ಸಾಕ್ಷಿಯಾಗಿದೆ.

ಅದೇ ರೀತಿ ಹಝ್ರತ್ ಮುಸ್ಲೆಹ್ ಮೌಊದ್(ರ)ರವರು ತೆಹ್ರೀಕ್ ಜದೀದ್ ಬಗ್ಗೆ ಒಂದು ಸ್ಥಳದಲ್ಲಿ ಅದನ್ನು ವಸಿಯ್ಯತ್ ಯೋಜನೆಯೊಂದಿಗೆ ಜೋಡಿಸುತ್ತಾ ಹೇಳುತ್ತಾರೆ, ಇದನ್ನು ನಾನು ನನ್ನ ಸ್ವಂತ ಪದಗಳಲ್ಲಿ ವಿವರಿಸುತ್ತೇನೆ ತೆಹ್ರೀಕ್ ಜದೀದ್‌ನ ಯೋಜನೆಯು ವಸಿಯ್ಯತ್ ಯೋಜನೆಗೆ ಪೀಠಿಕೆಯಂತಾಗಿದೆ. ಅಂದರೆ, ಇದರಿಂದ ವಸಿಯ್ಯತ್ ಯೋಜನೆಯು ಬಲಗೊಳ್ಳುತ್ತದೆ. ಆರ್ಥಿಕ ತ್ಯಾಗಕ್ಕೆ ಒಗ್ಗಿಕೊಳ್ಳಲು ಇದು ಆಧಾರವಾಗಿರುತ್ತದೆ. ಇದು ಒಂದು ಮುಂಚೂಣಿಯಲ್ಲಿದೆ ಅಂದರೆ ಮುಂದೆ ನಡೆಯುವಂತಹ ವಸ್ತು ಆಗಿದೆ. ಸುದ್ದಿ ತಿಳಿಸುವ ಒಂದು ಗುಂಪಿನ ರೀತಿಯಲ್ಲಿದೆ. ಒಂದು ಮಹತ್ತರವಾದ ಯೋಜನೆ ಇದರ ನಂತರ ಬರಲಿದೆ ಅದನ್ನು ವಸಿಯ್ಯತ್ ಯೋಜನೆ ಎಂದು ಕರೆಯಲ್ಪಡುತ್ತದೆ ಎಂದು ಜನರಿಗೆ ತಿಳಿಸಲಾಗುವುದು.

(ನಿಝಾಮೆ ನೌ, ಅನ್ವಾರುಲ್ ಉಲೂಮ್, ಸಂಪುಟ-16, ಪುಟ-600 ರಿಂದ ಆಯ್ದುಕೊಳ್ಳಲಾಗಿದೆ)

ಆದ್ದರಿಂದ, ನಾನು 2005 ರಲ್ಲಿ ನಿಝಾಮೆ ವಸಿಯ್ಯತ್ ಯೋಜನೆಗೆ ಸೇರಲು ಪ್ರತಿಪಾದಿಸುವಾಗ ಹೇಳಿದಂತೆ, ನಿಝಾಮೆ ವಸಿಯ್ಯತ್ ನಿಝಾಮೆ ಖಿಲಾಫತ್‌ನೊಂದಿಗೆ ಬಹಳ ನಿಕಟ ಸಂಬಂಧ ಹೊಂದಿದೆ. ಈಗ ನಿಝಾಮೆ ವಸಿಯ್ಯತ್‌ನೊಂದಿಗೆ ಖುರ್ಬಾನಿಗಳ (ತ್ಯಾಗಗಳ) ಮಟ್ಟವನ್ನು ವರ್ಧಿಸಬೇಕಾಗಿದೆ ಆದ್ದರಿಂದ ಎಲ್ಲಕ್ಕಿಂತ ಮೊದಲು ತ್ಯಾಗವನ್ನು ರೂಢಿಸಿಕೊಳ್ಳುವ ತೆಹ್ರೀಕ್ ಜದೀದ್‌ನ ವ್ಯವಸ್ಥೆ ಇದೆ. ಹೀಗಾಗಿ ಅದರ ಮೇಲೆ ಕೇಂದ್ರೀಕರಿಸಬೇಕಾಗಿದೆ.

ಜಮಾಅತ್‌ನ ಸುಸ್ಥಿತಿಯಲ್ಲಿರುವ ವಿಭಾಗವೂ ಇದರತ್ತ ಗಮನ ಹರಿಸಲು ಅಲ್ಲಾಹನು ಸಹಾಯ ಮಾಡಲಿ. ಅಲ್ಲಾಹನ ಅನುಗ್ರಹದಿಂದ ಒಳ್ಳೆಯ ಸಂಪಾದನೆ ಮಾಡುವವರಲ್ಲಿ ಕೆಲವರು ಬಹಳ ಜಾಗರೂಕರಾಗಿರುತ್ತಾರೆ, ಆದರೆ ಈಗ ಅವರವರ ಸಾಮರ್ಥ್ಯಕ್ಕೆ ಅನುಗುಣವಾಗಿ ಹೆಚ್ಚಿನ ಜನರನ್ನು ಸೇರಿಸಲು. ಚಂದ ನಿಡಲು ಇನ್ನೂ ಸಾಕಷ್ಟು ಅವಕಾಶವಿದೆ. ಬಡವರು, ನಾನು ಹೇಳಿದಂತೆ ತ್ಯಾಗ ಮನೋಭಾವನೆಗಳಲ್ಲಿ ಬಹಳ ಮುಂಚೂಣಿಯಲ್ಲಿದ್ದಾರೆ ಆದರೆ ಶ್ರೀಮಂತರು ಸಹ ಈ ಬಗ್ಗೆ ಗಮನ ಹರಿಸಬೇಕು.

ಈಗ ನಾನು ಕಳೆದ ವರ್ಷದ ಡೇಟಾವನ್ನು ಪ್ರಸ್ತುತಪಡಿಸುತ್ತೇನೆ. ನಮಗೆ ಕಂಡುಬಂದ ತಹ್ರೀಕ್ ಜದೀದಿನ ಫಲಗಳನ್ನು ಹೇಳುತ್ತೇನೆ. ಆರಂಭದಲ್ಲಿ ನಾವು ಖಾದಿಯಾನಿನಿಂದ ಹೊರಗೆ ಹೋಗಿರಲಿಲ್ಲ. ಅಥವಾ ಭಾರತದದಲ್ಲೇ ಸ್ವಲ್ಪ ಮಟ್ಟಿಗೆ ಹರಡಿದ್ದೆವು. ಆದರೆ ಈಗ ಲೋಕದ 220 ದೇಶಗಳಲ್ಲಿ ಮಸೀದಿಗಳ ಒಟ್ಟು ಸಂಖ್ಯೆ 9 ಸಾವಿರದ ಮುನ್ನೂರಕ್ಕಿಂತ ಅಧಿಕವಿದೆ.

ಮಿಶನ್ ಹೌಸುಗಳ ಸಂಖ್ಯೆ ಮೂರು ಸಾವಿರದ ನಾನ್ನೂರಕ್ಕಿಂತ ಅಧಿಕವಿದೆ. ಅನೇಕ ಮಸೀದಿಗಳು ಮತ್ತು ಮಿಶನ್ ಹೌಸುಗಳು ನಿರ್ಮಾಣವಾಗುತ್ತಿವೆ. ಮುಬಲ್ಲಿಗರ ಮತ್ತು ಮುಅಲ್ಲಿಮರ ಸಂಖ್ಯೆ ಲೋಕದಲ್ಲಿ ಐದು ಸಾವಿರದಷ್ಟು ಇದೆ. ಇದು ಕೂಡ ಅಧಿಕವಾಗುತ್ತಿದೆ. ಅಲ್ಲಾಹನ ಅನುಗ್ರಹದಿಂದ ಪವಿತ್ರ ಖುರ್‌ಆನಿನ ತರ್ಜುಮೆ ಕೂಡ ಆಗುತ್ತಿವೆ. 77 ಭಾಷೆಗಳಲ್ಲಿ ತರ್ಜುಮೆ ಆಗಿವೆ. ಲಿಟರೇಚರ್ ಪ್ರಕಾಶನಗೊಳ್ಳುತ್ತಿವೆ. ಅನೇಕ ಭಾಷೆಗಳಲ್ಲಿ ಲಿಟರೇಚರಿನ ತರ್ಜುಮೆ ನಡೆಯುತ್ತಿವೆ. ಅನೇಕ ಕೆಲಸಗಳು ತಹ್ರೀಕ್ ಜದೀದಿನ ಕಾರಣದಿಂದ ಶುರುವಾಗಿವೆ. ಇದರಲ್ಲಿ ಬೇರೆ ಚಂದಾಗಳು ಕೂಡ ಸೇರಿಕೊಂಡಿವೆಯಾದರೂ ತಹ್ರೀಕ್ ಜದೀದಿನ ಬಹಳ ದೊಡ್ಡ ಪಾತ್ರವಿದೆ.

ಅಲ್ಲಾಹನ ಅನುಗ್ರಹದಿಂದ ಈಗ ಹೊಸ ವರ್ಷವನ್ನು ಘೋಷಿಸುತ್ತಿದ್ದೇನೆ. ತಹ್ರೀಕ್ ಜದೀದ್‌ನ ಎಂಬತ್ತೊಂಬತ್ತನೇ (89) ವರ್ಷವು ಅಕ್ಟೋಬರ್ 31 ರಂದು ಕೊನೆಗೊಂಡಿತು ಮತ್ತು ಈಗ ನಾವು ತೊಂಬತ್ತು (90) ವರ್ಷಕ್ಕೆ ಪ್ರವೇಶಿಸುತ್ತಿದ್ದೇವೆ.

ಈ ವರ್ಷ, ಸರ್ವಶಕ್ತನಾದ ಅಲ್ಲಾಹನ ಅನುಗ್ರಹದಿಂದ, ಜಾಗತಿಕ ಅಹ್ಮದಿಯಾ ಮುಸ್ಲಿಮ್ ಜಮಾತ್‌ಗೆ ಪ್ರಪಂಚದಾದ್ಯಂತ 17.20 ಮಿಲಿಯನ್ ಪೌಂಡ್‌ಗಳನ್ನು ದಾನ ಮಾಡಲು ಸಾಧ್ಯವಾಯಿತು. ಅಲ್ಹಮ್ದುಲಿಲ್ಲಾಹ್ ಮತ್ತು ಪ್ರಪಂಚದ ಆರ್ಥಿಕ ಪರಿಸ್ಥಿತಿಗಳ ಹೊರತಾಗಿಯೂ, ಇದು ಕಳೆದ ವರ್ಷಕ್ಕಿಂತ ಏಳು ನೂರ ಐವತ್ತು ಸಾವಿರ ಪೌಂಡ್‌ಗಳು ಹೆಚ್ಚಾಗಿದೆ.

ಈ ಬಾರಿ, ಜರ್ಮನ್ ಜಮಾತ್ ಪ್ರಪಂಚದಾದ್ಯಂತದ ಜಮಾತ್‌ಗಳಲ್ಲಿ ಮೊದಲ ಸ್ಥಾನದಲ್ಲಿದೆ. ತಮ್ಮ ಗೌರವವನ್ನು ಉಳಿಸಿಕೊಂಡಿದೆ.

ಕರೆನ್ಸಿಗಳ ದರಗಳು ಪ್ರಪಂಚದ ಆರ್ಥಿಕ ಪರಿಸ್ಥಿತಿಗಳಿಂದ ಹೆಚ್ಚು ಪರಿಣಾಮ ಬೀರುತ್ತವೆ, ಪಾಕಿಸ್ತಾನದಲ್ಲಿಯೂ ಸಹ, ಆದರೆ ಸಾಮಾನ್ಯವಾಗಿ ಎಲ್ಲರೂ ಸ್ಥಳೀಯವಾಗಿ ತಮ್ಮ ತ್ಯಾಗದ ಗುಣಮಟ್ಟವನ್ನು ಹೆಚ್ಚಿಸಿದ್ದಾರೆ. ಪಾಕಿಸ್ತಾನ ಬಿಟ್ಟರೆ ನಾನು ಹೇಳಿದಂತೆ ಮೊದಲ ಹತ್ತು ಸ್ಥಾನಗಳಲ್ಲಿ ಜರ್ಮನಿ ಮೊದಲ ಸ್ಥಾನದಲ್ಲಿದೆ. ಎಲ್ಲರಿಗಿಂತ ಮೇಲೆ. ನಂಬರ್ ಒನ್ ಜರ್ಮನಿ. ನಂತರ ಬ್ರಿಟನ್ ಇದೆ. ನಂತರ ಕೆನಡಾ ಇದೆ. ಇವರೀಗ ಮೂರನೇ ಸ್ಥಾನದಲ್ಲಿದ್ದಾರೆ. ಅಮೆರಿಕ ನಾಲ್ಕನೇ ಸ್ಥಾನಕ್ಕೆ ಏರಿದೆ. ಐದನೇ ಸ್ಥಾನದಲ್ಲಿ ಮಧ್ಯಪ್ರಾಚ್ಯದ ಜಮಾತ್ ಇದೆ. ಭಾರತ ಆರನೇ ಸ್ಥಾನದಲ್ಲಿದೆ. ಆಸ್ಟ್ರೇಲಿಯಾ ಏಳನೇ ಸ್ಥಾನದಲ್ಲಿದೆ. ಇಂಡೋನೇಷ್ಯಾ ಎಂಟನೇ ಸ್ಥಾನದಲ್ಲಿದೆ. ಒಂಬತ್ತನೇ ಸ್ಥಾನದಲ್ಲಿ ಮಧ್ಯಪ್ರಾಚ್ಯದ ಜಮಾತ್ ಇದೆ ಮತ್ತು ಹತ್ತನೇ ಸ್ಥಾನದಲ್ಲಿ ಘಾನಾ ಇದೆ. ಇಲ್ಲಿಯೂ ಕರೆನ್ಸಿ ಸಾಕಷ್ಟು ಅಪಮೌಲ್ಯಗೊಂಡಿದೆ, ಆದರೆ ಇದರ ಹೊರತಾಗಿಯೂ, ಘಾನಾ ಈ ವರ್ಷ ತನ್ನ ಹತ್ತನೇ ಸ್ಥಾನವನ್ನು ಉಳಿಸಿಕೊಂಡಿದೆ.

ಐರ್ಲೆಂಡ್, ಮಾರಿಷಸ್, ನೆದರ್ಲ್ಯಾಂಡ್ಸ್, ಮಲೇಷಿಯಾ, ಸಿಂಗಾಪುರ್, ನ್ಯೂಜಿಲೆಂಡ್, ಕಝಾಕಿಸ್ತಾನ್, ಜಾರ್ಜಿಯಾ ಇತ್ಯಾದಿ ಚಿಕ್ಕ ಜಮಾತ್‌ಗಳಲ್ಲಿ ಗಮನಾರ್ಹವಾದವುಗಳಾಗಿವೆ.

ಪ್ರಮುಖ ಸ್ಥಾನಗಳನ್ನು ಹೊಂದಿರುವ ಆಫ್ರಿಕನ್ ದೇಶಗಳು: ಘಾನಾ, ಮಾರಿಷಸ್, ನೈಜೀರಿಯಾ, ಬುರ್ಕಿನಾ ಫಾಸೊ, ತಾಂಜಾನಿಯಾ, ಗ್ಯಾಂಬಿಯಾ, ಉಗಾಂಡಾ, ಲೈಬೀರಿಯಾ, ಸಿಯೆರಾ ಲಿಯೋನ್, ಬೆನಿನ್.

ಭಾಗವಹಿಸುವವರ ಒಟ್ಟು ಸಂಖ್ಯೆಯು ಹದಿನಾರು ನೂರ ಮೂವತ್ತೇಳು ಸಾವಿರವನ್ನು ಮೀರಿದೆ ಮತ್ತು ಅತಿ ಹೆಚ್ಚು ಭಾಗವಹಿಸುವ ದೇಶಗಳೆಂದರೆ ಗಿನಿ ಕೊನಾಕ್ರಿ, ಜಮೈಕಾ, ಕಿರ್ಗಿಸ್ತಾನ್, ಜಾಂಬಿಯಾ, ನೇಪಾಳ, ಘಾನಾ, ಕೀನ್ಯಾ, ತಾಂಜಾನಿಯಾ, ಕಾಂಗೋ ಕಿನ್ಶಾಸಾ, ಕಾಂಗೋ ಬ್ರಜಾವಿಲ್ಲೆ, ನೈಜೀರಿಯಾ. , ಸೆನೆಗಲ್, ಐವರಿ ಕೋಸ್ಟ್ ಮತ್ತು ಮಧ್ಯಪ್ರಾಚ್ಯದ ಜಮಾತ್‌ಗಳನ್ನು ಒಳಗೊಂಡಿದೆ.

ರೋಡರ್ಮಾರ್ಕ್ ಜರ್ಮನಿಯ ಅಗ್ರ ಹತ್ತು ಜಮಾತ್‌ಗಳಲ್ಲಿ ಒಂದಾಗಿದೆ. ರೋಡಗೌ. ಕ್ಯಾಲ್. ಓಸ್ನಾಬ್ರೂಕ್. ಪಿನ್ನೆಬರ್ಗ್. ನ್ಯೂಸ್. ನಿಡ್ಡಾ. ಕೋಲ್ನ್. ಮೆಹದಿಯಾಬಾದ್. ಫ್ಲೋರ್ಶೈಮ್.

ಮತ್ತು ಅಮಾರತ್‌ಗಳಲ್ಲಿ, ಹ್ಯಾಂಬರ್ಗ್ ಪ್ರಥಮ ಸ್ಥಾನದಲ್ಲಿದೆ. ನಂತರ ಫ್ರಾಂಕ್‌ಫರ್ಟ್. ಗ್ರಾಸ್-ಗೆರೌ. ವೈಸ್ಬಾಡೆನ್. ಡಯೆಟ್ಜೆನ್ಬಾಕ್. ರೈಡ್‌ಸ್ಟಾಡ್. ರಸ್ಸೆಲ್ಹೀಮ್ (ರಸ್ಸೆಲ್ಹೀಮ್). ಮೊರ್ಫೆಲ್ಡೆನ್. ವಾಲ್ಡೋರ್ಫ್. ಡಾರ್ಮ್‌ಸ್ಟಾಡ್ ಮ್ಯಾನ್‌ಹೈಮ್.

ಗ್ರೇಟ್ ಬ್ರಿಟನ್‌ನ ಮೊದಲ ಐದು ಪ್ರದೇಶಗಳಲ್ಲಿ ಬೈತುಲ್-ಫುತುಹ್ ನಂಬರ್ ಒನ್. ನಂತರ ಇಸ್ಲಾಮಾಬಾದ್. ಮಿಡ್ಲ್ಯಾಂಡ್ಸ್ (ಮಿಡ್ಲಾಂಡ್ಸ್).

ಮಸ್ಜಿದ್ ಫಝಲ್ ಮತ್ತು ಬೈತುಲ್–ಎಹ್ಸಾನ್.

ಫರ್ನ್‌ಹ್ಯಾಮ್ (ಫಾರ್ನ್‌ಹ್ಯಾಮ್) ಯುನೈಟೆಡ್ ಕಿಂಗ್‌ಡಮ್‌ನ ಪ್ರಮುಖ ಜಮಾತ್‌ಗಳಲ್ಲಿ ಒಂದಾಗಿದೆ. ವೋರ್ಸೆಸ್ಟರ್ ಪಾರ್ಕ್. ದಕ್ಷಿಣ ಚೀಮ್. ಇಸ್ಲಾಮಾಬಾದ್. ವಾಲ್ಸಾಲ್ (ವಾಲ್ಸಾಲ್). ಬೂದಿ ಗಿಲ್ಲಿಂಗ್ಹಾಮ್. ಆಲ್ಡರ್ಶಾಟ್ ಸೌತ್ (ಆಲ್ಡರ್ಶಾಟ್ ಸೌತ್). ಏವೆಲ್. ಬ್ರಾಡ್ಫೋರ್ಡ್ ಉತ್ತರ.

ಸಣ್ಣ ಜಮಾತ್‌ಗಳಲ್ಲಿ ಸ್ಪೆನ್ ವ್ಯಾಲಿ, ಸ್ವಾನ್ಸೀ, ನಾರ್ತ್–ಹ್ಯಾಂಪ್ಟನ್, ನಾರ್ತ್ ವೇಲ್ಸ್, ನ್ಯೂಪೋರ್ಟ್ ಸೇರಿವೆ.

ಕೆನಡಾದ ಅಮಾರತ್‌ಗಳಲ್ಲಿ ವಾನ್ ಮೊದಲ ಸ್ಥಾನದಲ್ಲಿದ್ದಾರೆ. ನಂತರ ಕ್ಯಾಲ್ಗರಿ. ಶಾಂತಿ ಗ್ರಾಮ (ಶಾಂತಿ ಗ್ರಾಮ). ವ್ಯಾಂಕೋವರ್ (ವ್ಯಾಂಕೋವರ್). ಮಿಸಿಸೌಗಾ. ಟೊರೊಂಟೊ.

ಕೆನಡಾದ ಸಣ್ಣ ಜಮಾತ್‌ಗಳೆಂದರೆ ಹ್ಯಾಮಿಲ್ಟನ್ ಮೌಂಟೇನ್, ಒಟ್ಟಾವಾ ಈಸ್ಟ್, ಬ್ರಾಡ್‌ಫೋರ್ಡ್ ಈಸ್ಟ್, ಹ್ಯಾಮಿಲ್ಟನ್ ವೆಸ್ಟ್, ಮಾಂಟ್ರಿಯಲ್ ವೆಸ್ಟ್, ವಿನ್ನಿಪೆಗ್, ರೆಜಿನಾ. , ಲಾಯ್ಡ್‌ಮಿನಿಸ್ಟರ್, ಅಬಾಟ್ಸ್‌ಫೋರ್ಡ್

ಅಮೇರಿಕದ ಜಮಾತ್‌ಗಳು ಮೇರಿಲ್ಯಾಂಡ್ (ಮೇರಿಲ್ಯಾಂಡ್) ನಂಬರ್ ಒನ್. ಉತ್ತರ ವರ್ಜೀನಿಯಾ (ಉತ್ತರ ವರ್ಜೀನಿಯಾ). ಲಾಸ್ ಏಂಜಲೀಸ್ (ಲಾಸ್ ಏಂಜಲೀಸ್). ಸಿಯಾಟಲ್. ಚಿಕಾಗೋ. ಸಿಲಿಕಾನ್ ವ್ಯಾಲಿ (ಸಿಲಿಕಾನ್ ವ್ಯಾಲಿ). ಡೆಟ್ರಾಯಿಟ್. ಹೂಸ್ಟನ್ (ಹೂಸ್ಟನ್). ಓಷ್ಕೋಶ್. ಉತ್ತರ ಜರ್ಸಿ. ದಕ್ಷಿಣ ವರ್ಜೀನಿಯಾ (ದಕ್ಷಿಣ ವರ್ಜೀನಿಯಾ). (ಸೆಂಟ್ರಲ್ ಜರ್ಸಿ). ಡಲ್ಲಾಸ್

ಪಾಕಿಸ್ತಾನದಲ್ಲಿ ಸಾಮಾನ್ಯ ಸಂಗ್ರಹಣೆಯ ವಿಷಯದಲ್ಲಿ, ಲಾಹೋರ್ ಮೊದಲ ಸ್ಥಾನದಲ್ಲಿದೆ. ನಂತರ ಎರಡನೇ ರಬ್ವಾಹ್ ಇದೆ ಮೂರನೇಯ ಸ್ಥಾನ ಕರಾಚಿಯಾಗಿದೆ.

ಜಿಲ್ಲೆಗಳ ಪೈಕಿ ಫೈಸಲಾಬಾದ್ ಮೊದಲ ಸ್ಥಾನದಲ್ಲಿದೆ. ನಂತರ ಗುಜ್ರಾನ್ವಾಲಾ. ನಂತರ ಗುಜರಾತ್, ಉಮರ್ ಕೋಟ್, ಹೈದರಾಬಾದ್, ಮೀರ್ಪುರ್ ಖಾಸ್, ಲೋಧ್ರನ್, ಬಹವಾಲ್ಪುರ್, ಕೋಟ್ಲಿ ಕಾಶ್ಮೀರ ಮತ್ತು ಝೀಲಂ.

ಸಂಗ್ರಹಣೆಯ ವಿಷಯದಲ್ಲಿ ಪಾಕಿಸ್ತಾನದ ನಗರ ಜಮಾತ್‌ಗಳಲ್ಲಿ ಅಮಾರತ್ ಟೌನ್‌ಶಿಪ್ ಲಾಹೋರ್. ಅಮಾರತ್ ಅಲ್ಲಾಮಾ ಇಕ್ಬಾಲ್ ಟೌನ್ ಲಾಹೋರ್, ಅಮಾರತ್ ದಾರುಝ್ಝಿಕರ್ ಲಾಹೋರ್, ಅಮಾರತ್ ಅಜೀಜಾಬಾದ್ ಕರಾಚಿ, ಅಮಾರತ್ ಮುಘಲ್ಪುರ ಲಾಹೋರ್, ಮುಲ್ತಾನ್, ಅಮಾರ್ ಬೈತ್–ಉಲ್–ಫಜಲ್ ಫೈಸಲಾಬಾದ್, ಗುಜ್ರಾನ್ವಾಲಾ, ಕ್ವೆಟ್ಟಾ, ಪೇಶಾವರ

ಸಣ್ಣ ಜಮಾತ್‌ಗಳಲ್ಲಿ ಖೋಖರ್ ಘರ್ಬಿ, ಚೋಂಡಾಹ್, ಕೋಟ್ ಶರೀಫಾಬಾದ್, ಬಶೀರಾಬಾದ್ ಸಿಂಧ್, ಖರಿಯನ್, ಹಯಾತಾಬಾದ್, ಪಿಂಡಿ ಭಾಗ್ವಾ, ದಾರುಲ್ ಫಜಲ್ ಕುನ್ರಿ, ನವಾಜಾಬಾದ್ ಫಾರ್ಮ್, ಖೈರ್ಪುರ್.

ಭಾರತದ ಹತ್ತು ರಾಜ್ಯಗಳಲ್ಲಿ ಒಂದನೇ ಸ್ಥಾನ ಕೇರಳ, ತಮಿಳುನಾಡು, ಕರ್ನಾಟಕ, ತೆಲಂಗಾನ, ಜಮ್ಮು ಕಾಶ್ಮೀರ, ಒಡೀಶ, ಪಂಜಾಬ್, ಬಂಗಾಳ, ದೆಹಲಿ ಮತ್ತು ಮಹಾರಾಷ್ಟ್ರ.

ತ್ಯಾಗದಲ್ಲಿ ಮೊದಲ ಹತ್ತು ಜಮಾಅತುಗಳು: ಕೊಯಂಬತ್ತೂರ್, ತಮಿಳುನಾಡು, ಖಾದಿಯಾನ್, ಹೈದರಾಬಾದ್, ಕಾಲಿಕಟ್, ಮಂಜೇರಿ, ಮೇಲಪಾಲಯಂ, ಬೆಂಗಳೂರು, ಕಲ್ಕತ್ತ, ಕರುಳಾಯಿ, ಕೇರಂಗ್.

ಆಸ್ಟ್ರೇಲಿಯಾದ ಅಗ್ರ ಹತ್ತು ಜಮಾತ್‌ಗಳು: ಮೆಲ್ಬೋರ್ನ್ ಲ್ಯಾಂಗ್ ವಾರಿನ್, ಮೆಲ್ಬೋರ್ನ್ ಬರ್ವಿಕ್, ಮಾರ್ಸ್ಡೆನ್ ಪಾರ್ಕ್, ಪೆನ್ರಿತ್, ಪರ್ತ್, ಅಡಿಲೇಡ್ ವೆಸ್ಟ್, ಕ್ಯಾಸಲ್ ಹಿಲ್. ಕ್ಯಾಸಲ್ ಹಿಲ್), ಬ್ರಿಸ್ಬೇನ್ ಲೋಗನ್ ಈಸ್ಟ್ (ಬ್ರಿಸ್ಬೇನ್ ಲೋಗನ್ ಈಸ್ಟ್), ಪ್ಯಾರಮಟ್ಟಾ (ಪ್ಯಾರಮಟ್ಟಾ), ಮೆಲ್ಬೋರ್ನ್ ಕ್ಲೈಡ್ (ಮೆಲ್ಬೋರ್ನ್). ಇವು ಅವರ ಹತ್ತು ಜಮಾತ್‌ಗಳಾಗಿವೆ.

ಅಲ್ಲಾಹನು ಈ ಎಲ್ಲ ತ್ಯಾಗಗಳನ್ನು ಮಾಡುವವರ ಸಂಪತ್ತು ಮತ್ತು ಸಂತಾನಗಳಲ್ಲಿ ಅನುಗ್ರಹ ಸುರಿಸಲಿ. ಈ ಜನರು ಹಿಂದಿಗಿಂತ ಹೆಚ್ಚಾಗಿ ತ್ಯಾಗಗಳನ್ನು ಮಾಡುವವರಾಗಲಿ.

ಪೆಲಸ್ತೀನಿಯರನ್ನು ಯಾವಾಗಲೂ ದುಆವಿನಲ್ಲಿ ನೆನಪಿಡಿರಿ. ಅವರನ್ನು ಮರೆಯಬೇಡಿರಿ. ಪೀಡನೆಯಿಂದ ತತ್ತರಿಸುತ್ತಿರುವ ಮಹಿಳೆಯರು ಮತ್ತು ಮಕ್ಕಳನ್ನು ಅಲ್ಲಾಹನು ರಕ್ಷಿಸಲಿ. ...*...*...*...

**ದಿವ್ಯದೂತರು (ಮಲಾಯಿಕ)**

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನುಡಿಯುತ್ತಾರೆ: "ಒಬ್ಬ ಮಹತ್ವಶಾಲಿ ವ್ಯಕ್ತಿ ದೇವನ ಪ್ರಾತಿನಿಧ್ಯದ ಉಡುಗೆಯಿಂದ ಭೂಷಿತರಾಗಿ (ದೇವನ ಖಲೀಫರಾಗಿ) ಮತ್ತು ದೇವವಾಣಿಯಿಂದ ಅನುಗ್ರಹೀತರಾಗಿ ಭೂಮಿಗೆ ಇಳಿಯುವಾಗ ದಿವ್ಯದೂತರ ಮತ್ತು ಪವಿತ್ರಾತ್ಮದ ಅವತರಣ ಅಥವಾ ಭೂಮಿಗೆ ಇಳಿಯುವಿಕೆ ಉಂಟಾಗುತ್ತದೆ.ಪವಿತ್ರಾತ್ಮ ವಿಶಿಷ್ಟವಾಗಿ ದೇವನ ಪ್ರತಿನಿಧಿಗೆ ಲಭಿಸುತ್ತದೆ."

***(ಫತ್‌ಹೆ ಇಸ್ಲಾಮ್; ರೂಹಾನೀ ಖಝಾಇನ್ ಸಂಪುಟ 3, ಪುಟ 12)***

**ಸದರ್ ಅಂಜುಮನ್ ಅಹ್ಮದಿಯಾ ಖಾದಿಯಾನ್‌ನ ಕಚ್ಚೇರಿಗಳಲ್ಲಿ ಸೇವೆಸಲ್ಲಿಸಲು ಸೇವೆಸಲ್ಲಿಸಲು ಆಸಕ್ತಿ ಹೊಂದಿದವರು ಗಮನಿಸಬೇಕು**

**ಎರಡನೇ ದರ್ಜೆಯ ಪೋಸ್ಟ್‌ಗಾಗಿ ಷರತ್ತುಗಳು**

(1) ಅಭ್ಯರ್ಥಿಯ ವಯಸ್ಸು 25 ವರ್ಷಗಳಿಗಿಂತ ಹೆಚ್ಚು ಮತ್ತು 18 ವರ್ಷಗಳಿಗಿಂತ ಕಡಿಮೆಯಿರಬಾರದು (2) ಅಭ್ಯರ್ಥಿಯು 45% ಅಂಕಗಳೊಂದಿಗೆ ಕನಿಷ್ಠ 10+2 ರ ಶೈಕ್ಷಣಿಕ ಅರ್ಹತೆಯನ್ನು ಹೊಂದಿರಬೇಕು (3) ಅಭ್ಯರ್ಥಿಯು ಉರ್ದು/ಇಂಗ್ಲಿಷ್ ಕಮ್ಪೋಝಿಂಗ್ ತಿಳಿದಿರಬೇಕು ಮತ್ತು ವೇಗದ ಮಿತಿ ಪ್ರತಿ ನಿಮಿಷಕ್ಕೆ 25 ಪದಗಳಾಗಿರಬೇಕು (4) ಈ ಪ್ರಕಟಣೆಯ ನಂತರ 2 ತಿಂಗಳೊಳಗೆ ಸ್ವೀಕರಿಸಿದ ಅರ್ಜಿಗಳನ್ನು ಪರಿಗಣಿಸಲಾಗುತ್ತದೆ.

ಎರಡನೇ ದರ್ಜೆಯವರಿಗೆ ಪರೀಕ್ಷೆ ಕೆಳಕಂಡಂತೆ ಪಠ್ಯಕ್ರಮದಂತೆ ಇರುತ್ತದೆ. ಪರೀಕ್ಷೆಯ ಪ್ರತಿ ಭಾಗದಲ್ಲೂ ಉತ್ತೀರ್ಣ ಆಗುವುದು ಕಡ್ಡಾಯವಾಗಿರುತ್ತದೆ.

**ಭಾಗ–1:** * ಪವಿತ್ರ ಖುರ್‌ಆನ್ ನಾಝಿರ ಪೂರ್ಣ, ಅನುವಾದದೊಂದಿಗೆ ಮೊದಲ ಭಾಗ * ಚಾಲೀಸ್ ಜವಾಹಿರ್ ಪಾರೆ. ಅರ್ಕಾನೆ ಇಸ್ಲಾಮ್, ಸಂಪೂರ್ಣ ನಮಾಝ್ ಅನುವಾದದೊಂದಿಗೆ. **(30 ಸಂಖ್ಯೆಗಳು)**

**ಭಾಗ–2:** ಕಶ್ತಿ ನೂಹ್, ಬರಕಾತುದ್ದುಆ, ದೀನೀ ಮಾಲೂಮಾತ್ * ಪ್ರಬಂಧ ಅಹ್ಮದೀಯ ಜಮಾತ್‌ನ ನಂಬಿಕೆಗಳು * ನಝ್ಮ್ ದುರ್‍ರೆ ಸಮೀನ್ (ಶಾನ್ ಇಸ್ಲಾಂ). **(20 ಅಂಕಗಳು)**

**ಭಾಗ–3:** ಇಂಗ್ಲಿಷ್ ಪದವಿ ಪೂರ್ವ ಶಿಕ್ಷಣದ (10+2) ಮಾನದಂಡದ ಪ್ರಕಾರ. **(20 ಅಂಕಗಳು)**

**ಭಾಗ–4:** ಮೆಟ್ರಿಕ್ ಮಾನದಂಡದ ಪ್ರಕಾರ ಅಂಕಗಣಿತ (ಆಫೀಸ್ ಇಂಪ್ರೆಸ್‌ಗೆ ಸಂಬಂಧಿಸಿದ ಪ್ರಶ್ನೆಗಳು). **(20 ಅಂಕಗಳು)**

**ಭಾಗ–5:** ಸಾಮಾನ್ಯಜ್ಞಾನ (ಜಿ.ಕೆ) **(10 ಅಂಕಗಳು)**

(6) ಲಿಖಿತ ಪರೀಕ್ಷೆಯಲ್ಲಿ ಉತ್ತೀರ್ಣರಾದ ಅಭ್ಯರ್ಥಿಗಳನ್ನು ಮಾತ್ರ ಸಂದರ್ಶಿಸಲಾಗುವುದು (7) ಲಿಖಿತ ಪರೀಕ್ಷೆ, ಕಂಪ್ಯೂಟರ್ ಪರೀಕ್ಷೆ ಮತ್ತು ಸಂದರ್ಶನದಲ್ಲಿ ಯಶಸ್ವಿನ ಸಂದರ್ಭದಲ್ಲಿ, ಅಭ್ಯರ್ಥಿಯು ನೂರ್ ಆಸ್ಪತ್ರೆ ಖಾದಿಯನ್‌ನಲ್ಲಿ ವೈದ್ಯಕೀಯ ತಪಾಸಣೆಗೆ ಒಳಗಾಗಬೇಕಾಗುತ್ತದೆ ಮತ್ತು ನೂರ್ ಆಸ್ಪತ್ರೆ ಸಮಿತಿಯ ವರದಿಯ ಪ್ರಕಾರ ಯಾರು ಆರೋಗ್ಯವಂತಿರುತ್ತಾರೊ ಆ ಅಭ್ಯರ್ಥಿಗಳು ಮಾತ್ರ ಸೇವೆಸಲ್ಲಿಸಲು ಅರ್ಹರಾಗಿರುತ್ತಾರೆ. (8) ಆಯ್ಕೆಯ ಸಂದರ್ಭದಲ್ಲಿ, ಅಭ್ಯರ್ಥಿಯು ಖಾದಿಯಾನ್‌ನಲ್ಲಿ ತನ್ನ ಸ್ವಂತ ವಸತಿಯನ್ನು ವ್ಯವಸ್ಥೆಗೊಳಿಸಬೇಕಾಗುತ್ತದೆ, ವಸತಿಗೆ ಸಂಬಂಧಿಸಿದಂತೆ ನಂತರ ಸ್ವೀಕರಿಸಿದ ಅರ್ಜಿಯ ಮೇಲೆ ಯಾವುದೇ ಕ್ರಮವನ್ನು ತೆಗೆದುಕೊಳ್ಳಲಾಗುವುದಿಲ್ಲ. (9) ಖದಿಯಾನ್ ಪ್ರಯಾಣದ ವೆಚ್ಚಗಳು ಅಭ್ಯರ್ಥಿಯ ಸ್ವಂತ ಜವಾಬ್ದಾರಿಯಾಗಿರುತ್ತದೆ.

**(ಗಮನಿಸಿ: ಲಿಖಿತ ಪರೀಕ್ಷೆ ಮತ್ತು ಸಂದರ್ಶನದ ದಿನಾಂಕವನ್ನು ಅಭ್ಯರ್ಥಿಗಳಿಗೆ ನಂತರ ತಿಳಿಸಲಾಗುವುದು)**

**ಸದರ್ ಅಂಜುಮನ್ ಅಹ್ಮದಿಯಾ, ಅಂಜುಮನ್ ತೆಹ್ರೀಕೆ ಜದೀದ್, ಅಂಜುಮನ್ ವಖ್ಫೆ ಜದೀದ್ ಖಾದಿಯಾನ್‌ನಲ್ಲಿ ಸೇವೆಸಲ್ಲಿಸಲು ಆಸಕ್ತಿ ಹೊಂದಿದವರು ಗಮನಿಸಬೇಕು**

**ಮಾಲಿ (ತೋಟಗಾರ) / ಕೇರ್‌ಟೇಕರ್ / ಕಾವಲುಗಾರ / ಅಡುಗೆಗಾರ / ರೊಟ್ಟಿ ಮಾಡುವವ /ಮಸ್ಜಿದ್ ಸೇವಕಗೆ ನಾಲ್ಕನೇ ಗ್ರೇಡ್‌ಗೆ (ಶರತ್ತುಗಳು) ಅವಶ್ಯಕತೆಗಳು**

(1) ಅಭ್ಯರ್ಥಿಯ ವಯಸ್ಸು 40 ವರ್ಷಗಳಿಗಿಂತ ಹೆಚ್ಚಿರಬೇಕು ಮತ್ತು 18 ವರ್ಷಗಳಿಗಿಂತ ಕಡಿಮೆಯಿರಬಾರದು (2) ಅಭ್ಯರ್ಥಿಯ ಯಾವುದೇ ಶೈಕ್ಷಣಿಕ ಅವಶ್ಯಕತೆಗಳಿಲ್ಲ (3) ಜನನ ಪ್ರಮಾಣಪತ್ರವನ್ನು ಹಾಜರುಪಡಿಸಬೇಕು (4) ಈ ಪ್ರಕಟಣೆಯ ನಂತರ 2 ತಿಂಗಳೊಳಗೆ ಸ್ವೀಕರಿಸಿದ ಅರ್ಜಿಗಳನ್ನು ಪರಿಗಣಿಸಲಾಗುವುದು (5) ಕಾರ್ಮಿಕರ ನೇಮಕಾತಿಗಾಗಿ ಕೇಂದ್ರ ಸಮಿತಿಯ ಸಂದರ್ಶನದಲ್ಲಿ ಯಶಸ್ವಿಯಾಗುವ ಅಭ್ಯರ್ಥಿಗಳನ್ನು ಮಾತ್ರ ಸೇವೆಗೆ ತೆಗೆದುಕೊಳ್ಳಲಾಗುತ್ತದೆ (6) ಸಂದರ್ಶನದಲ್ಲಿ ಯಶಸ್ವಿಯಾದರೆ, ಅಭ್ಯರ್ಥಿಯು ನೂರ್ ಆಸ್ಪತ್ರೆ ಖಾದಿಯಾನ್‌ನಲ್ಲಿ ವೈದ್ಯಕೀಯ ಪರೀಕ್ಷೆಗೆ ಒಳಗಾಗಬೇಕಾಗುತ್ತದೆ ಮತ್ತು ಯಾವ ಅಭ್ಯರ್ಥಿಗಳನ್ನು ನೂರ್ ಆಸ್ಪತ್ರೆಯ ವೈದ್ಯಕೀಯ ಮಂಡಳಿಯ ವರದಿಯ ಪ್ರಕಾರ ಆರೋಗ್ಯಕರ ಮತ್ತು ಸದೃಢರಾಗಿರುವವರು ಅರ್ಹರಾಗಿರುತ್ತಾರೆ ಅಂತಹ ಅಭ್ಯರ್ಥಿಗೆ ಮಾತ್ರ ಸೇವೆಗೆ ಪರಿಗಣಿಸಲಾಗುತ್ತದೆ (7) ಆಯ್ಕೆಯ ಸಂದರ್ಭದಲ್ಲಿ, ಅಭ್ಯರ್ಥಿಯು ಅವನ/ಅವಳ ಸ್ವಂತ ವಸತಿಯ ವ್ಯವಸ್ಥೆ ಮಾಡಬೇಕಾಗುತ್ತದೆ (8) ಖಾದಿಯಾನ್‌ಗೆ ಪ್ರಯಾಣದ ವೆಚ್ಚಗಳು ಅಭ್ಯರ್ಥಿಯ ಜವಾಬ್ದಾರಿಯಾಗಿರುತ್ತದೆ. **(ಗಮನಿಸಿ:** ಸಂದರ್ಶನದ ದಿನಾಂಕದ ಬಗ್ಗೆ ಅಭ್ಯರ್ಥಿಗಳಿಗೆ ನಂತರ ತಿಳಿಸಲಾಗುವುದು)

***ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:***

ನಝಾರತ್ ದೀವಾನ್ ಸ್ರ ಅಂಜುಮನ್ ಅಹ್ಮದಿಯಾ
ಖಾದಿಯಾನ್–143516
ಮೊಬೈಲ್: 09682627592, 09682587713,
ಕಛೇರಿ: 01872–501130
ಇ–ಮೇಲ್: diwan@qadian.in

*(ಪುಟ ಸಂಖ್ಯೆ 02ರ ಉಳಿದ ಭಾಗ)*

ವಚನವನ್ನು ರದ್ದುಗೊಳಿಸಿದಂತಾಗುವುದು.

**ಹಝ್ರತ್ ಮಸೀಹ್ ಮೌಊದ್(ಅ)ರ ಬಗ್ಗೆ ಶಾರೀರಿಕ ಸಂಬಂಧದ ಪ್ರತಿಪಾದಕರ ಅಭಿಪ್ರಾಯ**

ಶಾರೀರಿಕ ಸಂಬಂಧದ ಪ್ರತಿಪಾದಕರಾದ ಜನರಲ್ಲಿ ಕೆಲವರು ವಾಗ್ದತ್ತ ಮಹಾನುಭಾವರನ್ನು ಹಝ್ರತ್ ಹಸನರ ಸಂತಾನದವರಾಗಿ ಮಾಡಿದ್ದಾರೆ. ಕೆಲವರು ಹಝ್ರತ್ ಹುಸೈನರ ಸಂತಾನದವರಾಗಿ ಮತ್ತು ಬೇರೆ ಕೆಲವರು ಹಝ್ರತ್ ಅಬ್ಬಾಸರ ಸಂತಾನಕ್ಕೆ ಸೇರಿದವರಾಗಿ ಹೇಳಿದ್ದಾರೆ.

**ಹಝ್ರತ್ ಪೈಗಂಭರ್(ಸ.ಅ)ರ ಪ್ರತಿಯೊಂದು ಪರಿಪೂರ್ಣತೆಯು ವಾಗ್ದತ್ತ ಮಸೀಹಿನಲ್ಲಿ ಪ್ರತಿಬಿಂಬಿಸುತ್ತದೆ**

ಆದರೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಂದಿಗೆ ವಾಗ್ದತ್ತ ಮಹಾನುಭಾವರ ಸಂಬಂಧ ಪುತ್ರನ ಹಾಗೆ ವಾರೀಸುದಾರರಾಗುವರು. ಅವರ ಹೆಸರಿನ ವಾರೀಸುದಾರರಾಗುವರು. ಅವರ ಸ್ವಭಾವಗುಣಗಳ ವಾರೀಸುದಾರರಾಗುವರು. ಅವರ ಜ್ಞಾನದ ವಾರೀಸುದಾರರಾಗುವರು. ಅವರ ಆಧ್ಯಾತ್ಮಿಕತೆಯ ವಾರೀಸುದಾರರಾಗುವರು. ಪ್ರತಿಯೊಂದು ರೀತಿಯಲ್ಲಿ ವಾಗ್ದತ್ತ ಮಹಾನುಭಾವ ತನ್ನೊಳಗೆ ಅವರ ಚಿತ್ರವನ್ನು ಹೊಂದುವರು. ಎಲ್ಲವನ್ನೂ ಹಝ್ರತ್ ಪೈಗಂಬರರ ಮೂಲಕವೇ ಪಡೆಯುವರು. ಅವರಲ್ಲಿ ಅರ್ಪಿತನಾಗಿ ಅವರ ಚಹರೆ ತೋರಿಸುವರು. ವಾಗ್ದತ್ತ ವ್ಯಕ್ತಿ ನೆರಳಿನ ರೂಪದಲ್ಲಿ ಹಝ್ರತ್ ಪೈಗಂಬರರ ಹೆಸರು ಪಡೆಯುವರು. ಅವರ ಸ್ವಭಾವ ಗುಣಗಳನ್ನು ಹೊಂದುವರು. ಅವರ ಜ್ಞಾನ ಹೊಂದುವರು. ಅದೇ ರೀತಿ ನಬಿ ಎಂಬ ಬಿರುದು ಪಡೆಯುವರು. ಏಕೆಂದರೆ ತದ್ರೂಪಿಯ ಚಿತ್ರ ಪರಿಪೂರ್ಣವಾಗಲು ಪ್ರತಿಯೊಂದು ರೀತಿಯಲ್ಲಿ ಮೂಲ ರೂಪಿಯ ಗುಣಗಳನ್ನು ಪರಿಪೂರ್ಣವಾಗಿ ತನ್ನಲ್ಲಿ ಹೊಂದಿರಬೇಕು. ನುಬುವ್ವತ್ ಹಝ್ರತ್ ಪೈಗಂಬರರ ಒಂದು ವಿಶಿಷ್ಟ ಸ್ಥಾನವಾದುದರಿಂದ ಅವರ ತದ್ರೂಪಿಯಲ್ಲೂ ಅದು ಇರಬೇಕಾದುದು ಆವಶ್ಯಕವಾಗಿದೆ.

**ತದ್ರೂಪಿಯಾಗಿರುವುದರಿಂದ ಖಾತಮನ್ನಬೀಈನ್ ಮುದ್ರೆಗೆ ಭಂಗ ಸಂಭವಿಸುವುದಿಲ್ಲ**

ಎಲ್ಲ ಪ್ರವಾದಿಗಳು ಅಂಗೀಕರಿಸುತ್ತಾ ಇದ್ದುದೇನೆಂದರೆ ತದ್ರೂಪಿ ತನ್ನ ಮೂಲ ರೂಪಿಯ ಪೂರ್ಣ ಚಿತ್ರವಾಗಿರುತ್ತಾನೆಂದು ಮತ್ತು ಹೆಸರು ಸಹ ಒಂದೇ ಆಗಿರುವುದೆಂದು. ಆದುದರಿಂದ ಸ್ಪಷ್ಟವಾಗುವುದೇನೆಂದರೆ ತದ್ರೂಪಿಯಾಗಿ ಮುಹಮ್ಮದ್ ಮತ್ತು ಅಹ್ಮದ್ ಹೆಸರನ್ನು ಇರಿಸುವುದರಿಂದ ಆ ವ್ಯಕ್ತಿ ಮುಹಮ್ಮದ್ ಮತ್ತು ಅಹ್ಮದ್ ಆಗುವುದಿಲ್ಲ. ಇದೇ ರೀತಿ ತದ್ರೂಪಿಯಾಗಿ ನಬಿ ಮತ್ತು ರಸೂಲ್ ಆಗುವುದರಿಂದ ಖಾತಮುನ್ನಬಿಯ್ಯೀನ್ ಎಂಬ ಮುದ್ರೆಗೆ ಭಂಗ ಸಂಭವಿಸುವುದಿಲ್ಲ. ಏಕೆಂದರೆ ತದ್ರೂಪಿ ಅಸ್ತಿತ್ವ ಬೇರೆಯೇ ಅಸ್ತಿತ್ವವಲ್ಲ. ಅದೇ ರೀತಿ ಮುಹಮ್ಮದ್ ಎಂಬ ಹೆಸರಿನ ನುಬುವ್ವತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಸೀಮಿತವಾಗುವುದು. ಎಲ್ಲ ಪ್ರವಾದಿಗಳು (ಅಲೈಹಿಮುಸ್ಸಲಾಮ್) ಈ ವಿಷಯದ ಬಗ್ಗೆ ಒಮ್ಮತ ಹೊಂದಿದ್ದಾರೆ. ತದ್ರೂಪದಲ್ಲಿ ದ್ವಂದ್ವವಿಲ್ಲ. ಏಕೆಂದರೆ ತದ್ರೂಪದ ಸ್ಥಿತಿ ಹೀಗಿರುತ್ತದೆ:

ಮನ್ ತೌ ಶುದಮ್ ತೌಮನ್ ಶುದೇ, ಮನ್ ತನ್ ಶುದಮ್ ತೌ ಜಾನ್‌ಶುದೇ; ತಾಕಸ್ ನ ಗೂಯದ್ ಬಅದ್‌ಝೀಂ, ಮನ್ ದೀಗರಮ್ ತೌ ದೀಗರೇ

ಅರ್ಥ: ನಾನು ನೀನಾದೆ ನೀನು ನಾನಾದೆ, ನಾನು ಶರೀರವಾದೆ ನೀನು ಜೀವವಾದೆ. ಯಾರಾದರೂ ಅನಂತರ ಹೇಳದಿರಲಿ, ನಾನು ಬೇರೆ ನೀನು ಬೇರೆ ಎಂದು.

**ಯಾವುದೇ ಹೊರಗಿನವರ ಆಗಮನದಿಂದ ಖಾತಮನ್ನಬಿಈನ್‌ನ ಮುದ್ರೆಯು ಮುರಿದುಹೋಗುತ್ತದೆ**

ಆದರೆ ಹಝ್ರತ್ ಈಸಾ ಅಲೈಹಿಸ್ಸಲಾವ್ ಲೋಕಕ್ಕೆ ಆಗಮಿಸುವುದಾದರೆ ಖಾತಮುನ್ನಬಿಯ್ಯೀನ್ ಎಂಬ ಮುದ್ರೆಯನ್ನು ಮುರಿಯದೆ ಬರುವುದಾದರೂ ಹೇಗೆ ಖಾತಮುನ್ನಬಿಯ್ಯೀನ್ ಎಂಬುದು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ನುಬುವ್ವತ್‌ಗೆ ತಗಲಿಸಿರುವ ಒಂದು ಮುದ್ರೆಯಾಗಿದೆ. ಈ ಮುದ್ರೆ ಮುರಿದು ಹೋಗುವುದು ಎಂದೂ ಸಾಧ್ಯವಾಗದು. ಆದರೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ತದ್ರೂಪಿಯಾಗಿ ಒಮ್ಮೆಯಲ್ಲ ಸಾವಿರ ಸಾರಿ ಸಹ ಆಗಮಿಸಬಹುದಾಗಿದೆ. ತದ್ರೂಪಿಯಾಗಿ ತನ್ನ ಪರಿಪೂರ್ಣತೆಗಳನ್ನು ಮತ್ತು ನುಬುವ್ವತ್ತನ್ನು ಪ್ರಕಟಿಸಬಹುದು.

**ಬುರೂಝ್ (ತದ್ರೂಪಿ) ಅಲ್ಲಾಹನಿಂದ ನೇಮಿಸಲ್ಪಟ್ಟ ಒಂದು ವಾಗ್ದಾನವಾಗಿತ್ತು**

ತದ್ರೂಪ ಅಲ್ಲಾಹನಿಂದ ನೇಮಿಸಲ್ಪಟ್ಟ ಒಂದು ವಾಗ್ದಾನವಾಗಿದೆ. ಅಲ್ಲಾಹನು ಅದರ ಬಗ್ಗೆ **ವ ಆಖರೀನ ಮಿನ್‌ಹುಮ್** ಎಂಬ ವಚನದಲ್ಲಿ ಹೇಳಿದ್ದಾನೆ. ಪ್ರವಾದಿಗಳಿಗೆ ತಮ್ಮ ತದ್ರೂಪಿಗಳ ಬಗ್ಗೆ ಅನ್ಯತೆ ಇರುವುದಿಲ್ಲ. ಏಕೆಂದರೆ ತದ್ರೂಪಿ ಅವರದೇ ನಕ್ಷೆ ಆಗಿರುತ್ತಾರೆ. ಆದರೆ ಬೇರೆಯವರಿಗೆ ಸಂಬಂಧಿಸಿ ಅನ್ಯತೆ ಇರುತ್ತದೆ. ನೀವು ನೋಡಿರಿ ಮಿಅ್‌ರಾಜ್ ರಾತ್ರಿಯಲ್ಲಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ್ರತ್ ಮೂಸಾ ಅಲೈಹಿಸ್ಸಲಾಮರಿದ್ದ ಸ್ಥಾನದಿಂದ ಮುಂದೆ ಸಾಗಿದುದನ್ನು ಕಂಡಾಗ ಹಝ್ರತ್ ಮೂಸಾ ಅಲೈಹಿಸ್ಸಲಾಮ್ ಅಳುತ್ತಾ ತನ್ನ ಅನ್ಯತೆಯನ್ನು ಪ್ರಕಟಿಸಿದುದನ್ನು ನೋಡಿರಿ. ಹೀಗಿರುವಾಗ ಅಲ್ಲಾಹನು ನಿನ್ನ ಅನಂತರ ಬೇರೆ ಒಬ್ಬ ಪ್ರವಾದಿ ಬರಲಾರರೆಂದು ಹೇಳಿ ಅನಂತರ ತನ್ನ ಹೇಳಿಕೆಗೆ ವಿರುದ್ಧವಾಗಿ ಹಝ್ರತ್ ಈಸಾರನ್ನು ಕಳುಹಿಸಿದರೆ ಅದು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಎಷ್ಟು ಮನೋವ್ಯಥೆಗೆ ಕಾರಣವಾಗುವುದು ಎಂದು ಚಿಂತಿಸಿರಿ. ಆದರೆ ತದ್ರೂಪಿಯಾಗಿ ನುಬುವ್ವತ್ ಗಳಿಸುವುದರಿಂದ ಖತ್‌ಮುನುಬುವ್ವತ್‌ಗೆ ಭಂಗವುಂಟಾಗಲಾರದು. ಖಾತಮುನ್ನಬಿಯ್ಯೀನ್ ಎಂಬ ಮುದ್ರೆ ಮುರಿದು ಹೋಗುವುದೂ ಇಲ್ಲ. ಆದರೆ ಬೇರೆ ಪ್ರವಾದಿ ಆಗಮಿಸುವುದರಿಂದ ಇಸ್ಲಾಮ್ ನಾಶವಾಗುದೆ ಮತ್ತು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಕಠಿಣವಾದ ಅಪಮಾನವಾಗುತ್ತದೆ ದಜ್ಜಾಲನ ನಾಶ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಂದಲ್ಲ ಹಝ್ರತ್ ಈಸಾರಿಂದ ಆಗುವುದು ಎಂಬ ಮಾತಿನಿಂದ **ವಲಾಕಿನ್ ರ್ರಸೂಲುಲ್ಲಾಹಿ ವ ಖಾತಮನ್ನಬಿಯ್ಯೀನ್** ಎಂಬ ವಚನ ಸುಳ್ಳಾಗುವುದು – ನಊಧುಬಿಲ್ಲಾಹ್.

ಈ ವಚನದಲ್ಲಿ ಒಂದು ಭವಿಷ್ಯವಾಣಿ ರಹಸ್ಯವಾಗಿ ಅಡಕವಾಗಿದೆ. ನುಬುವ್ವತ್‌ಗೆ ಖಿಯಾಮತ್ ತನಕ ಮುದ್ರೆ ಹಾಕಲಾಗಿದೆ. ಆದರೆ ತದ್ರೂಪಿಗಳು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಅಸ್ತಿತ್ವವೇ ಆಗಿದ್ದಾರೆ. ಅವರ ಹೊರತು ಬೇರೆ ಯಾರಿಗೂ ಅಲ್ಲಾಹನಿಂದ ಅದೃಶ್ಯ ಸಮಾಚಾರ ಗಳಿಸಲಾರದು. ಪುರಾತನ ಕಾಲದಿಂದ ವಾಗ್ದಾನ ಮಾಡಲ್ಪಟ್ಟ ಮುಹಮ್ಮದೀ ತದ್ರೂಪಿ ನಾನಾಗಿರುವೆನು. ನನಗೆ ತದ್ರೂಪಿಯ ರೀತಿಯಲ್ಲಿ ನುಬುವ್ವತ್ ನೀಡಲ್ಪಟ್ಟಿದೆ. ಈ ನುಬುವ್ವತ್‌ಗೆ ಎದುರಾಗಿ ಸಮಸ್ತ ಲೋಕ ನಿಸ್ಸಹಾಯಕವಾಗಿದೆ. ಏಕೆಂದರೆ ನುಬುವ್ವತ್‌ಗೆ ಮುದ್ರೆ ಹಾಕಲಾಗಿದೆ. ಒಬ್ಬ ಮುಹಮ್ಮದೀ ತದ್ರೂಪಿ ಎಲ್ಲ ಮುಹಮ್ಮದೀ ಪರಿಪೂರ್ಣತೆಗಳೊಂದಿಗೆ ಆಖರೀ ಝಮಾನದಲ್ಲಿ ಆಗಮಿಸುವುದು ವಿಧಿಸಲ್ಪಟ್ಟದ್ದಾಗಿತ್ತು. ಆ ತದ್ರೂಪಿ ಪ್ರಕಟವಾಗಿರುವನು. ಈ ಒಂದು ಬಾಗಿಲಿನ ಹೊರತು ನುಬುವ್ವತ್ತಿನ ಕಾರಂಜಿಯಿಂದ ನೀರನ್ನು ಕುಡಿಯಲು ಬೇರೆ ಬಾಗಿಲುಗಳು ಇಲ್ಲ.

ಸಂಕ್ಷಿಪ್ತವಾಗಿ ಹೇಳುವುದಾದರೆ ತದ್ರೂಪಿಯ ರೀತಿಯಲ್ಲಿ ನುಬುವ್ವತ್ ಮತ್ತು ರಿಸಾಲತ್‌ನಿಂದ ಖತಮಿಯ್ಯತ್ ಮುದ್ರೆ ಭಂಗವಾಗುವುದಿಲ್ಲ. ಹಝ್ರತ್ ಈಸಾ ಸ್ವತಃ ಇಳಿದು ಬರುವರೆಂಬ ಯೋಚನೆ **ವಲಾಕಿನ್ ರಸೂಲುಲ್ಲಾಹಿ ವ ಖಾತಮನ್ನಬಿಯ್ಯೀನ್**ಗೆ ವಿರುದ್ಧವಾಗಿದೆ. ಅದು ಖತಮಿಯ್ಯತ್ತಿನ ಮುದ್ರೆಯನ್ನು ಮುರಿದು ಹಾಕುತ್ತಿದೆ. ಈ ನಿರರ್ಥಕ ವಿಶ್ವಾಸಕ್ಕೆ ಪವಿತ್ರ ಖುರ್‌ಆನ್‌ನಲ್ಲಿ ಯಾವ ಚಿಹ್ನೆಯೂ ಇಲ್ಲ. ಹಾಗೆ ಇರಲು ಸಾಧ್ಯವಿಲ್ಲ. ಏಕೆಂದರೆ ಈ ವಿಶ್ವಾಸ ಮೇಲೆ ಉಲ್ಲೇಖಿಸಿದ ವಚನಕ್ಕೆ ವಿರುದ್ಧವಾಗಿದೆ. ಆದರೆ ಒಬ್ಬ ತದ್ರೂಪಿ ನಬಿ ಮತ್ತು ರಸೂಲ್ ಆಗಮಿಸುವ ಬಗ್ಗೆ ಪವಿತ್ರ ಖುರ್‌ಆನ್‌ನಿಂದ ಸಾಬೀತಾಗುತ್ತದೆ. **ವ ಆಖರೀನ ಮಿನ್‌ಹುಮ್** ಎಂಬ ವಚನದಿಂದ ಇದು ಸ್ಪಷ್ಟವಾಗುತ್ತದೆ. (ಏಕ್ ಗ಼ಲ್ತಿ ಕಾ ಇಝಾಲ, ರೂಹಾನಿ ಖಝಾಈನ್, ಸಂಪುಟ–18, ಪುಟ–212–216)

ಸಯ್ಯದುನಾ ಹಝ್ರತ್ ಮ,ಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಈ ಎಲ್ಲಾ ಮಾತುಗಳು ಪವಿತ್ರ ಖುರ್‌ಆನ್ ಮತ್ತು ಹದೀಸ್ ಮತ್ತು ಉಮ್ಮತ್ತಿನ ಹಿರಿಯ ವಿದ್ವಾಂಸರ ಅಧ್ಯಾಪನೆಗಳು ಮತ್ತು ಹೇಳಿಕೆಗಳು ಮತ್ತು ಅವುಗಳ ವ್ಯಾಖ್ಯಾನಕ್ಕೆ ಅನುಗುಣವಾಗಿವೆ. ಅನೇಕ ಮಾತುಗಳಿವೆ, ಆದರೆ ಸ್ಥಳಾವಕಾಶದ ಕೊರತೆಯಿಂದಾಗಿ, ನಾವು ಕೆಲವನ್ನು ಮಾತ್ರ ಪ್ರಸ್ತುತಪಡಿಸಿದ್ದೇವೆ. ಅಲ್ಲಾಹನು ಎಲ್ಲರಿಗೂ ತಿಳುವಳಿಕೆಯನ್ನು ನೀಡಲಿ. ಆಮೀನ್.

**(ಮನ್ಸೂರ್ ಅಹ್ಮದ್ ಮಸ್ರೂರ್)**

"ಖಡ್ಗಗಳಿಂದ ಪ್ರದೇಶಗಳನ್ನು ಜಯಿಸಬಹುದು ಆದರೆ ಹೃದಯಗಳನ್ನಲ್ಲ ಬಲದಿಂದ ಶಿರಗಳನ್ನು ಬಾಗಿಸಬಹುದು ಆದರೆ ಮನಸ್ಸುಗಳನ್ನಲ್ಲ"
(ಹಝ್ರತ್ ಮಿರ್ಝಾ ತಾಹಿರ್ ಅಹ್ಮದ್ ಖಲೀಫತುಲ್ ಮಸೀಹ್ ರಾಬಿ(ರ))

ದುಆವಿನ ಆಕಾಂಕ್ಷಿ:
**M.B. Nasir Ahmed & Family, Bengaluru, Karnataka**

"ವಾಗ್ದಾನವನ್ನು ನೆರವೇರಿಸುವುದು ಸತ್ಯವಿಶ್ವಾಸದ ಅಂಶವಾಗಿದೆ"
(ಹಝ್ರತ್ ಮುಹಮ್ಮದ್ ಪೈಗಂಬರ್(ಸ))

ದುಆವಿನ ಆಕಾಂಕ್ಷಿ:
**Mubarak Ahmed Naseem & Family, Shimoga, Karnataka**

EDITOR
TARIQ AHMED IDRIS.
Mobile : +91 9902678609
e-mail: kannadabadar@gmail.com
website:www.akhbarbadr.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613

Weekly **BADAR** Qadian

Distt: Gurdaspur (Pb.) INDIA Qadian - 143516

Postal Reg. No: 3000039689/2023-25 Vol No.04, Thursday, 07 Deceember 2023, Issue No. 49

MANAGER
SHAIKH MUJAHID AHMAD.
Mobile : +91 99153 79255
e-mail:managerbadrqnd@gmail.com
www.alislam.org/badr

ANNUAL SUBSCRIPTION: Rs.600/- (Per Issue: 10/- ) (WEIGHT: 20-50, grms / issue)

## ಇಸ್ಲಾಂ ಮತ್ತು ಸೈಯ್ಯದ್‌ನಾ ಹಝ್ರತ್ ಮಸಿಹ್ ಮೌಊದ್ ಅಲೈಹಿಸ್ಸಲಾಮ್‌ರವರ ಕಟು ವಿರೋಧಿಯಾದ ಅಲೆಕ್ಸಾಂಡರ್ ಡೂಯಿಯ ಝಿಯಾನ್ ನಗರದಿಂದ ಪ್ರಾರಂಭವಾದ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್(ಅತಬಿಅ)ರವರ ಅಸಾಧಾರಣ ಅನುಗ್ರಹದಾಯಕ ಅಮೇರಿಕದ ಐತಿಹಾಸಿಕ ಪ್ರವಾಸ ಸೆಪ್ಟೆಂಬರ್, ಅಕ್ಟೋಬರ್ 2022

*(ಬದರ್ ಸಂಚಿಕೆ-48ರ ಉಳಿದ ಭಾಗ ಮುಂದುವರಿಸಲಾಗಿದೆ)*

### 2 ಅಕ್ಟೋಬರ್ 2022 (ರವಿವಾರ) ಶೇಷ ವರದಿ
### ಮಸ್ಜಿದ್ ಬೈತುಲ್-ಇಕ್ರಾಮ್‌ಗೆ ಆಗಮನ

ತಮ್ಮ ಪ್ರೀತಿಯ ನೇತಾರರನ್ನು ಸ್ವಾಗತಿಸಲು ಮತ್ತು ಹುಝೂರೆ ಅನ್ವರ್(ಅತಬಿಅ) ಅವರ ಶುಭ ದರ್ಶನ ಪಡೆಯಲು ಡಲ್ಲಾಸ್ ಜಮಾಅತಿನ ಬಾಂಧವರು ಮತ್ತು ಅಮೇರಿಕಾದ ವಿವಿಧ ಕ್ಷೇತ್ರಗಳಿಂದ ಬಂದ ಜಮಾಅತ್ನ ಬಾಂಧವರು ನೂರಾರು ಸಂಖ್ಯೆಯಲ್ಲಿ ಮುಂಜಾನೆಯಿಂದಲೇ "ಮಸ್ಜಿದ್ ಬೈತುಲ್ ಇಕ್ರಾಮ್" ಗೆ ಬರತೊಡಗಿದ್ದರು. ಪುರುಷ-ಸ್ತ್ರೀಯರ, ಮಕ್ಕಳ ವೃದ್ಧರ ಒಂದು ದೊಡ್ಡ ಸಂಖ್ಯೆಯಿತ್ತು, ಅದು ಸಾವಿರಕ್ಕಿಂತಲೂ ಹೆಚ್ಚಾಗಿತ್ತು. ತಮ್ಮ ನೇತಾರರನ್ನು ನೋಡಲು ಆತುರಪಡುತ್ತಿದ್ದರು.

ಡಲ್ಲಾಸ್ ಸ್ಥಳೀಯ ಜಮಾಅತಿನ ಹೊರತಾಗಿ ಈ ಕೆಳಗೆ ಕಾಣಿಸಿದ ವಿವಿಧ ಕ್ಷೇತ್ರಗಳಿಂದ ಬಾಂಧವರು ಆಗಮಿಸಿದ್ದರು.

Houston, Austin, Queens, Forth worth, Tulsa, MAry Land, San Jose, north Verginia, Sandiago, South Virginia, Bay point, Central Jersy, Chicago, Lehigh Valley, Richmind, North Jersy, Port Land, OshKosh, Buffalo, Brooklyn, Milwaki, charlotte, Boston, York, Kansas City, Detroit, Philadelphia, Long Island, Sacramento, Pittsburg, Albany, Albama, Cleveland, Baltimor, Miami, Hawai, Syracus, Phoenix, Tuscana, Georgia.

ಇನ್ನು ಕೆಲವು ಜಮಾಅತುಗಳಿಂದ ಜಮಾಅತ್‌ನ ಬಾಂಧವರು ದೀರ್ಘವಾದ ಪ್ರಯಾಣವನ್ನು ಬಳಿಸಿ ತಮ್ಮ ಪ್ರೀತಿಯ ನೇತಾರರನ್ನು ಸ್ವಾಗತಿಸಲು ಇಲ್ಲಿ ಆಗಮಿಸಿದ್ದರು. ಮೇರಿಲೈಂಡಿನಿಂದ ಬರುವವರು 1367 ಮೈಲು, ಲಾಸ್ ಎಂಜಲಿಸ್‌ನಿಂದ ಬರುವವರು 1433 ಮೈಲು, Queens ನಿಂದ ಬರುವವರು 1578 ಮೈಲು ಮತ್ತು ಸ್ಯಾಟಲ್‌ನಿಂದ 2095 ಮೈಲು ದೀರ್ಘ ದಾರಿಯನ್ನು ಪ್ರಯಾಣಿಸಿ ತಮ್ಮ ಪ್ರೀತಿಯ ನೇತಾರರನ್ನು ನೋಡಲು ಮತ್ತು ಸ್ವಾಗತಿಸಲು ಡಲ್ಲಾಸ್ ತಲುಪಿದ್ದರು.

ಈ ಪುರುಷ ಸ್ತ್ರೀಯರಲ್ಲಿ ಒಂದು ದೊಡ್ಡ ಸಂಖ್ಯೆ ಹುಝೂರೆ ಅನ್ವರ್(ಅತಬಿಅ) ಅವರಿಗೆ ಮೊದಲನೇ ಬಾರಿಗೆ ನೋಡುವವರಾಗಿದ್ದರು. ದರ್ಶನ ಭಾಗ್ಯ ಪಡೆಯಲು ಒಂದೊಂದು ಕ್ಷಣಗಳನ್ನು ಸಹ ಕುತೂಹಲದಿಂದ ನಿರೀಕ್ಷಿಸುತ್ತಿದ್ದರು.

ಕೊನೆಗೆ ಆ ಶುಭ ಘಳಿಗೆ ಬಂದೇ ಬಿಟ್ಟಿತು. ಆಗ ಸರಿಯಾಗಿ 3:50 ಗಂಟೆ ಸಮಯಕ್ಕೆ ಅವರ ವಾಹನ ಮುಖ್ಯದ್ವಾರ ಪ್ರವೇಶಿಸಿತು.

ಹುಝೂರೆ ಅನ್ವರ್(ಅತಬಿಅ) ವಾಹನದಿಂದ ಕೆಳಗೆ ಇಳಿಯುತ್ತಲೇ ಡಲ್ಲಾಸ್ ಜಮಾಅತಿನ ಉಪಾಧ್ಯಕ್ಷರು ಶ್ರೀ ಖಾಲಿದ್ Kirk ಸಾಹಿಬ್ ಡಲ್ಲಾಸಿನ ಆಮಿಲ ಸದಸ್ಯರೊಂದಿಗೆ ಹುಝೂರೆ ಅನ್ವರ್(ಅತಬಿಅ) ಅವರಿಗೆ ಶುಭ ಕೋರಿದರು. ಇನ್ನೊಂದೆಡೆ ಜಮಾಅತ್ ಬಾಂಧವರು ನಿರಂತರವಾಗಿ ಘೋಷ ವಾಕ್ಯಗಳನ್ನು ಉಚ್ಚರಿಸುತ್ತಿದ್ದರು. ಎಲ್ಲಾ ಕಡೆಯಿಂದ ಅಸ್ಸಲಾಮು ಅಲೈಕುಂ ಹುಝೂರ್! "ಇನ್ನಿ ಮಅಕ ಯಾ ಮಸ್ರೂರ್" ಧ್ವನಿಗಳು ಮೊಳಗುತ್ತಿದ್ದವು. ಹುಝೂರೆ ಅನ್ವರ್(ಅತಬಿಅ) ತಮ್ಮ ಕೈಯನ್ನು ಬೀಸುತ್ತಾ ಎಲ್ಲರಿಗೂ ವಅಲೈಕುಂ ಅಸ್ಸಲಾಮ್ ಹೇಳಿದರು. ಎಲ್ಲೆಡೆಯಿಂದ ಜಮಾಅತ್ ಬಾಂಧವರು ಸಹ ಕೈ ಬೀಸುತ್ತಾ ತಮ್ಮ ಸಂತೋಷ ವ್ಯಕ್ತಪಡಿಸುತ್ತಿದ್ದರು. ಪ್ರತಿಯೊಬ್ಬರು ದರ್ಶನ ಭಾಗ್ಯದಿಂದ ಆನಂದಿತರಾಗುತ್ತಿದ್ದರು. ಬಹಳಷ್ಟು ಜನರ ಕಣ್ಣುಗಳು ತೇವಗೊಂಡಿದ್ದರು. ಸ್ತ್ರೀಯರು ಮತ್ತು ಹುಡುಗಿಯರು ದರ್ಶನ ಭಾಗ್ಯ ಪಡೆಯುವ ಜೊತೆಯಲ್ಲಿ ತಮ್ಮ ಕೈಗಳನ್ನು ಬೀಸುತ್ತಾ ತಮ್ಮ ಖಲೀಫರಿಗೆ ಶುಭಾಗಮನ ಹೇಳುತ್ತಿದ್ದರು.

ಹುಝೂರೆ ಅನ್ವರ್(ಅತಬಿಅ) ಅವರ ಡಲ್ಲಾಸ್‌ಗೆ ಇದು ಪ್ರಥಮ ಭೇಟಿಯಾಗಿತ್ತು. ಇಂದು ಡಲ್ಲಾಸ್ ಭೂಮಿಯು ಸಹ ಹಝ್ರತ್ ಅಮೀರುಲ್ ಮುಮಿನೀನರ ಪಾದಸ್ಪರ್ಶ ಭಾಗ್ಯ ಪಡೆದ ಭೂಮಿಗಳಲ್ಲಿ ಸೇರಿಯಾಗಿತ್ತು. ಈಗ ಅಲ್ಲಾಹನ ಅನುಗ್ರಹದಿಂದ ಇಲ್ಲಿಯೂ ಸಹ ಅಭಿವೃದ್ಧಿಯ ಹೊಸ ಮಾರ್ಗಗಳು ತೆರೆಯುವುವು. ಮತ್ತು ಇನ್‌ಶಾಅಲ್ಲಾಹ್ ಯಶಸ್ಸಿನ ಹಾಗೂ ಅಭಿವೃದ್ಧಿಯ ಹೊಸ ಯುಗದ ಪ್ರಾರಂಭವಾಗುವುದು.

ಹುಝೂರೆ ಅನ್ವರ್(ಅತಬಿಅ) ಅವರಿಗೆ ತಂಗಲು ಮಸ್ಜಿದ್ ಬೈತುಲ್ ಇಕ್ರಾಮಿನ ಹೊರಾಂಗಣದಲ್ಲಿರುವ ಅತಿಥಿ ಗೃಹದಲ್ಲಿ ವ್ಯವಸ್ಥೆ ಮಾಡಲಾಗಿತ್ತು. ಹುಝೂರೆ ಅನ್ವರ್(ಅತಬಿಅ) ಜಮಾಅತ್ ಬಾಂಧವರ ಸಾಗುತ್ತ ತಮ್ಮ ವಸತಿ ಜಾಗಕ್ಕೆ ತಲುಪಿದರು.

ಹುಝೂರೆ ಅನ್ವರ್(ಅತಬಿಅ) ಇಂದು 5.15 ಗಂಟೆಗೆ ಮಸ್ಜಿದ್ ಬೈತುಲ್ ಇಕ್ರಮ್ ಆಗಮಿಸಿ ಝುಹರ್ ಅಸರ್ ನಮಾಝುಗಳನ್ನು ಜಮಾ ಮಾಡಿ ನಿರ್ವಹಿಸಿಕೊಟ್ಟರು. ನಮಾಝ್ ನಿರ್ವಹಿಸಿದ ನಂತರ ಮರಳಿ ತಮ್ಮ ವಸತಿಗೆ ಹೋಗುವಾಗ ಹುಝೂರೆ ಅನ್ವರ್(ಅತಬಿಅ) ಇಲ್ಲಿಯ ಉಪಹಾರ ಗೃಹಕ್ಕೆ ಆಗಮಿಸಿದರು. ಆಗ ಅಡುಗೆಯ ಕೆಲಸ ನಡೆಯುತ್ತಿತ್ತು. ಜಮಾಅತ್ ಬಾಂಧವರಿಗೆ ಊಟ ತಯಾರಾಗುತ್ತಿತ್ತು.

ಹುಝೂರೆ ಅನ್ವರ್(ಅತಬಿಅ) ಅವರಿಂದ ಊಟದ ಬಗ್ಗೆ, ಅದರ ಪ್ರಮಾಣದ ಬಗ್ಗೆ ವಿಚಾರಿಸಿದರು. ಮತ್ತು ಹೇಳಿದರು. ನೀವು ಉಪಯೋಗಿಸುವ ಪಾತ್ರೆಗಳು ಚಿಕ್ಕ ಸೈಜ್ ನದ್ದಾಗಿವೆ ಎಂದಾಗ ವ್ಯವಸ್ಥಾಪಕರು ಹೇಳಿದರು. ನಾವು ಇಲ್ಲಿ ಒಂದು ಸಾವಿರ ಜನರಿಗೆ ಆಗುವಷ್ಟು ಊಟ ತಯಾರು ಮಾಡುತ್ತೇವೆ. ಇದರ ಪರಿಶೀಲನೆಯ ನಂತರ ಹುಝೂರೆ ಅನ್ವರ್(ಅತಬಿಅ) ತಮ್ಮ ವಸತಿಯತ್ತ ತೆರಳಿದರು.

"ಮಸೀದಿ ಮತ್ತು ಅದಕ್ಕೆ ಸಂಬಂಧಿಸಿದ ಕ್ಷೇತ್ರ ಶೃಂಗಾರ " ಮಸ್ಜಿದ್ ಬೈತುಲ್ ಇಕ್ರಾಮ್ ಮತ್ತು ಅದಕ್ಕೆ ಸಂಬಂಧಿಸಿದ ಕಛೇರಿಗಳನ್ನು ಬಣ್ಣಗಳ ವಿದ್ಯುತ್ ಬಲ್ಬುಗಳಿಂದ ಶೃಂಗರಿಸಲಾಗಿತ್ತು. ಹುಝೂರೆ ಅನ್ವರ್(ಅತಬಿಅ) ಅವರ ವಸತಿ ಗೃಹವನ್ನು ಸಹ ದೀಪಾಲಂಕಾರ ಮಾಡಲಾಗಿತ್ತು. ದಿನ ಮುಸುಕುಗೊಳ್ಳುತ್ತಿದ್ದಂತೆ ನಾಲ್ಕು ಎಕರೆ ವಿಸ್ತೀರ್ಣ ಪಡೆದ ಈ ಕೇಂದ್ರ ಪ್ರಕಾಶಮಯಗೊಳ್ಳುತ್ತದೆ. ಅದು ಒಂದು ಅತ್ಯಂತ ಸುಂದರವದ ನೋಟ ಬೀರುವಂತಿತ್ತು. ಜಮಾಅತಿನ ಈ ಕೇಂದ್ರ Highway ಮೇಲಿದೆ. ಸಾವಿರಾರು ಜನರು ಇಲ್ಲಿಂದ ಪ್ರಯಾಣಿಸುತ್ತಾ ಈ ನೋಟ ಸಂದರ್ಶಿಸುತ್ತಿದ್ದರು.

ಹುಝೂರೆ ಅನ್ವರ್(ಅತಬಿಅ) 8 ವರೆ ಗಂಟೆಗೆ ಮಸ್ಜಿದ್ ಬೈತುಲ್ ಇಕ್ರಾಮ್ ಆಗಮಿಸಿ ಮಗ್ರಿಬ್ ಮತ್ತು ಇಶಾಅ ನಮಾಝುಗಳನ್ನು ಜಮಾ ಮಾಡಿ ನಿರ್ವಹಿಸಿಕೊಟ್ಟರು. ನಮಾಝ್ ನಿರ್ವಹಣೆಯ ನಂತರ ಹುಝೂರೆ ಅನ್ವರ್(ಅತಬಿಅ) ತಮ್ಮ ವಸತಿಯತ್ತ ತೆರಳಿದರು.

ಹುಝೂರೆ ಅನ್ವರ್(ಅತಬಿಅ) ಅವರ ಈ Zion ಪ್ರವಾಸ ಮತ್ತು ಫತಹ ಅಝೀಮ್ ಕುರಿತು ಒಂದು ನಿಬಂಧ ಪ್ರಕಟಿಸಿತು. ಅದರ ಶೀರ್ಷಿಕೆ "To prophets, century old prayer duel inspire zion mosque" ಎಂದರೆ "ಎರಡು ಪ್ರವಾದಿಗಳ ಮಧ್ಯೆ ಶತಮಾನಗಳಷ್ಟು ಹಳೆಯ ಮುಬಾಹಲ, Zion ಮಸೀದಿಯ ಮುನ್ನುಡಿಯಾಗಿದೆ.

ಈ ಸುದ್ದಿ ಮಾಧ್ಯಮದ website ಅನ್ವಯ ಸುಮಾರು ಪ್ರಪಂಚದ ಅರ್ಧದಷ್ಟು ಜನಸಂಖ್ಯೆ ಇದರ ಓದುಗರರಾಗಿದ್ದಾರೆ.

ಇದಾದ ನಂತರ ಈ ನಿಂಬಂಧ ಒಟ್ಟು ಲೋಕದ 13 ರಾಷ್ಟ್ರಗಳ 412 Outlets ಮತ್ತು ವಾರ್ತಾ ಪತ್ರಿಕೆಗಳಲ್ಲಿ ಸೇರಿತು, ಅದರಲ್ಲಿ ಈ ಪ್ರಬಂಧ (Wasington post) ABC News ಟೋರಂಟೊ ಸ್ಟಾರ್, The Hill ಮತ್ತು ಇತರ ಹಲವು ಪ್ರಸಿದ್ಧ ಪತ್ರಿಕೆಗಳಾಗಿವೆ. ಈ Associated press ನ ಹತ್ತು Top ಪ್ರಸಿದ್ಧ ಪ್ರಬಂಧಗಳಲ್ಲಿ ಒಂದಾಗಿತ್ತು. **(ಮುಂದುವರಿಯುವುದು)**

**ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:**
**NATIONAL TOLL FREE : 1800-103-2131**
**ಸಮಯ: ಬೆಳಿಗ್ಗೆ 08:30 ಯಿಂದ ರಾತ್ರಿ 10:30ಯವರೆಗೆ**
**(ಶುಕ್ರವಾರ ರಜೆ)**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.